

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


47

ಮೇ 27 ಬುಧವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 41 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಅಧಿಕಾರ ತ್ಯಾಗಕ್ಕೆ ಸಿದ್ಧರಾದ್ರಾ ಸಿಎಂ ಸಿದ್ದರಾಮಯ್ಯ...!?

ಗುರುವಾರ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆಂದು ಚಾನೆಲ್‌ಗಳಲ್ಲಿ ವರದಿ

■ ಇಂದು ಬೆಂಗಳೂರಿಗೆ ಕೆ.ಸಿ. ವೇಣುಗೋಪಾಲ್, ಸುರ್ಜೇವಾಲ; ಶಾಸಕರು, ಸಚಿವರೊಂದಿಗೆ ಸಮಾಲೋಚನೆ ■ ಇಂದು ಸಿದ್ದರಾಮಯ್ಯ ಬೆಂಗಳೂರಲ್ಲಿ ಪತ್ರಿಕಾಗೋಷ್ಠಿ; ಹೈಕಮಾಂಡ್ ನೊಟ್ಟಿಗೆ ನಡೆದ ಮಾತುಕತೆ, ಮುಂದಿನ ನಿರ್ಧಾರದ ಬಗ್ಗೆ ವಿವರಣೆ ಸಾಧ್ಯತೆ; ಸಚಿವರೊಟ್ಟಿಗೆ ಬ್ರೇಕ್‌ಫಾಸ್ಟ್ ಮೀಟಿಂಗ್ ■ ನವದೆಹಲಿಯಲ್ಲಿ 7 ಗಂಟೆಗಳ ಕಾಲ ವಿವಿಧ ಹಂತದಲ್ಲಿ ಹೈಕಮಾಂಡ್‌ನೊಟ್ಟಿಗೆ ನಡೆದ ಮಾತುಕತೆ ಬಳಿಕ ರಾಜ್ಯ ರಾಜಕಾರಣದಲ್ಲಿ ಹಠಾತ್ ಬೆಳವಣಿಗೆ

ಬೆಂಗಳೂರು, ಮೇ 26(ಕೆಎಂಶಿ)– ಅಧಿಕಾರ ಹಸ್ತಾಂತರ ಕುರಿತಂತೆ ರಾಜ್ಯ ಕಾಂಗ್ರೆಸ್‌ನಲ್ಲಿ ಕಳೆದ ಕೆಲವಾರು ತಿಂಗಳಿನಿಂದ ನಡೆಯುತ್ತಿದ್ದ ಹಗ್ಗ ಜಗ್ಗಾಟಕ್ಕೆ ತೆರೆ ಎಳೆಯಲು ಮುಂದಾಗಿರುವ ಹೈಕಮಾಂಡ್, ಅಧಿಕಾರ ತ್ಯಾಗಕ್ಕೆ ಸಿದ್ಧರಾಗುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೂಚನೆ ನೀಡಿದೆ ಎಂದು ಬಲ್ಲ ಮೂಲಗಳು ತಿಳಿಸಿವೆ. ಅದರಂತೆ ಸಿದ್ದರಾಮಯ್ಯನವರು ಗುರುವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ ಎಂದು ಹಲವು ಚಾನೆಲ್‌ಗಳು ವರದಿ ಮಾಡಿವೆ.

ಇಂದು ಬೆಳಗ್ಗೆಯಿಂದ ಎಐಸಿಸಿ ಕಚೇರಿಯಲ್ಲಿ ಸತತ 7 ಗಂಟೆಗಳ ನಿರಂತರ ಸಭೆ ಬಳಿಕ, ದೆಹಲಿಯಲ್ಲಿನ ಸಚಿವ ಜಾರ್ಜ್ ನಿವಾಸದಲ್ಲಿ ಆಪ್ತ ಸಚಿವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆ ನಡೆಸಿದರು. ನಂತರ ಇಂದು ರಾತ್ರಿ 12.15ಕ್ಕೆ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ವಾಪಸ್ಸಾಗಿದ್ದು, ನಾಳೆ (ಬುಧವಾರ) ಮಹತ್ವದ ಪತ್ರಿಕಾಗೋಷ್ಠಿ ಕರೆದಿದ್ದಾರೆ. ಈ ಮಧ್ಯೆ ನಾಳೆ ರಣದೀಪ್‌ಸಿಂಗ್ ಸುರ್ಜೇವಾಲಾ ಹಾಗೂ ಕೆ.ಸಿ. ವೇಣುಗೋಪಾಲ್ ಬೆಂಗಳೂರಿಗೆ ಆಗಮಿಸುತ್ತಿದ್ದಾರೆ.


ಮುಖ್ಯಮಂತ್ರಿ ಸಿದ್ದರಾಮಯ್ಯ

ರಾಹುಲ್‌ಗಾಂಧಿ ಮಧ್ಯ ಪ್ರವೇಶ

ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಮೂರು ವರ್ಷ ಪೂರ್ಣಗೊಳಿಸಿದ ಬೆನ್ನಲ್ಲೇ ಅಧಿಕಾರ ಹಸ್ತಾಂತರ ಮತ್ತು ಸಂಪುಟ ಪುನಾರಚನೆ ವಿಚಾರಗಳು ದೊಡ್ಡ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗಿದ್ದವು. ಇದರಿಂದ ಸರ್ಕಾರ ಮತ್ತು ಪಕ್ಷ ಸಂಘಟನೆ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಮಧ್ಯಪ್ರವೇಶ ಮಾಡಿದ್ದಾರೆ.

ಮುಂದಿನ ತಿಂಗಳು ನಡೆಯಲಿರುವ ರಾಜ್ಯಸಭೆ ಮತ್ತು ವಿಧಾನ ಪರಿಷತ್ ಚುನಾವಣೆಯ ಅಭ್ಯರ್ಥಿಗಳ ಆಯ್ಕೆ ಕುರಿತು ಚರ್ಚೆಗೆ ಬರುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರನ್ನು ದೆಹಲಿಗೆ ಆಹ್ವಾನಿಸಿದ ರಾಹುಲ್ ಗಾಂಧಿ, ಮೊದಲಿಗೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ನಾಯಕ ರಣದೀಪ್ ಸಿಂಗ್ ಸುರ್ಜೇವಾಲಾ ಅವರೊಂದಿಗೆ ರಾಜ್ಯ ಕಾಂಗ್ರೆಸ್ ವಿದ್ಯಮಾನಗಳ ಕುರಿತು ಸುದೀರ್ಘ ಮಾತುಕತೆ ನಡೆಸಿದರು.

ಈ ವೇಳೆ ಸುರ್ಜೇವಾಲಾ ಅವರು ರಾಜ್ಯ ಸರ್ಕಾರದ ಸಾಧನೆಗಳು, ಆಡಳಿತ ವಿರೋಧಿ ಅಲೆ ಕುರಿತಂತೆಯೂ ವರದಿ ಸಲ್ಲಿಸಿದ್ದಾರೆ. ಇದರ ಜೊತೆಯಲ್ಲಿಯೇ ಪಕ್ಷ ಸಂಘಟನೆಯ ಕುರಿತಾಗಿಯೂ ಸಮಗ್ರ ವರದಿ ನೀಡಿದ್ದಾರೆ. ಜೊತೆಗೆ ರಾಜ್ಯಸಭೆ ಮತ್ತು ವಿಧಾನ ಪರಿಷತ್ ಚುನಾವಣೆಗೆ ಯಾರನ್ನು ಅಭ್ಯರ್ಥಿಗಳನ್ನಾಗಿ ಮಾಡಬೇಕು ಎಂಬ ವಿಚಾರದಲ್ಲಿ ರಾಜ್ಯ ಕಾಂಗ್ರೆಸ್ ನಾಯಕರ ಅಭಿಪ್ರಾಯಗಳನ್ನು ವರದಿ ರೂಪದಲ್ಲಿ ನೀಡಿದ್ದಾರೆ.

ಈ ವರದಿಯನ್ನು ಪರಾಮರ್ಶಿಸಿದ ರಾಹುಲ್ ಗಾಂಧಿ ನಂತರ ಎಐಸಿಸಿ ಸಂಘಟನಾ ಕಾರ್ಯದರ್ಶಿ ವೇಣುಗೋಪಾಲ್ ಅವರೊಂದಿಗೆ ಚರ್ಚೆ ನಡೆಸಿದರು. ಬಳಿಕ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಸುದೀರ್ಘ ಸಮಾಲೋಚನೆ ನಡೆಸಿದರು. ಈ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಪಾಲ್ಗೊಂಡರು.

ರಾಷ್ಟ್ರ ರಾಜಕಾರಣಕ್ಕೆ ಆಹ್ವಾನ

ಇದಾದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ರಾಹುಲ್‌ಗಾಂಧಿ ಅವರು ಅರ್ಧ ಗಂಟೆಗೂ ಹೆಚ್ಚು ಕಾಲ ಪ್ರತ್ಯೇಕವಾಗಿ ಮಾತುಕತೆ ನಡೆಸಿದರು. ಈ ವೇಳೆ ಸಿದ್ದರಾಮಯ್ಯ ■ 6ನೇ ಪುಟಕ್ಕೆ

ರಾಜ್ಯಸಭಾ, ವಿಧಾನ ಪರಿಷತ್ ಚುನಾವಣೆ ಬಗ್ಗೆ ಮಾತ್ರ ಚರ್ಚೆ!

ನವದೆಹಲಿ: ಕರ್ನಾಟಕ ಕಾಂಗ್ರೆಸ್ ನಾಯಕರ ಹೈಕಮಾಂಡ್ ಸಭೆಯ ಬೆನ್ನಲ್ಲೇ ಎದ್ದಿದ್ದ ಹಲವು ರಾಜಕೀಯ ಚರ್ಚೆಗಳು ಹಾಗೂ ವದಂತಿಗಳಿಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತೆರೆ ಎಳೆದಿದ್ದಾರೆ. ಇಂದು ದೆಹಲಿಯಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಭೆಯಲ್ಲಿ ಕೇವಲ ಮುಂಬರುವ ಚುನಾವಣೆಗಳ ಬಗ್ಗೆ ಮಾತ್ರ ಚರ್ಚಿಸಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರೊಂದಿಗೆ ಜಂಟಿ ಸುದ್ದಿಗೋಷ್ಠಿ ನಡೆಸಿ ಅವರು ಸಭೆಯ ವಿವರಗಳನ್ನು ಹಂಚಿಕೊಂಡಿದ್ದಾರೆ.


ದಿನವಿಡೀ ಸಭೆ ಬಳಿಕ ಎಐಸಿಸಿ ಸಂಘಟನಾ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮಾಧ್ಯಮದವರಿಗೆ ಮಾಹಿತಿ ನೀಡಿದರು. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉಪಸ್ಥಿತರಿದ್ದಾರೆ.

ವೇಣುಗೋಪಾಲ್ ಹೇಳಿದ್ದೇನು: ನಾವು ಇಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ಮಹತ್ವದ ಸಭೆ ನಡೆಸಿದ್ದೇವೆ. ಈ ಉನ್ನತ ■ 6ನೇ ಪುಟಕ್ಕೆ

ಹೈಕಮಾಂಡ್ ಅಂಗಳದಲ್ಲಿ ಡಿಕೆಶಿಯ ಮೂರು ಸ್ಫೋಟಕ ಷರತ್ತು!

ನವದೆಹಲಿ: ದೆಹಲಿಯ ಎಐಸಿಸಿ ಕಚೇರಿಯಲ್ಲಿ ನಡೆಯುತ್ತಿರುವ ಹೈವೋಲ್ಟೇಜ್ ಸಭೆ ಈಗ ಕ್ಲೈಮ್ಯಾಕ್ಸ್ ಹಂತಕ್ಕೆ ತಲುಪಿದೆ. ಹೈಕಮಾಂಡ್ ನಾಯಕರ ಸಮ್ಮುಖದಲ್ಲೇ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೊಟ್ಟ ಮಾತು ಉಳಿಸಿಕೊಳ್ಳಿ ಎಂದು ಸಿಂಹಗರ್ಜನೆ ಮಾಡಿದ್ದಾರೆ.



ಅಧಿಕಾರ ಹಂಚಿಕೆಯ ಸೂತ್ರವನ್ನು ಮುಂದಿಟ್ಟುಕೊಂಡು ಡಿಕೆಶಿ ಹೈಕಮಾಂಡ್ ಅಂಗಳದಲ್ಲಿ 3 ಸ್ಫೋಟಕ ಷರತ್ತುಗಳನ್ನು ವಿಧಿಸಿ ಬಿಗಿಪಟ್ಟು ಹಿಡಿದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಡಿಕೆಶಿ ಅವರ ಈ ಖಡಕ್ ನಿಲುವು ಹೈಕಮಾಂಡ್ ನಾಯಕರನ್ನೂ ಧರ್ಮಸಂಕಟಕ್ಕೆ ಸಿಲುಕಿಸಿದೆ.

ಷರತ್ತು 1: ಕೊಟ್ಟ ಮಾತು ಮುರಿಯಬೇಡಿ!ಕರ್ನಾಟಕದಲ್ಲಿ ಸರ್ಕಾರ ರಚನೆಯಾಗುವಾಗ ಅಧಿಕಾರ ಹಂಚಿಕೆ ವಿಚಾರದಲ್ಲಿ ಏನು ಮಾತುಕತೆಯಾಗಿತ್ತೋ ಆ ಮಾತನ್ನು ಸಿಎಂ ಸಿದ್ದರಾಮಯ್ಯ ಹಾಗೂ ಹೈಕಮಾಂಡ್ ಇಬ್ಬರೂ ಉಳಿಸಿಕೊಳ್ಳಬೇಕು. ಕಾಲಮಿತಿ ಮುಗಿದಿದ್ದು, ಈಗ ನಾಯಕತ್ವ ಬದಲಾವಣೆ ಆಗಲೇಬೇಕು.

ಷರತ್ತು 2: ಆಗಲ್ಲಾ ಅಂದರೆ ಬಹಿರಂಗವಾಗಿ ಹೇಳಿ, ಗೊಂದಲಕ್ಕೆ ತೆರೆ ಎಳೆಯಿರಿ. ಒಂದು ವೇಳೆ ಸಿದ್ದರಾಮಯ್ಯ ಅವರನ್ನೇ ಸಿಎಂ ಆಗಿ ಮುಂದುವರಿಸಲು ನಿರ್ಧರಿಸಿದ್ದರೆ ಮತ್ತು ಕೊಟ್ಟ ಮಾತು ಈಡೇರಿಸಲು ಆಗುತ್ತಿಲ್ಲ ಎಂದಾದರೆ, ಅದನ್ನು ಹೈಕಮಾಂಡ್ ಹಾಗೂ ಸಿಎಂ ಇಬ್ಬರೂ ಜಂಟಿಯಾಗಿ ಮಾಧ್ಯಮಗಳ ಮುಂದೆ ಬಹಿರಂಗವಾಗಿ ಒಪ್ಪಿಕೊಳ್ಳಲಿ. ದಿನನಿತ್ಯದ ಈ ಗೊಂದಲಕ್ಕೆ ಮತ್ತು ಕಾರ್ಯಕರ್ತರ ಆತಂಕಕ್ಕೆ ತಕ್ಷಣ ತೆರೆ ಎಳೆಯಿರಿ.

ಷರತ್ತು 3: ನನಗೆ ಯಾವ ಹುದ್ದೆಯೂ ಬೇಡ, ಸಾಮಾನ್ಯ ಕಾರ್ಯಕರ್ತನಾಗಿರುತ್ತೇನೆ. ಕೊಟ್ಟ ಮಾತು ಉಳಿಸಿಕೊಳ್ಳದಿದ್ದರೆ ನನಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನವೂ ಬೇಡ, ಉಪಮುಖ್ಯಮಂತ್ರಿ ಪಟ್ಟವೂ ಬೇಡ. ಎರಡೂ ಸ್ಥಾನಗಳಿಗೂ ನಾನು ರಾಜೀನಾಮೆ ನೀಡಲು ಸಿದ್ಧ. ನಾನು ಸಾಮಾನ್ಯ ಕಾರ್ಯಕರ್ತನಾಗಿ ಪಕ್ಷದ ಕೆಲಸ ಮಾಡುತ್ತೇನೆ.

ಈ ಮೂರು ಷರತ್ತುಗಳನ್ನು ಹೈಕಮಾಂಡ್ ನಾಯಕರ ಮುಂದಿಟ್ಟ ಡಿ.ಕೆ.ಶಿವಕುಮಾರ್, ಇದು ನನ್ನ ಅಂತಿಮ ನಿಲುವು. ಈಗ ಯಾವ ನಿರ್ಧಾರ ತೆಗೆದುಕೊಳ್ಳುತ್ತೀರೋ, ಬಿಡುತ್ತೀರೋ ಅದು ನಿಮಗೆ ಬಿಟ್ಟಿದ್ದು ಎಂದು ನೇರವಾಗಿಯೇ ಹೇಳಿದ್ದಾರೆ.

ದ್ವೇಷ ಭಾಷಣ ಮಸೂದೆಗೆ ಕೇಂದ್ರದ ಬ್ರೇಕ್

ಬೆಂಗಳೂರು: ರಾಜ್ಯದಲ್ಲಿ ದ್ವೇಷ ಭಾಷಣ ವನ್ನು ನಿಗ್ರಹಿಸುವ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳು(ತಡೆಗಟ್ಟುವಿಕೆ) ಮಸೂದೆ, 2025 ಅನ್ನು ರಾಜ್ಯ ಸರ್ಕಾರ ಈಗಾಗಲೇ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಅಂಗೀಕರಿಸಿ ಅನುಮೋದನೆಗಾಗಿ ರಾಜ್ಯಪಾಲರಿಗೆ ಕಳುಹಿಸಿದೆ. ಆದರೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಇದಕ್ಕೆ ಇನ್ನೂ ಸಹಿ ಹಾಕಿಲ್ಲ.

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಅನುಮೋದನೆ ನೀಡಲು ನಿರಾಕರಿಸಿದ ನಂತರ, ಕರ್ನಾಟಕ ಸರ್ಕಾರವು ಫೆಬ್ರವರಿಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಒಪ್ಪಿಗೆಗಾಗಿ ಮಸೂದೆಯನ್ನು ಗೃಹ ಸಚಿವಾಲಯಕ್ಕೆ ಕಳುಹಿಸಿದೆ. ಇದೀಗ ರಾಜ್ಯ ಸರ್ಕಾರದ ದ್ವೇಷ ಭಾಷಣ ಮಸೂದೆಗೆ ಕೇಂದ್ರ ಸರ್ಕಾರ ಅಡ್ಡಗಾಲು ಹಾಕಿದ್ದು, ಈ ಹಂತದಲ್ಲಿ ಮಸೂದೆ ಅಗತ್ಯವಿಲ್ಲ ಮತ್ತು ಅಸ್ತಿತ್ವದಲ್ಲಿರುವ ಕಾನೂನು ಚೌಕಟ್ಟು ಈ ■ 6ನೇ ಪುಟಕ್ಕೆ

ಫೈನಲ್ಸ್‌ಗೆ ರಾಯಲ್ ಎಂಟ್ರಿ ಕೊಟ್ಟ ಆರ್‌ಸಿಬಿ

● ಜಿಟಿಗೆ 92 ರನ್‌ಗಳ ಹೀನಾಯ ಸೋಲು; ಕ್ವಾಲಿಫೈಯರ್–2ರಲ್ಲಿ ಸತ್ವ ಪರೀಕ್ಷೆ ● ನಾಯಕ ಪಾಟೀದರ್ ಅಜೇಯ ಆಟ ● ಮೋಡಿ ಮಾಡಿದ ಡಫಿ–ಸಲಾಂ ದರ್ ಬೌಲಿಂಗ್ ● ಆರ್‌ಸಿಬಿ 254/5–ಜಿಟಿ 162/10

ಧರ್ಮಶಾಲಾ, ಮೇ 26(ವಿವಿಹೆಚ್)– ನಾಯಕ ರಜತ್ ಪಾಟೀದರ್ ಅಜೇಯ ಬ್ಯಾಟಿಂಗ್ ಪ್ರದರ್ಶನ, ಜಾಕೋಬ್ ಡಫಿ ಹಾಗೂ ರಸಿಕ್ ಸಲಾಂ ದರ್ ಅವರ ಬೌಲಿಂಗ್ ದಾಳಿ ನೆರವಿನಿಂದ ಬಲಿಷ್ಠ ಗುಜರಾತ್ ಟೈಟನ್ಸ್ ತಂಡವನ್ನು 92 ರನ್‌ಗಳಿಂದ ಮಣಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು 2026ರ ಐಪಿಎಲ್ ಫೈನಲ್ಸ್‌ಗೆ ಎಂಟ್ರಿಕೊಟ್ಟಿದೆ.

ಇತ್ತ ಆರ್‌ಸಿಬಿ ಎದುರು ಹೀನಾಯವಾಗಿ ಸೋತ ಜಿಟಿಗೆ ಮತ್ತೊಂದು ಅವಕಾಶವಿದ್ದು, ನಾಳೆ ಎಸ್‌ಆರ್‌ಹೆಚ್ ಹಾಗೂ ಆರ್‌ಆರ್ ನಡುವೆ ನಡೆಯುವ ಪಂದ್ಯದಲ್ಲಿ ಗೆಲ್ಲುವ ತಂಡದೊಂದಿಗೆ ಶುಕ್ರವಾರ ಕ್ವಾಲಿಫೈಯರ್–2ರಲ್ಲಿ ಸೆಣಸಾಡಲಿದ್ದು, ಗೆದ್ದ ತಂಡ ಫೈನಲ್ಸ್‌ನಲ್ಲಿ ಆರ್‌ಸಿಬಿಯೊಂದಿಗೆ ಟ್ರೋಫಿಗಾಗಿ ಕಾದಾಡಲಿದೆ.



ಇಲ್ಲಿನ ಹಿಮಾಚಲ ಪ್ರದೇಶ್ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಐಪಿಎಲ್–2026ರ ಕ್ವಾಲಿಫೈಯರ್–1 ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ ನಾಯಕ ರಜತ್ ಪಾಟೀದರ್ ತಮ್ಮ ಅಬ್ಬರದ ಬ್ಯಾಟಿಂಗ್ ಬಲದಿಂದ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 254ರನ್ ಪೇರಿಸಿತು. ಈ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಜಿಟಿ 19.3 ಓವರ್‌ಗಳಲ್ಲಿ ಸರ್ವಪತನ ಕಂಡು 162 ರನ್ ಗಳಿಸಲಷ್ಟೆ ಶಕ್ತವಾಯಿತು. ಮೊದಲು ಬ್ಯಾಟಿಂಗ್ ಮಾಡುವ ಅವಕಾಶ ಪಡೆದ ಆರ್‌ಸಿಬಿಗೆ ವೆಂಕಟೇಶ್ ಅಯ್ಯರ್ 19(7) ಹಾಗೂ ವಿರಾಟ್ ಕೊಹ್ಲಿ 43(25) ■ 6ನೇ ಪುಟಕ್ಕೆ

ಮೈಸೂರಿನ ಇಲವಾಲ ಬಳಿ ಸಿಡಿಲು ಬಡಿದು ಕೊಡಗು ಮೂಲದ ಟೆಕ್ಕಿ ದುರ್ಮರಣ

ಮೈಸೂರು, ಮೇ 26(ಎಂಟಿವೈ)– ಸಿಡಿಲು ಬಡಿದ ಪರಿಣಾಮ ನಿವೇಶನ ವೀಕ್ಷಿಸುತ್ತಿದ್ದ ಕೊಡಗು ಮೂಲದ ಐಟಿ ಉದ್ಯೋಗಿಯೊಬ್ಬರು ಮೃತಪಟ್ಟಿರುವ ಘಟನೆ ಮೈಸೂರಿನ ಇಲವಾಲದಲ್ಲಿ ಸೋಮವಾರ ಸಂಜೆ ನಡೆದಿದೆ.



ಕೊಡಗು ಜಿಲ್ಲೆ, ಮಡಿಕೇರಿ ಜಲಾಶಯ ಬಡಾವಣೆಯ ನಿವಾಸಿ ನಿವೃತ್ತ ಅಬಕಾರಿ ಅಧಿಕಾರಿ ದಿವಂಗತ ಬಾಲಕೃಷ್ಣ ಅವರ ಪುತ್ರ ಹೊಸೊಕ್ಲು ರೋಷನ್(43) ಸಿಡಿಲು ಬಡಿದು ಮೃತಪಟ್ಟವರು. ಬೆಂಗಳೂರಿನ ಐಟಿ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿದ್ದ ಅವರು ವರ್ಕ್ ಫ್ರಂ ಹೋಮ್ ಹಿನ್ನೆಲೆಯಲ್ಲಿ ವೃತ್ತಿ ಜೊತೆಗೆ ತಮ್ಮ ಕುಟುಂಬದ ಕಾಫಿ ತೋಟದ ನಿರ್ವಹಣೆಯನ್ನೂ ನೋಡಿಕೊಳ್ಳುತ್ತಿದ್ದರು.

ಮಡಿಕೇರಿಯಿಂದ ತಮ್ಮ ಕುಟುಂಬದವರೊಂದಿಗೆ ಮೈಸೂರಿಗೆ ಆಗಮಿಸಿದ್ದ ರೋಷನ್, ಸೋಮವಾರ ಸಂಜೆ ಸುಮಾರು 5 ಗಂಟೆ ಸಮಯದಲ್ಲಿ ಇಲವಾಲದ ಬಳಿಯಿರುವ ತಮ್ಮ ನಿವೇಶನವನ್ನು ವೀಕ್ಷಿಸುತ್ತಿದ್ದರು. ಬಳಿಕ ಅಲ್ಲಿಯೇ ಇದ್ದ ಮಾವಿನ ಮರದ ಬಳಿ ತೆರಳಿ ಹಣ್ಣು ಕೀಳುವಾಗ ಈ ಅವಘಡ ಸಂಭವಿಸಿದೆ.

ಆ ವೇಳೆ ಮಳೆ ಬಾರದಿದ್ದರೂ ಗುಡುಗು–ಮಿಂಚು ಜೋರಾಗಿತ್ತು. ನಿವೇಶನ ವೀಕ್ಷಣೆ ಬಳಿಕ ಮಾವಿನ ಹಣ್ಣು ಕೀಳುವ ವೇಳೆ ಪಕ್ಕದ ತೆಂಗಿನ ಮರಕ್ಕೆ ಸಿಡಿಲು ಬಡಿದಿದೆ. ಸಿಡಿಲಾ ಘಾತಕ್ಕೆ ಕುಸಿದು ಬಿದ್ದು, ನಿತ್ರಾಣಗೊಂಡಿದ್ದ ರೋಷನ್ ಅವರನ್ನು ಸ್ಥಳೀಯರ ನೆರವಿನೊಂದಿಗೆ ಹತ್ತಿರದ ಎನ್‌ಜೆ ಆಸ್ಪತ್ರೆಗೆ, ನಂತರ ಜಯದೇವ ಹೃದ್ರೋಗ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಆದರೆ, ಪರೀಕ್ಷಿಸಿದ ವೈದ್ಯರು ರೋಷನ್ ಮೃತಪಟ್ಟಿರುವುದಾಗಿ ಖಚಿತಪಡಿಸಿದ್ದಾರೆ.

ಬಳಿಕ ಮೃತದೇಹವನ್ನು ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಯ ಶವಾಗಾರಕ್ಕೆ ಸ್ಥಳಾಂತರಿಸಲಾಯಿತು. ಮಂಗಳವಾರ ಬೆಳಗ್ಗೆ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ರೋಷನ್ ಪಾರ್ಥೀವ ಶರೀರವನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಸಂಜೆ ವೇಳೆಗೆ ಮಡಿಕೇರಿಯ ಹೆರವನಾಡುವಿನಲ್ಲಿ ಕುಟುಂಬದ ಸದಸ್ಯರು, ಬಂಧು–ಬಳಗ ಹಾಗೂ ಅಪಾರ ಸ್ನೇಹಿತರ ■ 6ನೇ ಪುಟಕ್ಕೆ

‘ಕಾಂತಾರ’ ಚಿತ್ರದ ದೈವಪಾತ್ರವನ್ನು ಅಪಮಾನಿಸಿದ ಆರೋಪ


ನ್ಯಾಯಾಲಯದ ನಿರ್ದೇಶನದಂತೆ ಚಾಮುಂಡೇಶ್ವರಿ ದರ್ಶನ ಪಡೆದ ಬಾಲಿವುಡ್ ನಟ ರಣವೀರ್ ಸಿಂಗ್

ಮೈಸೂರು, ಮೇ 26(ಎಂಟಿವೈ)– ಕಾಂತಾರ ಚಾಪ್ಟರ್–1 ಚಿತ್ರದ ದೈವಪಾತ್ರವನ್ನು ಅಪಮಾನಿಸುವಂತೆ ಸನ್ನೆ ಮಾಡಿ ಎಲ್ಲರ ಕೆಂಗಣ್ಣಿಗೆ ಗುರಿಯಾಗಿದ್ದ ಬಾಲಿವುಡ್ ನಟ ರಣವೀರ್ ಸಿಂಗ್, ಹೈಕೋರ್ಟ್ ನಿರ್ದೇಶನದ ಮೇರೆಗೆ ಮಂಗಳವಾರ ಚಾಮುಂಡಿ ಬೆಟ್ಟಕ್ಕೆ ಸಾಮಾನ್ಯರಲ್ಲಿ ಸಾಮಾನ್ಯರಂತೆ ಭೇಟಿ ನೀಡಿ, ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿ, ಭಾವುಕರಾಗಿ ಪ್ರಾರ್ಥನೆ ಸಲ್ಲಿಸಿದರು.

ಮುಖಕ್ಕೆ ಮಾಸ್ಕ್ ಧರಿಸಿ ನಟ ರಣವೀರ್ ಸಿಂಗ್ ಮಂಗಳವಾರ ಬೆಳಗ್ಗೆ ಚಾಮುಂಡಿಬೆಟ್ಟಕ್ಕೆ ಆಗಮಿಸಿ, ಯಾರಿಗೂ ಅರಿವಾಗದಂತೆ ಭಕ್ತರೊಂದಿಗೆ ಸರದಿಯಲ್ಲಿ ನಿಂತು ದೇವಿಯ ದರ್ಶನ ಪಡೆದರು. ಗರ್ಭಗುಡಿ ಬಳಿ ಬಂದಾಗ ಅಲ್ಲಿದ್ದ ಸಿಬ್ಬಂದಿಗೆ 'ನಾನು ನಟ ರಣವೀರ್ ಸಿಂಗ್' ಎಂದು ಪರಿಚಯಿಸಿಕೊಂಡಿದ್ದಾರೆ. ಮಾಸ್ಕ್ ತೆಗೆದ ಬಳಿಕ ಗುರುತಿಸಿದ ಸಿಬ್ಬಂದಿ, ಗರ್ಭಗುಡಿ ಆವರಣಕ್ಕೆ ಅವರನ್ನು ಕರೆದೊಯ್ದರು.

ಪ್ರಾರ್ಥನೆ–ಕ್ಷಮೆಯಾಚನೆ: ಗರ್ಭಗುಡಿಯ ಪ್ರಾಂಗಣದಲ್ಲಿ ನಿಂತು ತಾವು ತಂದಿದ್ದ ಪೂಜಾ ಸಾಮಗ್ರಿ ನೀಡಿ, ಪೂಜೆ ಹಾಗೂ ಅರ್ಚನೆ ಮಾಡಿಸಿದ ಬಳಿಕ ಅಲ್ಲೇ ಕುಳಿತು 2–3 ನಿಮಿಷ ದೇವಿಯನ್ನು ಪ್ರಾರ್ಥಿಸಿದರು. ಈ ವೇಳೆ ರಣವೀರ್ ಸಿಂಗ್ ಅವರು ದೈವಿ ಶಕ್ತಿಯ ಬಗ್ಗೆ ಅಪಹಾಸ್ಯ ಮಾಡಿದ್ದಕ್ಕೆ ನಾಡದೇವಿ ಚಾಮುಂಡೇಶ್ವರಿ ಬಳಿ ಕ್ಷಮೆ ಯಾಚಿಸಿದರು ಎಂದು ಮೂಲಗಳು ತಿಳಿಸಿವೆ. ನಂತರ ದೇವಸ್ಥಾನದ ವತಿಯಿಂದ ಹಾರ ಹಾಕಿ, ಅಭಿನಂದಿಸಿ ಬೀಳ್ಕೊಟ್ಟರು.

ದೇವಿಯ ಮುಂದೆ ಕುಳಿತು ಭಾವುಕರಾದರು...



ಚಾಮುಂಡಿಬೆಟ್ಟಕ್ಕೆ ಬಾಲಿವುಡ್ ನಟ ರಣವೀರ್ ಸಿಂಗ್ ಅವರು ಭೇಟಿ ನೀಡಿ ದೇವಿ ದರ್ಶನ ಪಡೆದರು.

ಹಮ್ಮು–ಬಿಮ್ಮು ತೋರಲಿಲ್ಲ: ಚಾಮುಂಡಿಬೆಟ್ಟಕ್ಕೆ ತಮ್ಮ ವಾಹನದಲ್ಲೇ ಆಗಮಿಸಿದ ನಟ ರಣವೀರ್ ಸಿಂಗ್, ಪಾರ್ಕಿಂಗ್ ಸ್ಥಳದಲ್ಲಿ ನಿಲುಗಡೆ ಮಾಡಿ, ತಮ್ಮೊಂದಿಗೆ ಬಂದಿದ್ದ ಇಬ್ಬರೊಂದಿಗೆ ದೇವಾಲಯದ ಬಳಿ ಬಂದಿದ್ದಾರೆ. ದೇವಸ್ಥಾನ ಪ್ರವೇಶಕ್ಕೆ ಸರದಿಯಲ್ಲಿದ್ದ ಭಕ್ತರೊಂದಿಗೆ ನಿಂತಿದ್ದಾರೆ. ಪ್ರವೇಶದ್ವಾರದಲ್ಲೇ ತಮ್ಮ ಪರಿಚಯ ಹೇಳಿಕೊಂಡಿದ್ದರೆ ಭದ್ರತಾ ದೃಷ್ಟಿಯಿಂದ ಪೊಲೀಸರೇ ನೇರಪ್ರವೇಶಕ್ಕೆ ಅನುವು ಮಾಡಿಕೊಡುತ್ತಿದ್ದರು. ಆದರೆ ಮಾಸ್ಕ್ ಧರಿಸಿದ್ದ ರಣವೀರ್, ತಾನೊಬ್ಬ ಸ್ಟಾರ್ ನಟ ಎಂಬ ಹಮ್ಮು–ಬಿಮ್ಮು ಇಲ್ಲದಂತೆ ಸಾಮಾನ್ಯರಂತೆ ■ 6ನೇ ಪುಟಕ್ಕೆ

> ಬಾಲಿವುಡ್ ನಟ ರಣವೀರ್ ಸಿಂಗ್ ಮಂಗಳವಾರ ಬೆಳಗ್ಗೆ 7.30ರ ಸಮಯದಲ್ಲಿ ಚಾಮುಂಡಿ ಬೆಟ್ಟಕ್ಕೆ ಸಾಮಾನ್ಯ ಭಕ್ತರಂತೆ ಆಗಮಿಸಿದ್ದರು. ಮಾಸ್ಕ್ ಧರಿಸಿ, ಸರದಿ ಸಾಲಿನಲ್ಲಿ ದೇವಾಲಯ ಪ್ರವೇಶಿಸಿ ಅಲ್ಲಿದ್ದ ಸಿಬ್ಬಂದಿಗೆ ತಮ್ಮ ಗುರುತು ಹೇಳಿಕೊಂಡಿದ್ದಾರೆ. ಆಗ ಅವರನ್ನು ಗರ್ಭಗುಡಿ ಮುಂಭಾಗದ ಆವರಣಕ್ಕೆ ಕರೆದೊಯ್ಯಲಾಗಿದೆ. ಪೂಜೆ, ಪ್ರಾರ್ಥನೆ ಬಳಿಕ ದೇವಾಲಯದ ವತಿಯಿಂದ ಅವರನ್ನು ಗೌರವಿಸಲಾಯಿತು. ಅವರು ಭೇಟಿ ನೀಡುವ ವಿಷಯವನ್ನು ಯಾರಿಗೂ ತಿಳಿಸಿರಲಿಲ್ಲ.
> – ಡಾ.ಎಂ.ಜೆ.ರೂಪ, ಕಾರ್ಯದರ್ಶಿ, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ



ಇಂದಿನಿಂದ ಮೈಸೂರು ಬೇಸಿಗೆ ರೇಸ್‌ಗಳು



ಮೈಸೂರು, ಮೇ 26–ಮೈಸೂರು ಬೇಸಿಗೆ ರೇಸುಗಳು ಮೇ 27ರಿಂದ ಪ್ರಾರಂಭವಾಗಲಿದ್ದು, ಆ.5ರವರೆಗೆ ಪ್ರತಿ ಬುಧವಾರ ಒಟ್ಟು 11 ದಿನಗಳ ಕಾಲ ನಡೆಯಲಿವೆ ಎಂದು ಮೈಸೂರು ರೇಸ್ ಕ್ಲಬ್ ಅಧ್ಯಕ್ಷ ಕೆ.ಟಿ.ಬಾಲಕೃಷ್ಣ ತಿಳಿಸಿದ್ದಾರೆ.



ಕೆ.ಟಿ.ಬಾಲಕೃಷ್ಣ

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಈ ಬಾರಿಯ ಬೇಸಿಗೆ ರೇಸಿಂಗ್ ಸೀಸನ್‌ಗೆ ವಿವಿಧ ಕಪ್ ಹಾಗೂ ಟ್ರೋಫಿಗಳ ಮೌಲ್ಯವೂ ಸೇರಿದಂತೆ ಒಟ್ಟು 4 ಕೋಟಿ ರೂ. ಸ್ಟೇಕ್ ಹಣವನ್ನು ಘೋಷಿಸಲಾಗಿದೆ. ಬೇಸಿಗೆ ರೇಸಿಂಗ್ ಸೀಸನ್‌ಗಾಗಿ ರೇಸ್ ಟ್ರ್ಯಾಕ್ ಅನ್ನು ಅತ್ಯುತ್ತಮ ರೀತಿಯಲ್ಲಿರುವಂತೆ ಕಾಯ್ದುಕೊಳ್ಳಲಾಗಿದೆ.

ಈ ಬಾರಿಯ ಸೀಸನ್‌ನಲ್ಲಿ ಮೂರು ಮತ್ತು ನಾಲ್ಕು ವರ್ಷದ ಕುದುರೆಗಳ ಸ್ಪರ್ಧೆಗೆ ಪ್ರತಿ 10 ಲಕ್ಷ ರೂ. ಮೊತ್ತದ 4 ಸ್ವೀಪ್‌ಸ್ಟೇಕ್ಸ್ ರೇಸ್‌ಗಳನ್ನು ಆಯೋಜಿಸಲಾಗಿದ್ದು, ದೇಶದ ವಿವಿಧ ಭಾಗಗಳಿಂದ ಉತ್ತಮ ಕುದುರೆಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದು ತಿಳಿಸಿದ್ದಾರೆ. ಮೈಸೂರು ಫಿಲ್ಲೀಸ್ ಟ್ರಯಲ್ ಸ್ಟೇಕ್ಸ್(ಜು.1), ಮೈಸೂರು ಕೋಲ್ಟ್ ಟ್ರಯಲ್ ಸ್ಟೇಕ್ಸ್(ಜು.8), ಮೈಸೂರು ಸಮ್ಮರ್ ಮಿಲಿಯನ್ (ಜು.22) ಮತ್ತು ಮೈಸೂರು ರೇಸ್ ಕ್ಲಬ್ ಮಿಲಿಯನ್ (ಆ.5) ರೇಸುಗಳು ಸೀಸನ್‌ನಲ್ಲಿ ನಡೆಯುವ ಪ್ರಮುಖ ಪಂದ್ಯಗಳಾಗಿವೆ.

ಚೆನ್ನೈನಲ್ಲಿ ರೇಸಿಂಗ್ ಚಟುವಟಿಕೆಗಳು ಸ್ಥಗಿತವಾಗಿರುವ ಹಿನ್ನೆಲೆಯಲ್ಲಿ ಅಲ್ಲಿನ 125 ಕುದುರೆಗಳಿಗೆ ಎಂಆರ್‌ಸಿಯಲ್ಲಿ ವಾಸ್ತವ್ಯದ ಅವಕಾಶ ಮಾಡಿಕೊಡಲಾಗಿದೆ. ಸದ್ಯ ಮೈಸೂರು ರೇಸ್ ಕ್ಲಬ್‌ನಲ್ಲಿ 460 ಕುದುರೆಗಳು ವಾಸ್ತವ್ಯದಲ್ಲಿದ್ದು, ಇವುಗಳೊಂದಿಗೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಹೊರ ರಾಜ್ಯಗಳ ಕುದುರೆಗಳು ಬೇಸಿಗೆ ಸೀಸನ್‌ನಲ್ಲಿ ಪಾಲ್ಗೊಳ್ಳಲಿವೆ ಎಂದಿದ್ದಾರೆ.

ಎ ಗ್ರೇಡ್ ಲೈಸೆನ್ಸ್ ಹೊಂದಿರುವ ಚೆನ್ನೈ ಮೂಲದ ತರಬೇತುದಾರರು, ಸ್ಥಳೀಯ 35 ತರಬೇತುದಾರರೊಂದಿಗೆ ತಮ್ಮ ಕುದುರೆಗಳನ್ನು ಸ್ಪರ್ಧಾಕಣಕ್ಕೆ ಇಳಿಸಲಿದ್ದಾರೆ. ಖ್ಯಾತನಾಮರೂ ಸೇರಿದಂತೆ 100ಕ್ಕೂ ಹೆಚ್ಚು ಜಾಕಿಗಳು ತಮ್ಮ ಕೌಶಲವನ್ನು ಒರೆಗೆ ಹಚ್ಚಲಿರುವರು ಎಂದು ಬಾಲಕೃಷ್ಣ ತಿಳಿಸಿದ್ದಾರೆ.

ಸುಮಾರು 100 ಟೋಟಲೈಸೇಟರ್ ಬೆಟ್ಟಿಂಗ್ ಟರ್ಮಿನಲ್‌ಗಳು ಸೀಸನ್‌ನಲ್ಲಿ ಕಾರ್ಯನಿರ್ವಹಿಸಲಿವೆ. ಪ್ರವೇಶ ದರವನ್ನು 200ರೂ. ನಿಗದಿಪಡಿಸಲಾಗಿದ್ದು, ಟಿಕೆಟ್ ಪಡೆದು ಪ್ರವೇಶ ಪಡೆಯುವವರಿಗೆ ಲಕ್ಕಿ ಡ್ರಾ ಮೂಲಕ ಮೂರು ನಗದು ಬಹುಮಾನಗಳನ್ನು ನೀಡಲಾಗುವುದು ಎಂದಿದ್ದಾರೆ.

ಆಸಕ್ತರು ಮೈಸೂರು ರೇಸ್ ಕ್ಲಬ್ ರೇಸಿಂಗ್ ಚಟುವಟಿಕೆಗಳನ್ನು ವೆಬ್‌ಸೈಟ್ mysoreraceclub.com ವೀಕ್ಷಿಸಬಹುದಾಗಿದೆ ಎಂದು ಕೆ.ಟಿ. ಬಾಲಕೃಷ್ಣ ಮಾಹಿತಿ ನೀಡಿದ್ದಾರೆ.

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ: ಬೀದಿಗೆ ಬಂದ ಬಡವರ ಬದುಕು



ರವಿ ಮಂಚೇಗೌಡನ ಕೊಪ್ಪಲು

ಮೈಸೂರು,ಮೇ 26–ಕೇಂದ್ರ ಸರ್ಕಾರ, ಕೇವಲ ಒಂದು ತಿಂಗಳ ಅವಧಿಯಲ್ಲಿ 4 ಬಾರಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಿ ರೈತರ, ಬಡವರ ಮತ್ತು ಮಧ್ಯಮ ವರ್ಗದವರ ಜೀವನ ಬೀದಿಗೆ ಬರುವಂತೆ ಮಾಡಿದೆ ಎಂದು ಚಾಮರಾಜ ಕ್ಷೇತ್ರದ ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು ಆರೋಪಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆಯಲ್ಲಿ, ದೇಶದಲ್ಲಿ ಕೆಲವು ರಾಜ್ಯಗಳ ಚುನಾವಣೆ ಮುಗಿಯುವುದನ್ನೇ ಕಾಯುತ್ತಿದ್ದ ಕೇಂದ್ರ ಸರ್ಕಾರ, ಜನರ ಮತ ಪಡೆದು ಬೆಲೆ ಏರಿಸುವ ಮೂಲಕ ಜನರಿಗೆ ಅನ್ಯಾಯ ಮಾಡಿ ಕೇಂದ್ರ ಸರ್ಕಾರ ಜನ ವಿರೋಧಿ ಎಂಬುದನ್ನು ಸಾಬೀತುಪಡಿಸಿದೆ.

ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ಬ್ಯಾಂಕ್‌ಗಳನ್ನು ರಾಷ್ಟ್ರೀಕರಣ ಮಾಡಿ ಬಡವರು ಬ್ಯಾಂಕಿನಲ್ಲಿ ವ್ಯವಹರಿಸಲು ಅವಕಾಶ ಮಾಡಿದ್ದರು. ಮೋದಿ ಅವರು ಪ್ರಧಾನಿಯಾದ ಮೇಲೆ ರೈತರು ಸಹಕಾರ ಸಂಘದಿಂದ ಸಾಲ ಪಡೆದರೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲ ನೀಡದಂತೆ ಆದೇಶ ಹೊರಡಿಸಿ ರೈತರಿಗೆ ಅನ್ಯಾಯ ಮಾಡಿದ್ದಾರೆ. ಈ ಕ್ರಮವನ್ನು ವಿರೋಧಿಸಿ ಮುಂದಿನ ದಿನಗಳಲ್ಲಿ ಬ್ಯಾಂಕ್‌ಗಳ ವಿರುದ್ಧ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಹೇಳಿದ್ದಾರೆ.

ಶ್ರೀಗಳಿಂದ ಮುದ್ರಾಧಾರಣೆ...



ಮೈಸೂರಿನ ಅಗ್ರಹಾರದ ಶ್ರೀ ಕಾಶಿ ವಿಶ್ವನಾಥ ಸನ್ನಿಧಿ ಆವರಣದಲ್ಲಿ ಉತ್ತರಾದಿ ಮಠಗಳು ಹಮ್ಮಿಕೊಂಡಿರುವ ಅಧಿಕಮಾಸ ಉತ್ಸವದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಉತ್ತರಾದಿ ಮಠದ ಶ್ರೀ ಸತ್ಯಾತ್ಮತೀರ್ಥರು ಭಕ್ತರಿಗೆ ಮುದ್ರಾಧಾರಣೆ ಮಾಡಿದರು.

ಅನ್ನಸಂತರ್ಪಣೆ...



ಮೈಸೂರಿನ ಕೆಆರ್‌ಎಸ್ ರಸ್ತೆಯ ಪಂಪ್‌ಹೌಸ್ ಹತ್ತಿರವಿರುವ ಪ್ರಕೃತಿ ಆಶ್ರಮದ ಹಿರಿಯ ನಾಗರಿಕರು ಮತ್ತು ಮಾನಸಿಕ ಅಸ್ವಸ್ಥರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಈ ವೇಳೆ ಸಮಾಜ ಸೇವಕ ಭೋಜರಾಜ ಸಿ.ಆರ್., ಪ್ರಕಾಶ್, ರಘುನಾಥ್, ಶಾರದಾ ಭೋಜರಾಜ್ ಮತ್ತಿತರರು ಉಪಸ್ಥಿತರಿದ್ದರು.

ನಿಧನ



ನಂದಲಾಲ್ ಭಗವಾನ್‌ದಾಸ್ ಪಂಜಾಬಿ

ಮೈಸೂರು, ಮೇ 26– ಮೈಸೂರಿನ ಆಲನಹಳ್ಳಿ ನಿವಾಸಿ ನಂದಲಾಲ್ ಭಗವಾನ್‌ದಾಸ್ ಪಂಜಾಬಿ (87) ಸೋಮವಾರ ಬೆಳಗ್ಗೆ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಪುತ್ರರಾದ ಸುನೀಲ್ ಪಂಜಾಬಿ ಮತ್ತು ಅನಿಲ್ ಪಂಜಾಬಿ, ಸೊಸೆಯಂದಿರಾದ ಅರ್ಚನಾ ಪಂಜಾಬಿ ಮತ್ತು ರಚನಾ ಪಂಜಾಬಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಲ್‌ಹಾಜ್ ಸೈಯದ್ ನಯಾಜ್



ಮೈಸೂರಿನ ರಾಜೀವ್‌ನಗರ 2ನೇ ಹಂತದ ನಿವಾಸಿ ಹಾಗೂ ಟಿಂಬರ್ ಮರ್ಚೆಂಟ್ ಅಲ್‌ಹಾಜ್ ಸೈಯದ್ ನಯಾಜ್ (58) ಸೋಮವಾರ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ, ಮೈಸೂರು ನಗರ ಯುವ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಅಬ್ರಾರ್ ಸೇರಿದಂತೆ ಮೂವರು ಪುತ್ರರು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

ಅಶೋಕ ರಸ್ತೆಯಲ್ಲಿರುವ ಮಸೀದಿ–ಇ–ಅಜಾಮ್‌ನಲ್ಲಿ ನಮಾಜ್–ಇ–ಜನಾಜ ನಂತರ ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಮುಸ್ಲಿಮರ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಆರ್.ಆಸ್ಪತ್ರೆಯಲ್ಲಿ ಎಮರ್ಜೆನ್ಸಿ ವಾರ್ಡ್ ಹೌಸ್ ಫುಲ್!

- ಒಂದೇ ಬೆಡ್‌ನಲ್ಲಿ ಎರಡು ರೋಗಿಗಳಿಗೆ ಚಿಕಿತ್ಸೆ ನೀಡುವ ದುಸ್ಥಿತಿ!
- ಅನಿವಾರ್ಯವಾಗಿ ಖಾಸಗಿ ಆಸ್ಪತ್ರೆಗಳ ಮೊರೆ ಹೋಗಬೇಕಾದ ಪರಿಸ್ಥಿತಿ



ಕೆ.ಆರ್.ಆಸ್ಪತ್ರೆಯ ತುರ್ತು ಚಿಕಿತ್ಸಾ ವಾರ್ಡ್‌ನ ಒಂದೇ ಬೆಡ್‌ನಲ್ಲಿ ಇಬ್ಬರು ರೋಗಿಗಳು ಮಲಗಿ ಚಿಕಿತ್ಸೆ ಪಡೆಯುತ್ತಿರುವುದು.

ಮೈಸೂರು, ಮೇ 26(ಎಂಕೆ)– ಮೈಸೂರಿನ ದೊಡ್ಡಾಸ್ಪತ್ರೆ ಖ್ಯಾತಿಯ ಕೆ.ಆರ್.ಆಸ್ಪತ್ರೆ(ಕೃಷ್ಣರಾಜೇಂದ್ರ ಆಸ್ಪತ್ರೆ) ತುರ್ತು ಚಿಕಿತ್ಸಾ ವಿಭಾಗ(ಕ್ಯಾಶುಲ್ಟಿ ಎಮರ್ಜೆನ್ಸಿ ವಾರ್ಡ್) ತುರ್ತಾಗಿ ವಿಸ್ತರಣೆಯಾಗಬೇಕಿದೆ...!

ಶತಮಾನದ ಇತಿಹಾಸವುಳ್ಳ, ಬಡವರ ಆಸ್ಪತ್ರೆಯೆಂದೇ ಕರೆಯಲ್ಪಡುವ ಕೆ.ಆರ್. ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿದ್ದು, ತುರ್ತು ಚಿಕಿತ್ಸಾ ವಾರ್ಡ್‌ನಲ್ಲಿ ಬೆಡ್(ಹಾಸಿಗೆ)ಗಳಿಲ್ಲದೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಒಂದೇ ಹಾಸಿಗೆಯಲ್ಲಿ ಇಬ್ಬರಿಂದ ಮೂವರು ರೋಗಿಗಳನ್ನು ಮಲಗಿಸಿ ಚಿಕಿತ್ಸೆ ನೀಡಬೇಕಾದ ಅನಿವಾರ್ಯತೆ ಎದುರಾಗಿದೆ.

ಹಳೇ ಜಯದೇವ ಕಟ್ಟಡ, ಕಲ್ಲಿನ ಕಟ್ಟಡ ಸೇರಿದಂತೆ ಸುಮಾರು 25 ವಾರ್ಡ್‌ಗಳಿಂದ 1100 ಹಾಸಿಗೆ ಸಾಮರ್ಥ್ಯವುಳ್ಳ ಕೆ.ಆರ್.ಆಸ್ಪತ್ರೆಯ ತುರ್ತು ಚಿಕಿತ್ಸಾ ವಾರ್ಡ್‌ನ ಒಳಗಡೆ ಕೇವಲ 12 ಬೆಡ್ ಹಾಗೂ ವಾರ್ಡ್ ಸುತ್ತಲೂ ಸೇರಿ 25ರಿಂದ 30 ಬೆಡ್‌ಗಳಿದ್ದು, ತುರ್ತು ಚಿಕಿತ್ಸೆಗೆಂದು ಬರುವ ರೋಗಿಗಳಿಗೆ ಮಲಗಲು ಸ್ಥಳವಿಲ್ಲದೆ ನೆಲದ ಮೇಲೆ ಮಲಗಿಕೊಂಡು ಚಿಕಿತ್ಸೆ ಪಡೆದುಕೊಳ್ಳಬೇಕಾದ ದುಸ್ಥಿತಿ ಉಂಟಾಗಿದೆ.

ಅದರಲ್ಲೂ ರಾತ್ರಿ ವೇಳೆ ಅಪಘಾತ ಸೇರಿದಂತೆ ಇನ್ನಿತರೆ ಸಮಸ್ಯೆಗಳಿಂದ ಆಸ್ಪತ್ರೆಗೆ ಆಗಮಿಸುವ ಹೊರರೋಗಿಗಳಿಗೆ ತುರ್ತು ಚಿಕಿತ್ಸೆ ನೀಡಿ, ನಂತರ ವಾರ್ಡ್‌ಗಳಿಗೆ ವರ್ಗಾಯಿಸುವಷ್ಟರಲ್ಲಿ ನರಕ ದರ್ಶನವಾಗಲಿದೆ. ರೋಗಿಗಳ ಜೊತೆಗೆ ಬರುವ ಸಂಬಂಧಿಕರು, ವಾರ್ಡ್‌ನಲ್ಲಿನ ಇಕ್ಕಟ್ಟಿಗೆ ಸಿಲುಕಿ ಹೈರಾಣಾಗಿ ತಾವು ಚಿಕಿತ್ಸೆ ಪಡೆದುಕೊಳ್ಳಬೇಕಾದಂತಹ ಸ್ಥಿತಿಗೆ ತಲುಪುತ್ತಿದ್ದಾರೆ.

ಹಾಗೆಯೇ ತುರ್ತು ಚಿಕಿತ್ಸಾ ವಾರ್ಡ್‌ನಲ್ಲಿ ಹಿರಿಯ ವೈದ್ಯರಿಗಿಂತ ಹೆಚ್ಚಾಗಿ ಪಿಜಿ ವಿದ್ಯಾರ್ಥಿ ವೈದ್ಯರು ಕಾರ್ಯನಿರ್ವಹಿಸಲಿದ್ದು, ನಿಧಾನ ಮತ್ತು ಅನುಭವದ ಕೊರತೆಯಿಂದಾಗಿ ತುರ್ತು ಚಿಕಿತ್ಸೆ ನೀಡಿ, ಒಳ ರೋಗಿ ವಾರ್ಡ್‌ಗಳಿಗೆ ವರ್ಗಾವಣೆ ಮಾಡುವಲ್ಲಿಯೂ ತಡವಾಗುತ್ತಿದೆ. ಇದರ ನಡುವೆ ಕೆಲವೊಂದು ಔಷಧಿಗಳನ್ನು ಹೊರಗಡೆಯಿಂದ ತರುವಂತೆ ರೋಗಿಗಳ ಸಂಬಂಧಿಕರಿಗೆ ಸೂಚಿಸುವುದರಿಂದ ತುರ್ತು ಚಿಕಿತ್ಸೆ, ತುರ್ತಾಗಿ ಸಾಗದೆ ಇಡೀ ವಾರ್ಡ್ ಜನದಟ್ಟಣೆಯಿಂದ ತುಂಬಿ ತುಳುಕುವಂತಾಗುತ್ತಿದೆ.

ಸರ್ವರ್ ಸಮಸ್ಯೆ: ಎಮರ್ಜೆನ್ಸಿ ವಾರ್ಡ್‌ನಲ್ಲಿ ದಟ್ಟಣೆ ಜೊತೆಗೆ ಹೊರರೋಗಿ ಚೀಟಿ ಮತ್ತು ಒಳರೋಗಿಗಳ ಚಿಕಿತ್ಸೆಗೆ ಬಿಲ್ ಮಾಡುವಾಗ ಸರ್ವರ್ ಡೌನ್‌ನಿಂದಾಗಿ ಮತ್ತಷ್ಟು ಕಿರಿಕಿರಿಯುಂಟಾಗುತ್ತಿದೆ. ಒಪಿಡಿ ಚೀಟಿ ಕೊಡುವ ಸ್ಥಳ ಮತ್ತು ಒಪಿಡಿ ವಾರ್ಡ್‌ಗಳ ಬಳಿಯೂ ಜನ ಸಂದಣಿ ಹೆಚ್ಚಾಗಿ ನೂಕು–ನುಗ್ಗಲು ಉಂಟಾಗುತ್ತಿದೆ. ದೂರದ ಊರುಗಳಿಂದ ಬರುವ ಹೊರ ರೋಗಿಗಳು ಸರಿಯಾಗಿ ವೈದ್ಯರ ಸಲಹೆ ಪಡೆಯಲು ಸಾಧ್ಯವಾಗದೆ ಬೇಸರದಿಂದಲೇ ಹೊರ ನಡೆಯುವಂತಾಗಿದೆ.

ರಾತ್ರಿ ವೇಳೆ ಸಮಸ್ಯೆ: ಕ್ಯಾಶುಲ್ಟಿ ಎಮರ್ಜೆನ್ಸಿ ವಾರ್ಡ್‌ನಲ್ಲಿ 30 ಬೆಡ್‌ಗಳಿದ್ದು, ರಾತ್ರಿ ವೇಳೆ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಈ ವೇಳೆ ರೋಗಿಗಳನ್ನು ವಾರ್ಡ್‌ಗಳಿಗೆ ವರ್ಗಾವಣೆ ಮಾಡುವವರೆಗೆ ಸ್ವಲ್ಪ ಗೊಂದಲ ಉಂಟಾಗುತ್ತಿದೆ. ಆದರೆ, ಹಗಲಲ್ಲಿ ಯಾವುದೇ ಸಮಸ್ಯೆಯಾಗುತ್ತಿಲ್ಲ. ಕೆ.ಆರ್. ಆಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆಯೂ ಹೆಚ್ಚಾಗುತ್ತಿದ್ದು, ಹೊಸದಾಗಿ ಒಪಿಡಿ ಬ್ಲಾಕ್ ನಿರ್ಮಾಣಗೊಳ್ಳುವವರೆಗೂ ಇದೇ ಪರಿಸ್ಥಿತಿ ಎದುರಿಸಬೇಕಾಗಿದೆ ಎಂದು ಕೆ.ಆರ್. ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಶೋಭಾ 'ಮೈಸೂರು ಮಿತ್ರ'ನಿಗೆ ತಿಳಿಸಿದರು.


ಕೆಆರ್‌ಎಸ್ ರಸ್ತೆಯಲ್ಲಿರುವ ಟ್ರಾಮಾ ಕೇರ್ ಸೆಂಟರ್‌ಗೆ ಮೂಳೆ ಚಿಕಿತ್ಸಾ ವಿಭಾಗ, ಸೂಪರ್ ಸ್ಪೇಷಾಲಿಟಿ ಆಸ್ಪತ್ರೆ ನರರೋಗ, ಕಿಡ್ನಿ ಸೇರಿದಂತೆ ಇನ್ನಿತರೆ ಚಿಕಿತ್ಸಾ ಸೇವೆ ವರ್ಗಾವಣೆಯಾಗಿದ್ದರೂ ಕೆ.ಆರ್.ಆಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆ ಕಡಿಮೆಯಾಗಿಲ್ಲ. ಮೈಸೂರಿನ ಹೃದಯ ಭಾಗದಲ್ಲಿ ಆಸ್ಪತ್ರೆ ಇರುವುದರಿಂದ ಬಡ ರೋಗಿಗಳು, ಗ್ರಾಮೀಣ ಪ್ರದೇಶದ ಜನರು ನೇರವಾಗಿ ಕೆ.ಆರ್.ಆಸ್ಪತ್ರೆಗೆ ಬರಲಿದ್ದು, ಶಕ್ತಿ ಮೀರಿ ಚಿಕಿತ್ಸೆ ನೀಡುತ್ತಿದ್ದೇವೆ ಎಂದರು.

ಇನ್ನೂ ಒಂದು ವರ್ಷವಾಗಲಿದೆ...!

"ಕೆ.ಆರ್.ಆಸ್ಪತ್ರೆ ಆವರಣದಲ್ಲಿ ಸುಮಾರು 75 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಹೊಸ ಒಪಿಡಿ(ಹೊರ ರೋಗಿ ವಿಭಾಗ) ಬ್ಲಾಕ್ ನಿರ್ಮಾಣವಾಗುತ್ತಿದೆ. ಈಗಾಗಲೇ ನಿರ್ಮಾಣ ಕಾಮಗಾರಿ ಆರಂಭವಾಗಿದ್ದು, ಪೂರ್ಣಗೊಳ್ಳಲು ಇನ್ನೂ ಒಂದು ವರ್ಷ ಕಾಯಬೇಕು. ಒಳ ರೋಗಿ ವಾರ್ಡ್‌ಗಳಲ್ಲಿ ಹಾಸಿಗೆಗಳ ಕೊರತೆಯಿಲ್ಲ. ಆದರೆ, ತುರ್ತು ಚಿಕಿತ್ಸಾ ವಾರ್ಡ್‌ನಲ್ಲಿನ ಕೊರತೆ ನಿವಾರಣೆಯಾಗಬೇಕಾದರೆ ಹೊಸ ಒಪಿಡಿ ಬ್ಲಾಕ್ ನಿರ್ಮಾಣವಾಗಬೇಕು. ಅಲ್ಲಿಯವರೆಗೂ ಸಾಧ್ಯವಾದಷ್ಟು ಪರ್ಯಾಯ ಮಾರ್ಗಗಳನ್ನು ಕಂಡುಕೊಂಡು ಗುಣಮಟ್ಟದ ಚಿಕಿತ್ಸೆ ನೀಡಲಾಗುವುದು. **–ಡಾ.ಶೋಭಾ, ವೈದ್ಯಕೀಯ ಅಧೀಕ್ಷಕಿ, ಕೆ.ಆರ್.ಆಸ್ಪತ್ರೆ.**



ಮಾರ್ಬಳ್ಳಿಯಲ್ಲಿ ಬಸವ ಬಳಗದಿಂದ ಬಸವ ಜಯಂತಿ; ಜಿಟಿಡಿಗೆ ಸನ್ಮಾನ...



ಮೈಸೂರು ತಾಲೂಕು ಜಯಪುರ ಹೋಬಳಿಯ ಮಾರ್ಬಳ್ಳಿಯಲ್ಲಿ ಬಸವ ಬಳಗದಿಂದ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಸವೇಶ್ವರರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ, ಮೆರವಣಿಗೆಗೆ ಚಾಲನೆ ನೀಡಿದ ಶಾಸಕ ಜಿ.ಟಿ.ದೇವೇಗೌಡರನ್ನು ಬಸವ ಬಳಗದ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಪುರ ಮಠದ ಪೀಠಾಧ್ಯಕ್ಷರಾದ ಚಂದ್ರಶೇಖರ ಸ್ವಾಮೀಜಿ, ಸಮಾಜ ಸೇವಕ ಎಸ್.ಶ್ರೀಕಾಂತ್, ದಾರಿಪುರ ಬಸವಣ್ಣ, ಜವರನಾಯಕ, ಬಿ.ಡಿ.ಬಸವಣ್ಣ, ಅಬ್ದುಲ್ ಮುತಾಲಿಫ್, ಬೈರೇಶ್, ಟಿ.ಪಿ.ನಾಗರಾಜು, ಹೊಸಕೆರೆ ಮಂಜುನಾಥ್, ಎಂ.ವಿ.ಸುರೇಶ್, ವೆಂಕಟಪ್ಪ, ಮಹಾಂತಪ್ಪ, ಗುರುಸ್ವಾಮಿ, ಬಸವರಾಜು ಹಾಗೂ ಬಸವ ಬಳಗದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಗ್ನಿಶಾಮಕ ಸಿಬ್ಬಂದಿ ಪುನರ್ ವಿಂಗಡಣೆ

ಮೈಸೂರು, ಮೇ 26(ಎಸ್‌ಪಿಎನ್)– ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಹಲವು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದ 184 ಅಧಿಕಾರಿ ಮತ್ತು ಸಿಬ್ಬಂದಿ ಹುದ್ದೆಗಳನ್ನು ರಾಜ್ಯದ ವಿವಿಧ ಜಿಲ್ಲೆಯ ಅಗ್ನಿಶಾಮಕ ಠಾಣೆಗಳಿಗೆ ಪುನರ್ ವಿಂಗಡಣೆ ಮಾಡಿ ಅಗ್ನಿಶಾಮಕ ಮಹಾನಿರ್ದೇಶಕರ ಕಚೇರಿ ಆದೇಶ ಹೊರಡಿಸಿದೆ.

ಗೋಣಿಕೊಪ್ಪದ ಅಗ್ನಿಶಾಮಕ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಠಾಣಾಧಿಕಾರಿ ಡಿ.ಜಿ.ಮಂಜೇಗೌಡರನ್ನು ಮಂಡ್ಯ ಅಗ್ನಿಶಾಮಕ ಠಾಣೆಗೆ, ಬೇಲೂರು ಅಗ್ನಿಶಾಮಕ ಠಾಣಾಧಿಕಾರಿ ಎಚ್.ಸಿ.ರಮೇಶ್‌ರನ್ನು ನಾಗಮಂಗಲ ಠಾಣೆಗೆ, ಸರಸ್ವತಿಪುರಂ ಅಗ್ನಿಶಾಮಕ ದಳ ಠಾಣೆಯ ಪ್ರಮುಖ ಅಗ್ನಿಶಾಮಕರಾದ ಆರ್.ಎಂ. ಮಹೇಶ್‌ಕುಮಾರ್‌ರನ್ನು ಮಡಿಕೇರಿ ಠಾಣೆಗೆ, ಪ್ರಮುಖ ಅಗ್ನಿಶಾಮಕರನ್ನು ಆಲೂರು ಅಗ್ನಿಶಾಮಕ ಠಾಣೆಗೆ, ಬನ್ನಿಮಂಟಪದ ಅಗ್ನಿಶಾಮಕ ಠಾಣೆಯ ಪ್ರಮುಖ ಅಗ್ನಿಶಾಮಕ ಎನ್.ಸಿ.ರಾಜು ಅವರನ್ನು ಸಕಲೇಶಪುರ ಠಾಣೆಗೆ, ಕುಶಾಲನಗರ ಅಗ್ನಿಶಾಮಕ ಠಾಣೆಯ ಪ್ರಮುಖ ಅಗ್ನಿಶಾಮಕರಾದ ಸಿ.ವಿ.ಪ್ರೇಮಾನಂದರನ್ನು ಮುಳಬಾಗಿಲು ಠಾಣೆಗೆ, ಅಗ್ನಿಶಾಮಕ ಚಾಲಕ ವೆಂಕಟೇಶಗೌಡ ಪಾಟೀಲರನ್ನು ಮಂಡ್ಯ ಅಗ್ನಿಶಾಮಕ ಠಾಣೆಗೆ ವರ್ಗಾಯಿಸಲಾಗಿದೆ.

ಮೈಸೂರಿನ ಅಗ್ನಿಶಾಮಕ ಚಾಲಕ ಶಿವಮೂರ್ತಿ ಅವರನ್ನು ಬನ್ನಿಮಂಟಪದ ಠಾಣೆಗೆ, ಗೋಣಿಕೊಪ್ಪ ಅಗ್ನಿಶಾಮಕ ಠಾಣೆಯ ಚಾಲಕ ತಂತ್ರಜ್ಞ ಬಿ.ಸಿ.ಅರುಣ್ ಅವರನ್ನು ಕುಶಾಲನಗರ ಠಾಣೆಗೆ, ಬೇಲೂರು ಅಗ್ನಿಶಾಮಕ ಠಾಣೆ ಚಾಲಕ ತಂತ್ರಜ್ಞ ಎಚ್.ಎನ್. ಪ್ರೀತಂ ಅವರನ್ನು ಸಕಲೇಶಪುರ ಠಾಣೆಗೆ, ಬೆಂಗಳೂರು ಜ್ಞಾನಭಾರತಿ ಅಗ್ನಿಶಾಮಕ ಠಾಣೆಯ ಚಾಲಕ ತಂತ್ರಜ್ಞ ಸಿ.ಎ.ಕುಮಾರ ಅವರನ್ನು ಹೊಳೆ ನರಸೀಪುರ ಠಾಣೆಗೆ ವರ್ಗಾಯಿಸಿದ್ದು, ಇವರು ಸೇರಿದಂತೆ ಒಟ್ಟು 184 ಮಂದಿ ಅಗ್ನಿಶಾಮಕ ದಳದ ಸಿಬ್ಬಂದಿ ಮತ್ತು ಅಧಿಕಾರಿಗಳ ಪುನರ್ ವಿಂಗಡಣೆ ಮಾಡಿ ಸ್ಥಳ ನಿಯುಕ್ತಿಗೊಳಿಸಲಾಗಿದೆ. ನಿಯುಕ್ತಿಗೊಂಡ ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ಬಿಡುಗಡೆ ಹಾಗೂ ಸೇರಿಕೆ ವರದಿಯನ್ನು ಸೇವಾ ಪುಸ್ತಕ ನಿರ್ವಹಣಾ ಪ್ರಾಧಿಕಾರಿಗಳಿಗೆ ಕೂಡಲೇ ಸಲ್ಲಿಸತಕ್ಕದ್ದು ಎಂದು ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆ ನಿರ್ದೇಶಕ ಟಿ.ಎನ್.ಶಿವಶಂಕರ್ ಮಹಾನಿರ್ದೇಶಕರ ಪರವಾಗಿ ಆದೇಶಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.5.2026 ಬುಧವಾರ, ಮಳೆ ನಕ್ಷತ್ರ: ರೋಹಿಣಿ 25.05.2026ರಿಂದ 07.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಚಿತ್ತ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಮಧುಮೇಹದ ಗಾಯಗಳು, ವೆರಿಕೋಸ್ ವೇನ್ಸ್, ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಮೂತ್ರಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಬೆಳಗ್ಗೆ 9.30 ರಿಂದ ಕಣ್ಣಿನ ದೃಷ್ಟಿ ಸಮಸ್ಯೆಗಳಿಗೆ ವಿಶೇಷ ಬೇಸಿಗೆ ಶಿಬಿರ, ಬೊಜ್ಜು, ಸಕ್ಕರೆ ಕಾಯಿಲೆ, ಬಿಪಿ, ಕೀಲುನೋವು, ಅಲರ್ಜಿ, ಚರ್ಮದ ರೋಗಗಳು, ಒತ್ತಡ, ಆತಂಕ, ಬಾಲನೆರೆ, ತಲೆನೋವು, ಅಸ್ತಮಾ, ಪಿಸಿಓಡಿ, ಪುರುಷ ಹಾಗೂ ಸ್ತ್ರೀ ಬಂಜೆತನ, ಪಿಎಂಒಎಸ್ ತೊಂದರೆಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಅಥರ್ವ ಮಲ್ಟಿ ಸ್ಪೆಷಾಲಿಟಿ ಆಯುರ್ವೇದಿಕ್ ಹೀಲಿಂಗ್ ಸೆಂಟರ್ :** ಉಚಿತ ಬಿಎಂಡಿ ತಪಾಸಣಾ ಶಿಬಿರ, ಸ್ಥಳ: ನಂ.40/ಸಿ, ಕಂಠಿ ಕನ್ವೆನ್ಷನ್ ಹಾಲ್ ಹತ್ತಿರ, ವಿದ್ಯಾರಣ್ಯಪುರಂ, ಬೆಳಗ್ಗೆ 9.30ಕ್ಕೆ.
- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ:** ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ :** ಉಚಿತ ಮೂಳೆ ಖನಿಜ ಸಾಂದ್ರತೆ ತಪಾಸಣಾ ಶಿಬಿರ, ಸ್ಥಳ: ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ, ದಟ್ಟಗಳ್ಳಿ, ಬೆಳಗ್ಗೆ 10 ರಿಂದ.
- **ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ (ಇಂಡಿಯಾ), ಮೈಸೂರು ಸೆಂಟರ್:** ಬೆಳಗ್ಗೆ 10ಕ್ಕೆ ಬೆಳ್ಳಿ ಹಬ್ಬ ಆಚರಣೆ, ಮುಖ್ಯ ಅತಿಥಿ: ಎನ್.ರಾಮಮೋಹನ್, ಅಧ್ಯಕ್ಷತೆ: ಎಸಿಸಿಇ ಅಧ್ಯಕ್ಷ ರಾಜೇಂದ್ರ ಕಲ್ಬಾವಿರಾವ್, ಗೌರವ ಅತಿಥಿಗಳು: ವಿಜಯ್ ಸನಪ್, ಜೆ.ಪ್ರೇಮ್‌ಕುಮಾರ್, ಕಾಶಿರಾಮ್ ಅಡೆಪು, ಮಧ್ಯಾಹ್ನ 3ಕ್ಕೆ ಎಸಿಸಿಎ ನ್ಯಾಷನಲ್ ಅವಾರ್ಡ್ಸ್ ಮತ್ತು ಫೌಂಡೇಷನ್ ಡೇ, ಸಾನ್ನಿಧ್ಯ : ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸ್ಥಳ: ನಾಥ್ ಅವೆನ್ಯೂ, ಹೆಬ್ಬಾಳು ಕೈಗಾರಿಕಾ ಪ್ರದೇಶ.
- **ಮೈಸೂರು ವಿವಿ ಎನ್. ರಾಚಯ್ಯ ಅಧ್ಯಯನ ಪೀಠ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ :** ಎನ್. ರಾಚಯ್ಯನವರ 107ನೇ ಜನ್ಮ ದಿನೋತ್ಸವ ಅಂಗವಾಗಿ ವಿಶೇಷ ಉಪನ್ಯಾಸ ಮತ್ತು ಬಹುಮಾನ ವಿತರಣೆ ಸಮಾರಂಭ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವ ಪ್ರೊ. ಎನ್. ನಾಗರಾಜು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಕಾಳೇಗೌಡ ನಾಗವಾರ ಅವರಿಂದ ವಿಶೇಷ ಉಪನ್ಯಾಸ, ಅಧ್ಯಕ್ಷತೆ : ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಕೃಷ್ಣಹೊಂಬಳ್, ಉಪಸ್ಥಿತರು : ಸಂದರ್ಶಕ ಪ್ರಾಧ್ಯಾಪಕ ಪ್ರೊ. ಸಿ. ರಾಮಸ್ವಾಮಿ, ಸ್ಥಳ: ಶ್ರೀ ಬಿ.ಎಂ.ಶ್ರೀ ಸಭಾಂಗಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.
- **ಅಭಿವೃದ್ಧಿ ಅಧ್ಯಯನ ಸಂಸ್ಥೆ, ಡಿ. ದೇವರಾಜ ಅರಸು ಅಧ್ಯಯನ ಪೀಠ :** ಡಿ. ದೇವರಾಜು ಅರಸು ಮತ್ತು ಸಾಮಾಜಿಕ ನ್ಯಾಯ : ಸಮಕಾಲೀನ ಭಾರತದ ಪ್ರಸ್ತುತತೆ ಕುರಿತು ವಿಶೇಷ ಉಪನ್ಯಾಸ, ಮುಖ್ಯ ಅತಿಥಿಗಳು : ಡಾ. ಟಿ.ಎಚ್. ಮೂರ್ತಿ, ಅಧ್ಯಕ್ಷತೆ : ಅಭಿವೃದ್ಧಿ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ. ಹೆಚ್.ಎಂ. ಚಂದ್ರಶೇಖರ್, ಉಪಸ್ಥಿತರು : ಡಾ. ಎಂ. ಲಿಂಗರಾಜು, ಪ್ರಾಧ್ಯಾಪಕರಾದ ಪ್ರೊ. ಎಂ. ಮೀರಾ, ಸ್ಥಳ: ಆರ್.ಪಿ. ಮಿಶ್ರಾ ಸಭಾಂಗಣ, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಬೆಳಗ್ಗೆ 11ಕ್ಕೆ.
- **ಸಪಸ ಸಂಗೀತ ವಿದ್ಯಾಲಯ :** ಹೆಸರಾಂತ ಹಿನ್ನಲೆ ಗಾಯಕ ಪುರುಷೋತ್ತಮ ಕಿರಗಸೂರು ಅವರಿಂದ ಭಾವಗೀತೆಗಳ ಕಾರ್ಯಾಗಾರ, ಸ್ಥಳ: ಸಪಸ ಸಂಗೀತ ಶಾಲೆ, ಗಾನಭಾರತಿ ಹತ್ತಿರ, ಕುವೆಂಪುನಗರ, ಬೆಳಗ್ಗೆ 11.30 ರಿಂದ ಸಂಜೆ 5 ರಿಂದ.
- **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ಕರ್ನಾಟಕ ರತ್ನ–ಪದ್ಮಭೂಷಣ–ಗಾನಗಂಧರ್ವ, ಕನ್ನಡಿಗರ ಕಣ್ಮಣಿ ಡಾ. ರಾಜ್‌ಕುಮಾರ್ ಜನ್ಮ ದಿನೋತ್ಸವದ ಸಂಭ್ರಮಾಚರಣೆ ಹಾಗೂ ಡಾ. ರಾಜ್‌ಕುಮಾರ್ ಕಲಾಭೂಷಣ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಮಾಜಿ ಮುಡಾ ಅಧ್ಯಕ್ಷ ಯಶಸ್ವಿನಿ ಸೋಮಶೇಖರ್, ಪುಷ್ಪಾರ್ಚನೆ: ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಪ್ರಧಾನ ನುಡಿ : ಕವಿ ಡಾ. ಜಯಪ್ಪ ಹೊನ್ನಾಳಿ, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಚುಟುಕು ಯುಗಾಚಾರ್ಯ ಡಾ. ಎಂ.ಜಿ.ಆರ್. ಅರಸ್, ಲಯನ್ ಗೋಲ್ಡನ್ ಟಿ. ಸುರೇಶ್, ಸ್ಥಳ : ಮೈಸೂರು ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12ಕ್ಕೆ.
- **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಅಧಿಕ ಮಾಸೋತ್ಸವ, ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಳವರ 33 ದಿನಗಳ ಮೈಸೂರು ದಿಗ್ವಿಜಯ–2026, ಸಾಂಸ್ಕೃತಿಕ ಕಾರ್ಯಕ್ರಮಗಳು, ವಿದುಷಿ ಶ್ರೀಮತಿ ರೂಪಶ್ರೀ ಪ್ರಭಂಜನ ಅವರಿಂದ ದಾಸವಾಣಿ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ,ಅಗ್ರಹಾರ, ಸಂಜೆ 5.30ಕ್ಕೆ.
- **ರೋಟರಿ ಮೈಸೂರು ಮಿಡ್‌ಟೌನ್ :** ರೋಟರಿ ಮಿಡ್‌ಟೌನ್ ವೆಕ್‌ರಿಯೇಟ್ ಸ್ಪೇಸ್ ಸ್ಪೋರ್ಟ್ಸ್ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಸಹಾಯಕ ನಿರ್ದೇಶಕ ಹಾಗೂ ಕಬಡ್ಡಿ ಆಟಗಾರ್ತಿ ಶ್ರೀಮತಿ ಸುಶ್ಮಿತಾ ಪವಾರ್, ಪ್ರಶಸ್ತಿ ಪುರಸ್ಕೃತರು : ಖೋ ಖೋ ಚಾಂಪಿಯನ್ ಬಿ. ಚೈತ್ರ, ಸ್ಥಳ: ರೋಟರಿ ಸೆಂಟರ್, ಜೆಎಲ್‌ಬಿ ರಸ್ತೆ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ವಚನ ಬಾನುಲಿ–ಬಾನುಲಿ ಸರಣಿ, ಪ್ರಸ್ತುತಿ–ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಕನ್ನಡ ಚಿತ್ರಗೀತೆಗಳು, 8.30 ನಾ ಕಸ್ತೂರಿ ಅವರ ಪಾತಳದಲ್ಲಿ ಪಾಪಚ್ಚಿ–ಮಕ್ಕಳ ಸಾಹಿತ್ಯ ಕೃತಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್. ಎಸ್., 8.45 ಚಿತ್ರಗೀತೆಗಳು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ– ಕಿಶೋರಿ ಅಮೋನ್ಕರ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ ನಿಲಯದ ಕಲಾವಿದರಿಂದ ಆದಿತಾಳದಲ್ಲಿ ಲಯವಿನ್ಯಾಸ, 4.00 ಮಹಿಳಾರಂಗ, ನಾಟಕ–ಜೀವನ್ಮುಖಿ, ರಚನೆ–ಗಾಯತ್ರಿ ಸುಂದರೇಶ್, ನಿರ್ದೇಶನ ಹಾಗೂ ನಿರ್ಮಾಣ–ದಿಗ್ವಿಜಯ್ ಬಿ., 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ, ರೇಷ್ಮೆರಂಗ– ರೇಷ್ಮೆ ತಂತ್ರಜ್ಞಾನಗಳ ಕುರಿತ ಬಾನುಲಿ ಸರಣಿ, ಹೊಸ ರೇಷ್ಮೆ ಹುಳು ಹೈಬ್ರಿಡ್ ಮತ್ತು ಜನಪ್ರಿಯ ಡಬಲ್ ಹೈಬ್ರಿಡ್‌ಗಳ ಪ್ರಯೋಜನಗಳು ಈ ಕುರಿತು ಮೈಸೂರಿನ ಕೇಂದ್ರೀಯ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ.ಎಲ್. ಕುಸುಮಾ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಜುಗಲ್ ಬಂದಿ, ಲಾಲ್ಗುಡಿ ಜಿ. ಜಯರಾಮನ್–ವೈಯೋಲಿನ್ ವಾದನ ಹಾಗೂ ಅಂಜದ್ ಅಲಿ ಖಾನ್–ಸರೋದ್ ಶೈಲಿಯಲ್ಲಿ, 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು

ಕರ್ನಾಟಕದಲ್ಲಿ ರಾಜ್ಯ ಸರ್ಕಾರವೇ ಇಲ್ಲ

ಮಾಜಿ ಗೃಹ ಸಚಿವ ಅರಗ ಜ್ಞಾನೇಂದ್ರ ವಾಗ್ದಾಳಿ

ಬೆಂಗಳೂರು: ಕರ್ನಾಟಕದಲ್ಲಿ ರಾಜ್ಯ ಸರ್ಕಾರವೇ ಇಲ್ಲ ಎಂದು ಮಾಜಿ ಸಚಿವ ಅರಗ ಜ್ಞಾನೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.



ಸಿಎಂ–ಡಿಸಿಎಂ ಕುರ್ಚಿ ಕಿತ್ತಾಟ ದೆಹಲಿಗೆ ಶಿಫ್ಟ್ ವಿಚಾರಕ್ಕೆ ವಿಧಾನ ಸೌಧದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಕರ್ನಾಟಕದಲ್ಲಿ ರಾಜ್ಯ ಸರ್ಕಾರ ಇಲ್ಲ. ನಿನ್ನೆಯಿಂದ ದೆಹಲಿಗೆ ಕರ್ನಾಟಕ ಸರ್ಕಾರ ಸ್ಥಳಾಂ ತರ ಆಗಿದೆ. ಕರ್ನಾಟಕ ಸರ್ಕಾರ ದೆಹಲಿ ಯಿಂದ ಕಾರ್ಯ ನಿರ್ವಹಿಸುವ ದುಸ್ಥಿತಿಗೆ ಇಳಿದಿದೆ ಎಂದು ಕಿಡಿಕಾರಿದರು.

ಅಧಿಕಾರಕ್ಕೆ ಬಂದು ಮೂರು ವರ್ಷ ಆಗಿದೆ. ಅಧಿಕಾರದ ಹಪಹಪಿಯಲ್ಲಿ ಕಚ್ಚಾಡುತ್ತಿದ್ದಾರೆ. ಯಾರು ಸಿಎಂ ಆಗಬೇಕು, ಯಾವಾಗ ಆಗಬೇಕು ಅಂತ ಚರ್ಚೆ ನಡೆಯುತ್ತಿದೆ. ಜನರಿಗೆ ತೆರಿಗೆ ಹೊರೆ ಹಾಕಿ ಜನರನ್ನ ಸುಲಿಗೆ ಮಾಡುತ್ತಿದ್ದಾರೆ ಎಂದು ಹರಿಹಾಯ್ದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಮಣ್ಣು ಪಾಲು ಆಗಿದೆ. ಪೊಲೀಸರನ್ನ ಹೊಡೆದವರ ಕೇಸ್ ವಿತ್ ಡ್ರಾ ಮಾಡಿದ್ದಾರೆ. ಸ್ಪೀಕರ್ ಲೆಟರ್ ಕೊಟ್ಟರು ಅಂತ ಕೇಸ್ ವಾಪಸ್ ಪಡೆದಿದ್ದಾರೆ. ನಾನೇ ಅಂದು ಸಚಿವ ಆಗಿದ್ದಾಗ ಕೇಸ್ ಹಾಕಿಸಿದ್ದೆ. ಅಂತಹವರ ಕೇಸ್ ವಾಪಸ್ ಪಡೆದಿದ್ದಾರೆ. ಇದೊಂದು ದುರಂತ ಸನ್ನಿವೇಶ. ಮುಸ್ಲಿಮರ ತುಷ್ಟೀಕರಣ ಮಾಡುವ ಕೆಲಸ ಸದಾ ಮಾಡುತ್ತಿದ್ದಾರೆ. ಮೊನ್ನೆ ಭಟ್ಕಳದಲ್ಲಿ ಇದರ ಪರಿಣಾಮ ಮತ್ತೆ ನೋಡಿದ್ದೇವೆ. ಪುನಃ ಪೊಲೀಸರ ಮೇಲೆ ಹಲ್ಲೆ ಮಾಡುವ ಕೆಲಸ ಆಗಿದೆ ಎಂದು ಗುಡುಗಿದರು.

ಈ ಸರ್ಕಾರ ಇರೋ ಒಂದೊಂದು ದಿನವೂ ಕರ್ನಾಟಕದ ಜನರಿಗೆ ಹಿಂಸೆ ಮತ್ತು ತೊಂದರೆ. ಸಿಎಂ ಕುರ್ಚಿಗಾಗಿ ಕಿತ್ತಾಟ ಆಗುತ್ತಿದೆ. ಯಾರಿಗಾಗಿ, ಯಾವತ್ತು ಅಂತ ಕಿತ್ತಾಟ ಆಗುತ್ತಿದೆ. ಎಲ್ಲರೂ ಡೆಲ್ಲಿಗೆ ಹೋಗಿದ್ದಾರೆ. ಮಂತ್ರಿಗಳು ಯಾರು ಇಲ್ಲ. ಅಧಿಕಾರಿಗಳು ಯಾರು ಕೆಲಸ ಮಾಡುತ್ತಿಲ್ಲ. ಇದೊಂದು ದುರಂತದ ಸನ್ನಿವೇಶ. ಈ ಕಾಂಗ್ರೆಸ್ ಪಕ್ಷ ತೊಲಗಬೇಕು. ಒಳ್ಳೆಯ ಆಡಳಿತ ಬರಬೇಕು ಅಂತ ಜನ ನಿರೀಕ್ಷೆ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕೇವಲ 5 ರೂಗೆ ಮೀನು ಊಟ: ಬಂಗಾಳ ಸಿಎಂ ಸುವೇಂದು ಅಧಿಕಾರಿ ಹೊಸ ಘೋಷಣೆ

ಕೋಲ್ಕತಾ: ಪಶ್ಚಿಮ ಬಂಗಾಳದ ಸಿಎಂ ಸುವೇಂದು ಅಧಿಕಾರಿ ನೇತೃತ್ವದ ಬಿಜೆಪಿ ಸರ್ಕಾರ ಮತದಾರರಿಗೆ ಭರ್ಜರಿ ಆಫರ್ ಘೋಷಣೆ ಮಾಡಿದ್ದು, ಕೇವಲ 5 ರೂಪಾಯಿಗೆ ಮೀನು ಊಟ ಯೋಜನೆ ಘೋಷಿಸಿದೆ.

ರಾಜ್ಯ ಸರ್ಕಾರವು ಸುಮಾರು 400 ವಿಶೇಷ ಕ್ಯಾಂಟೀನ್‌ಗಳಲ್ಲಿ ವಾರಕ್ಕೆ ಎರಡು ದಿನ ಮೀನು–ಅನ್ನ ಊಟವನ್ನು ಕೇವಲ 5 ರೂ. ಸಬ್ಸಿಡಿ ದರದಲ್ಲಿ ಒದಗಿಸುವ ಯೋಜನೆ ಘೋಷಿಸಲಾಗಿದೆ.

ಚುನಾವಣಾ ಪ್ರಣಾಳಿಕೆಯಲ್ಲಿ ರುವಂತೆ ಮಹಿಳೆಯರಿಗೆ ಪ್ರತಿ ತಿಂಗಳು 3,000 ನೀಡುವ 'ಅನ್ನಪೂರ್ಣ ಯೋಜನೆ'ಗಾಗಿ ಮೇ 27ರಿಂದ ಅರ್ಜಿ ಫಾರ್ಮ್‌ಗಳನ್ನು ವಿತರಿಸಲಾಗುವುದು ಎಂದು ಮಂಗಳವಾರ ಘೋಷಿಸಿದೆ.

ನಾಡಿಯಾ ಜಿಲ್ಲೆಯ ಕಲ್ಯಾಣಿಯಲ್ಲಿ ನಡೆದ ಆಡಳಿತಾತ್ಮಕ ಸಭೆಯ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಸಿಎಂ ಸುವೇಂದು ಅಧಿಕಾರಿ, ಅನ್ನಪೂರ್ಣ ಯೋಜನೆಯ ಫಾರ್ಮ್‌ಗಳನ್ನು ನಾಳೆಯಿಂದ ರಾಜ್ಯ ಕಾರ್ಯಾಲಯ ದಿಂದ ವಿತರಿಸಲಾಗುತ್ತದೆ. ಈ ಯೋಜನೆಯ ಲಾಭ ಪಡೆಯಲು ರಾಜ್ಯದಲ್ಲಿರುವ ಎಲ್ಲಾ ಭಾರತೀಯರು ಅರ್ಹರಾಗಿದ್ದಾರೆ ಎಂದು ಹೇಳಿದರು.

ಅದೇ ವೇಳೆ, ಶಾಲೆಗಳು, ಕಾಲೇಜುಗಳು ಮತ್ತು ಧಾರ್ಮಿಕ ಸ್ಥಳಗಳ ಸುತ್ತಮುತ್ತ ಒಂದು ಕಿಲೋಮೀಟರ್ ವ್ಯಾಪ್ತಿಯಲ್ಲಿ ಮದ್ಯದಂಗಡಿಗಳಿಗೆ ಅನುಮತಿ ನೀಡುವುದಿಲ್ಲ ಎಂದು ಸರ್ಕಾರ ನಿರ್ಧರಿಸಿದೆ ಎಂದು ಅವರು ಹೇಳಿದರು.

ಇದಲ್ಲದೆ, ಪಶ್ಚಿಮ ಬಂಗಾಳ ಸರ್ಕಾರವು ಆಯುಷ್ ಇಲಾಖೆಯನ್ನು ಪ್ರತ್ಯೇಕವಾಗಿ ಸ್ಥಾಪಿಸಲು ನಿರ್ಧರಿಸಿದ್ದು, ಅದನ್ನು ಆರೋಗ್ಯ ಇಲಾಖೆಯಿಂದ ಬೇರ್ಪಡಿಸಲಾಗುವುದು ಎಂದು ಸಿಎಂ ಸುವೇಂದು ಅಧಿಕಾರಿ ಮಾಹಿತಿ ನೀಡಿದ್ದಾರೆ.

ಒಂದು ಹೊಸ ವ್ಯವಸ್ಥೆಯನ್ನು ಪರಿಚಯಿಸಲಾಗಿದೆ, ಅಲ್ಲಿ ಅದು ಆಡಳಿತಗಾರನ ಆಳ್ವಿಕೆಯಲ್ಲ, ಬದಲಾಗಿ ಕಾನೂನಿನ ಆಳ್ವಿಕೆ ಇರಲಿದೆ. 'ರಾಷ್ಟ್ರ ಮೊದಲು' ಎಂಬ ತತ್ವದಲ್ಲಿ ನಂಬಿಕೆ ಇಡುವ ವಿಶ್ವದ ಅತಿದೊಡ್ಡ ರಾಜಕೀಯ ಪಕ್ಷವು ಜನರ ಆಶೀರ್ವಾದದಿಂದ ಅಧಿಕಾರಕ್ಕೆ ಬಂದಿದೆ. ಹೊಸ ವ್ಯಕ್ತಿಗಳು ಶಾಸಕರು, ಸಚಿವರು ಮತ್ತು ಮುಖ್ಯಮಂತ್ರಿಗಳಾಗಿದ್ದಾರೆ. ನಮ್ಮ ದೃಷ್ಟಿಕೋನ ವೇನು, ನಾವು ರಾಜ್ಯವನ್ನು ಹೇಗೆ ಆಳಲು ಬಯಸುತ್ತೇವೆ, ನಮ್ಮ ಪ್ರಣಾಳಿಕೆ ಏನು, ಈ ವಿಚಾರಗಳು ಮೊದಲು ಆಡಳಿತದ ಪ್ರತಿಯೊಂದು ಹಂತವನ್ನು ತಲುಪಬೇಕು. ಆ ಉದ್ದೇಶದಿಂದಲೇ ನಾವು ಈ ಜನಸಂಪರ್ಕ ಭೇಟಿಗಳು ಮತ್ತು ಸಭೆಗಳನ್ನು ನಡೆಸುತ್ತಿದ್ದೇವೆ ಎಂದು ತಿಳಿಸಿದರು.

ಜನಸಂಖ್ಯಾ ಬದಲಾವಣೆ ಪರಿಶೀಲಿಸಲು ಕೇಂದ್ರದಿಂದ ಉನ್ನತ ಮಟ್ಟದ ಸಮಿತಿ

ನವದೆಹಲಿ: ಅಕ್ರಮ ವಲಸೆ ಮತ್ತು ಇತರ ಅಸಹಜ ಅಂಶಗಳಿಂದ ಉಂಟಾಗುವ 'ಅಸ್ವಾಭಾವಿಕ ಜನಸಂಖ್ಯಾ ಬದಲಾವಣೆ' ಎಂದು ವಿವರಿಸಿದ ವಿಷಯವನ್ನು ಪರಿಶೀಲಿಸಲು ಉನ್ನತ ಮಟ್ಟದ ಸಮಿತಿಯನ್ನು ರಚಿಸುವುದಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ಘೋಷಿಸಿದ್ದಾರೆ.

ಜನಸಂಖ್ಯೆ ಬದಲಾವಣೆಯ ವಿಷಯ ಭಾರತದ ಸಾರ್ವಭೌಮತ್ವ, ರಾಷ್ಟ್ರೀಯ ಭದ್ರತೆ, ಸಾಮಾಜಿಕ ಸಮತೋಲನ ಮತ್ತು ಬುಡಕಟ್ಟು ಸಮಾಜಗಳ ಸಂರಕ್ಷಣೆಗೆ ಒಂದು ಪ್ರಮುಖ ಸವಾಲಾಗಿದೆ ಎಂದು ಅಮಿತ್ ಶಾ ಹೇಳಿದ್ದಾರೆ.

ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಕಳೆದ ವರ್ಷದ ಸ್ವಾತಂತ್ರ್ಯ ದಿನದಂದು ಪ್ರಧಾನಿ ನರೇಂದ್ರ ಮೋದಿ ಅವರು ಸಮಿತಿ ರಚನೆಗೆ ಭರವಸೆ ನೀಡಿದ್ದರು ಎಂದು ಹೇಳಿದ್ದಾರೆ.

ಅಸ್ವಾಭಾವಿಕ ಜನಸಂಖ್ಯಾ ಬದಲಾವಣೆಗೆ ಕಾರಣವಾಗುವ ಒಳನುಸುಳುವಿಕೆ ಮತ್ತು ಇತರ ಕಾರಣಗಳು ಯಾವುದೇ ರಾಷ್ಟ್ರದ ವರ್ತಮಾನ ಮತ್ತು ಭವಿಷ್ಯಕ್ಕೆ ಬಹಳ ಮಹತ್ವದ ಸವಾಲನ್ನು ಒಡ್ಡುತ್ತವೆ. ಈ ಸವಾಲನ್ನು ಎದುರಿಸಲು, ಆಗಸ್ಟ್ 15, 2025ರಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 'ಜನಸಂಖ್ಯಾ ಬದಲಾವಣೆಯ ಉನ್ನತ ಮಟ್ಟದ ಸಮಿತಿ'ಯನ್ನು ಘೋಷಿಸಿದ್ದರು. ಸರ್ಕಾರವು ಈಗ ಈ ಸಮಿತಿಯನ್ನು ರಚಿಸಿದೆ ಎಂದು ನಿಮಗೆ ತಿಳಿಸಲು ನನಗೆ ಸಂತೋಷವಾಗಿದೆ ಎಂದು ಗೃಹ ಸಚಿವರು ಬರೆದಿದ್ದಾರೆ.

ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಪ್ರಕಾಶ್ ಪ್ರಭಾಕರ್ ನವೋಲೇಕರ್ ಅಧ್ಯಕ್ಷತೆಯಲ್ಲಿ ಸಮಿತಿ ರಚನೆಯಾಗಲಿದ್ದು, ಮಾಜಿ ಐಎಎಸ್ ಅಧಿಕಾರಿ ದುರ್ಗಾ ಶಂಕರ್ ಮಿಶ್ರಾ, ಮಾಜಿ ಐಪಿಎಸ್ ಅಧಿಕಾರಿ ಬಾಲಾಜಿ ಶ್ರೀವಾಸ್ತವ ಮತ್ತು ಅರ್ಥಶಾಸ್ತ್ರಜ್ಞ ಡಾ.ಶಮಿಕಾ ರವಿ ಮತ್ತು ಜನಗಣತಿ ಆಯುಕ್ತರು ಸದಸ್ಯರಾಗಿದ್ದಾರೆ. ಗೃಹ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿ (ವಿದೇಶಿಯರು–I) ಈ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಹೇಳಿದರು.

ಮರಕ್ಕೆ ಮೊಳೆ ಹೊಡೆದು ಅಳವಡಿಸಿದ್ದ ಖಾಸಗಿ ಶಾಲೆ ಫ್ಲೆಕ್ಸ್‌ಗಳ ತೆರವು

● 'ಮೈಸೂರು ಮಿತ್ರ' ವರದಿ ಬೆನ್ನಲ್ಲೇ ಪರಿಸರವಾದಿಗಳ ಖಡಕ್ ಎಚ್ಚರಿಕೆಯಿಂದ ಶಾಲೆಯವರಿಂದಲೇ ತೆರವು ಕಾರ್ಯ ● 'ಫ್ಲೆಕ್ಸ್–ಬ್ಯಾನರ್ ಮುಕ್ತ ಮೈಸೂರು' ಆಶಯ ಸಾಕಾರಕ್ಕೆ ಇದೇ ಪರಿಣಾಮಕಾರಿ ಕ್ರಮ

ಮೈಸೂರು, ಮೇ 26– ನಗರದ ವಿವಿಧೆಡೆ ಮರಗಳಿಗೆ ಮಳೆ ಹೊಡೆದು ಅಳವಡಿಸಿದ್ದ ಖಾಸಗಿ ಶಾಲೆಯೊಂದರ ಫ್ಲೆಕ್ಸ್‌ಗಳನ್ನು ಮಂಗಳವಾರ ಶಾಲೆಯವರೇ ತೆರವುಗೊಳಿಸಿದ್ದಾರೆ.



ಪರಶುರಾಮೇಗೌಡ

'ಮೈಸೂರು ಮಿತ್ರ' ವರದಿ ಪ್ರಕಟಿಸಿದ ಬೆನ್ನಲ್ಲೇ ಪರಿಸರವಾದಿಗಳು, ಶಾಲೆಯ ಆಡಳಿತ ಮಂಡಳಿಯವರಿಗೆ ಕರೆ ಮಾಡಿ ಜಾಡಿಸಿದ್ದರ ಪರಿಣಾಮ ತಾವೇ ಫ್ಲೆಕ್ಸ್‌ಗಳನ್ನು ತೆರವುಗೊಳಿಸಿದ್ದಾರೆ. ಅಲ್ಲದೆ ಪಶ್ಚಾತ್ತಾಪದ ಪ್ರತೀಕವಾಗಿ ಫ್ಲೆಕ್ಸ್ ತೆರವುಗೊಳಿಸುವ ವಿಡಿಯೋ ಹಂಚಿಕೊಂಡಿದ್ದಾರೆ.

ಮೈಸೂರು ನಗರಾದ್ಯಂತ ಮರಗಳು, ವಿದ್ಯುತ್ ಕಂಬಗಳು, ರಸ್ತೆ ಫಲಕಗಳು ಸೇರಿದಂತೆ ಕಂಡ ಕಂಡಲ್ಲಿ ಜಾಹೀರಾತು ಫ್ಲೆಕ್ಸ್ ಹಾಗೂ ಪೋಸ್ಟರ್ ಅಂಟಿಸುವ ಬಗ್ಗೆ 'ಮೈಸೂರು ಮಿತ್ರ'ನ ಸೋಮವಾರ(ಮೇ 26)ದ ಸಂಚಿಕೆಯಲ್ಲಿ 'ಮೈಸೂರು ನಗರದ ಅಂದಗೆಡಿಸುತ್ತಿವೆ ಅನಧಿಕೃತ ಜಾಹೀರಾತು ಫಲಕ–ಫ್ಲೆಕ್ಸ್‌ಗಳು' ಶೀರ್ಷಿಕೆಯಡಿ ಸಚಿತ್ರ ವರದಿ ಪ್ರಕಟಿಸಿ, ಆಡಳಿತ ವ್ಯವಸ್ಥೆ ಹಾಗೂ ಪರಿಸರವಾದಿಗಳ ಗಮನ ಸೆಳೆಯಲಾಗಿತ್ತು.

ಇದರ ಹಿನ್ನೆಲೆಯಲ್ಲಿ ಪರಿಸರಕ್ಕಾಗಿ ನಾವು ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ ಅವರು ಮರಗಳಿಗೆ ಮೊಳೆ ಹೊಡೆದು ಫ್ಲೆಕ್ಸ್ ಅಳವಡಿಸಿದ್ದ ಶಾಲೆಯವರಿಗೆ ಕರೆ ಮಾಡಿ, ಛಳಿ ಬಿಡಿಸಿದ್ದಾರೆ. ನೀವು ಮರಗಳಿಗೆ ಫ್ಲೆಕ್ಸ್‌ಗಳನ್ನು ಅಳವಡಿಸಿದ್ದೀರಿ ಎನ್ನುತ್ತಿದ್ದಂತೆ ಶಾಲೆಯವರು ಗೊತ್ತಾಯಿತು ಬೆಳಗ್ಗೆ ಕರೆ ಬಂದಿತ್ತು. ಹಾಗೆ ಮರಗಳಿಗೆ ಅಳವಡಿಸಿದ್ದು ತಪ್ಪು ಕೆಲಸ ವಹಿಸಿದ್ದ ಹುಡುಗರು ಸೂಚಿಸಿದ ಸ್ಥಳ ಬಿಟ್ಟು ಮರಗಳಿಗೆ ಹಾಕಿದ್ದಾರೆ ಎಂದು ಸಬೂಬು ಹೇಳಿದ್ದಾರೆ.



ಮರಗಳಿಗೆ ಮೊಳೆ ಹೊಡೆದು ಅಳವಡಿಸಿದ್ದ ಜಾಹೀರಾತು ಫ್ಲೆಕ್ಸ್ ಅನ್ನು ಶಾಲೆಯವರೇ ತೆರವು ಮಾಡುತ್ತಿರುವುದು.

ಮಾತು ಮುಂದುವರೆಸಿದ ಪರಶುರಾಮೇಗೌಡರು, ನಗರದಲ್ಲಿ ಎಲ್ಲಿಯೂ ಫ್ಲೆಕ್ಸ್ ಹಾಕುವಂತಿಲ್ಲ. ಇದಕ್ಕೇನಾದರೂ ನಗರ ಪಾಲಿಕೆಯಿಂದ ಅನುಮತಿ ಪಡೆದಿದ್ದೀರಾ ಎಂದು ಪ್ರಶ್ನಿಸಿದ್ದಾರೆ. ಆಗ ಅನುಮತಿ ಕೇಳಿದ್ದೀವಿ ಸರ್ ಎಂಬ ಪ್ರತ್ಯುತ್ತರ ಬಂದಿದೆ. ಅನುಮತಿ ಕೇಳಿದರೆ ಸಾಲದು, ಶುಲ್ಕ ಪಾವತಿಸಿ ಅನುಮತಿ ಪಡೆದು, ಅದರ ಪ್ರತಿಯನ್ನು ತಾವು ಅಳವಡಿಸುವ ಫ್ಲೆಕ್ಸ್‌ಗಳ ಮೇಲೂ ಅಂಟಿಸಬೇಕು. ಕೂಡಲೇ ತಮ್ಮ ಶಾಲೆಗೆ ಸಂಬಂಧಿಸಿದ ಫ್ಲೆಕ್ಸ್‌ಗಳನ್ನು ತೆರವುಗೊಳಿಸಿ, ಸಾರ್ವಜನಿಕವಾಗಿ ಕ್ಷಮೆಯಾಚಿಸದಿದ್ದರೆ ಶಾಲೆ ಮುಂದೆ ಪ್ರತಿಭಟನೆ ಮಾಡುತ್ತೇವೆ. ಈಗಾಗಲೇ ಪಾಲಿಕೆ ಆಯುಕ್ತರು, ಡಿಸಿಎಫ್ ಜೊತೆ ಮಾತನಾಡಿದ್ದು, ನಿಮ್ಮ ಶಾಲೆ ವಿರುದ್ಧ ಪ್ರಕರಣವನ್ನೂ ದಾಖಲಿಸುತ್ತಾರೆ ಎಂದು ಪರಶುರಾಮೇಗೌಡರು ಎಚ್ಚರಿಸಿದ್ದಾರೆ. ಪರಿಣಾಮ ಶಾಲೆಯವರು ಕೂಡಲೇ ಫ್ಲೆಕ್ಸ್ ತೆರವು ಕಾರ್ಯಾಚರಣೆ ಆರಂಭಿಸಿದ್ದಾರೆ.

ಮೈಸೂರು ಮಿತ್ರ ಫಲಶ್ರುತಿ ಮೈಸೂರು ಮಿತ್ರ

ಇದೇ ಪರಿಣಾಮಕಾರಿ ಕ್ರಮ: 'ಫ್ಲೆಕ್ಸ್, ಬ್ಯಾನರ್ ಮುಕ್ತ ಮೈಸೂರು' ಘೋಷಣೆ ಬಗ್ಗೆ ಸಾರ್ವಜನಿಕರಲ್ಲಿ ಅಸಹ್ಯ ಮೂಡಿದೆ. ಈ ಸಂಬಂಧ ಖಡಕ್ ಆದೇಶ ಹೊರಡಿಸಿರುವ ಮೈಸೂರು ನಗರ ಪಾಲಿಕೆ ಅಧಿಕಾರಿಗಳು, ನಂತರದ ಸ್ಥಿತಿಗತಿ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಹೀಗೆ ಅನಧಿಕೃತವಾಗಿ ಫ್ಲೆಕ್ಸ್, ಬ್ಯಾನರ್ ಅಳವಡಿಸುವವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುತ್ತೇವೆ ಎಂಬುದು ಕೇವಲ ಹೇಳಿಕೆಗಷ್ಟೇ ಸೀಮಿತವಾಗಿದೆ. ನಿಜವಾಗಿಯೂ ಮೈಸೂರನ್ನು ಫ್ಲೆಕ್ಸ್–ಬ್ಯಾನರ್ ಮುಕ್ತ ನಗರವನ್ನಾಗಿಸುವ ನಿಟ್ಟಿನಲ್ಲಿ ಆಸಕ್ತಿ ವಹಿಸುವುದಿಲ್ಲ. ಇಂತಹ ಸ್ಥಿತಿಯಲ್ಲಿ ಫ್ಲೆಕ್ಸ್ ಅಳವಡಿಸಿದ್ದವರಿಗೆ ಪರಿಸರವಾದಿಗಳು ಕರೆ ಮಾಡಿ, ಎಚ್ಚರಿಕೆ ನೀಡುವ ಮೂಲಕ ಸಂಬಂಧ ಪಟ್ಟವರೇ ತೆರವುಗೊಳಿಸುವಂತೆ ಮಾಡಿ ರುವುದು ಸರಿಯಾದ ಹಾಗೂ ಪರಿಣಾಮಕಾರಿ ಕ್ರಮವಾಗಿದೆ. ಈ ಕೆಲಸವನ್ನು ಮೈಸೂರಿನ ಬಗ್ಗೆ ಕಾಳಜಿ ಇರುವ ಸಾರ್ವಜನಿಕರೂ ಮಾಡಿದರೆ, ಪಾಲಿಕೆ ನಿದ್ರೆಯಲ್ಲಿದ್ದರೂ ಇಂತಹ ಅನಧಿಕೃತ ಫ್ಲೆಕ್ಸ್–ಬ್ಯಾನರ್, ಜಾಹೀರಾತುಗಳಿಗೆ ಬಹುಶಃ ಕಡಿವಾಣ ಬೀಳಬಹುದು.

ಮುಂಗಾರು ಮಳೆ–ಇಳೆ ಕಾವ್ಯಧಾರೆ, ಬಾನುಲಿ ಬರವಣಿಗೆ ಕಾರ್ಯಾಗಾರ

ಮೈಸೂರು, ಮೇ 26– ಮೇ 21 ರಂದು ದೇಶದ ಎಲ್ಲಾ ಆಕಾಶವಾಣಿ ಕೇಂದ್ರಗಳಿಗೆ 90 ವರ್ಷ ತುಂಬಿದ ಶುಭ ಸಂದರ್ಭದಲ್ಲಿ ಪ್ರಸಾರ ಭಾರತಿ ಸಾರ್ವಜನಿಕ ಪ್ರಸಾರ ಸೇವೆ ಆಕಾಶವಾಣಿ, ಮೈಸೂರು ಹಾಗೂ ಕರ್ನಾಟಕ ಸಂಘ ಮಂಡ್ಯ ಸಹಯೋಗದಲ್ಲಿ ಮಂಡ್ಯ ನಗರದಲ್ಲಿರುವ ಕೆ ವಿ ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಮುಂಗಾರು ಮಳೆ – ಇಳೆ ಕಾವ್ಯಧಾರೆ ಮತ್ತು ಬಾನುಲಿ ಬರವಣಿಗೆ ಕಾರ್ಯಾಗಾರ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಗಿಡಕ್ಕೆ ನೀರನ್ನು ಹಾಕುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಖ್ಯಾತ ವನ್ಯಜೀವಿ ಛಾಯಾಗ್ರಾಹಕಿ ಕವಯಿತ್ರಿ ಪ್ರಕೃತಿ ಪ್ರೇಮಿ ನಿವೃತ್ತ ಪ್ರಾಂಶುಪಾಲರಾದ ಡಾ. ಲೀಲಾ ಅಪ್ಪಾಜಿ ಉದ್ಘಾಟಿಸಿದರು.



ಬಳಿಕ ಮಾತನಾಡಿದ ಅವರು, ಇಂದಿನ ದಿನಗಳಲ್ಲಿ ಕವಿತೆಗಳು ನಿಂತಲ್ಲಿ ಕೂತಲ್ಲಿ ದಿಢೀರನೆ ಹುಟ್ಟುತ್ತವೆ ಇಂತಹ ಕವಿತೆಗಳು ಬರೆದವರಿಗೂ ಸಮಾಜಕ್ಕೂ ಹೆಚ್ಚು ಉಪಯೋಗವಿಲ್ಲ. ಹಾಗಾಗಿ, ಕವಿಗಳು ಅಧ್ಯಯನಶೀಲರಾಗಿ ಅನುಭವಿಸಿ ಕವಿತೆಗಳನ್ನು ಬರೆದು ತಾನು ಸಂತೋಷ ಪಟ್ಟು ಸಮಾಜಕ್ಕೆ ವಿಚಾರವನ್ನು ವಿನಿಮಯ ಮಾಡಬೇಕು ಈ ಜಗತ್ತಿನಲ್ಲಿ ಎಲ್ಲವೂ ವಿಸ್ಮಯ. ಹಾಗೆಯೇ ಕವಿತೆಯು ಮೂಲತಹ ವಿಶೇಷ ಹಾಗೂ ವಿಸ್ಮಯ ಎಂದು ತಿಳಿಸಿ ಕಾವ್ಯವು ಕಾವಾಗಿರದೆ ಬೆಳಕಾಗಿರಬೇಕು. ಅರ್ಥಗರ್ಭಿತ ಕಾವ್ಯ ಬರೆಯಲು ಸುಲಭದ ಮಾತಲ್ಲ ನಿಜಕ್ಕೂ ಕಷ್ಟ ಎಂದು ಯುವ ಕವಿಗಳಿಗೆ ತಿಳಿ ಹೇಳಿದರು.

ಪ್ರೊ. ಜಯಪ್ರಕಾಶ್ ಗೌಡ ಅವರು ಮೈಸೂರು ಆಕಾಶವಾಣಿ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಮಹನೀಯರ ಕಾರ್ಯಕ್ರಮಗಳ ಸಂದರ್ಶನ ಆಧಾರಿತ ಧ್ವನಿ ಭಂಡಾರ ಮಹತ್ವವಾದ ವಿಷಯ ಎಂದು ಇದೊಂದು ಶ್ಲಾಘನೀಯ ಕೆಲಸ ಎಂದು ಅಭಿನಂದಿಸಿದರು. ಬಾನುಲಿ ನಾಟಕಗಳ ಬಗ್ಗೆ ರಚನೆಕಾರರಾದ ವಸಂತ ಕವಲಿ, ಎಚ್ ಕೆ ರಂಗನಾಥ್ ಇವರನ್ನ ನೆನಪಿಸಿಕೊಂಡು ಇಂತಹ ವಿಶಿಷ್ಟ ಕಾರ್ಯಕ್ರಮವನ್ನು, ಮಂಡ್ಯ ನಗರದಲ್ಲಿ ಆಯೋಜಿಸಿದ್ದಕ್ಕೆ ಆಕಾಶವಾಣಿ ಅಧಿಕಾರಿಗಳಿಗೆ ಧನ್ಯವಾದಗಳು ತಿಳಿಸಿ ತಾವೇ ರಚಿಸಿದ ಕವಿತೆಯನ್ನ ವಾಚನ ಮಾಡಿದರು.

ನಿಲಯದ ಕಾರ್ಯಕ್ರಮ ನಿರ್ವಾಹಕ ಎನ್ ಕೇಶವ ಮೂರ್ತಿ, ಈ ಬಾರಿ ಮುಂಗಾರು ಮಳೆ ಕಡಿಮೆಯಾಗುತ್ತದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ ಎಂದು ಹೇಳಿ ನಿಮ್ಮ ಕವಿತೆಯ ಆಶಯಗಳಿಂದ ಮುಂಗಾರು ಮಳೆ ಹೆಚ್ಚಾಗಿ ಬಂದು ಇಳೆ ತಂಪಾಗಿಸಿ ನಮ್ಮನ್ನೆಲ್ಲ ಆನಂದಗೊಳಿಸಲಿ ಎಂದು ಆಶಯ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮೈಸೂರು ಆಕಾಶವಾಣಿ ನಿಲಯದ ಕಾರ್ಯಕ್ರಮಗಳ ಮುಖ್ಯಸ್ಥರಾದ

ಬೇದ್ರೆ ಎನ್. ಮಂಜುನಾಥ್, ನಿಮ್ಮೆಲ್ಲ ಮಾತುಗಳಿಗೆ ಭಾವನೆಗಳನ್ನ ನೀಡಿ ಸಮೃದ್ಧವಾದ ಭಾಷೆಯೊಂದಿಗೆ ನಿಲಯವು ಕಾರ್ಯಕ್ರಮಗಳನ್ನು ನೀಡುತ್ತಿದೆ ಎಂದರು.

ಕಾರಿಗೆ ಬೈಕ್ ಡಿಕ್ಕಿ; ಸವಾರನಿಗೆ ಗಾಯ

ಮೈಸೂರು, ಮೇ 26(ವಿವಿಹೆಚ್)– ನಗರದ ವಸ್ತುಪ್ರದರ್ಶನ ಮೇಲ್ಭಾಗದ ಮೈಸೂರು–ನಂಜನಗೂಡು ರಸ್ತೆಯಲ್ಲಿ ಮಂಗಳವಾರ ರಾತ್ರಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಬೈಕ್ ಸವಾರನೊಬ್ಬ ಗಾಯಗೊಂಡ ಘಟನೆ ನಡೆದಿದೆ. ವೇಗವಾಗಿ ಸಂಚರಿಸುತ್ತಿದ್ದ ಬೈಕ್ ಮತ್ತು ಕಾರಿನ ನಡುವೆ ಡಿಕ್ಕಿ ಸಂಭವಿಸಿದ ಪರಿಣಾಮ ಸವಾರ ರಸ್ತೆಗೆ ಬಿದ್ದು ಗಾಯಗೊಂಡಿದ್ದಾನೆ ಎಂದು ತಿಳಿದುಬಂದಿದೆ.

ಮೈಸೂರು–ಊಟಿ ರಸ್ತೆಯ ಮದುವನ ಸರ್ಕಲ್ ಮುಂಭಾಗದಲ್ಲಿ ಈ ಅಪಘಾತ ಸಂಭವಿಸಿದ್ದು, ವೇಗವಾಗಿ ಬಂದ ಬೈಕ್, ಕಾರಿಗೆ ಡಿಕ್ಕಿ ಹೊಡೆದಿದೆ ಎಂದು ತಿಳಿದುಬಂದಿದೆ ಪರಿಣಾಮ, ಬೈಕ್ ಸವಾರ ಗಾಯಗೊಂಡಿದ್ದಾನೆ. ಅಪಘಾತ ನಡೆದ ಸ್ಥಳದಲ್ಲಿದ್ದ ಸಾರ್ವಜನಿಕರು, 108ಕ್ಕೆ ಕರೆಮಾಡಿ ಗಾಯಗೊಂಡ ಬೈಕ್ ಸವಾರನನ್ನು ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ನೀಡಲಾಗುತ್ತಿದೆ. ಬೈಕ್ ಸವಾರನಿಗೆ ಅಲ್ಪ ಪ್ರಮಾಣದ ಗಾಯಗಳಾಗಿದ್ದು, ಕಾರಿನಲ್ಲಿದ್ದವರಿಗೆ ಯಾವುದೇ ಹಾನಿಯಾಗಿಲ್ಲ. ನರಸೀಪುರ ಮೂಲದ ಯೋಗೇಶ್ ಕುಮಾರ್ ಎಂಬಾತ ಬೈಕ್ ಓಡಿಸಿಕೊಂಡು ಬಂದು ಕಾರಿಗೆ ಡಿಕ್ಕಿ ಹೊಡೆದಿದ್ದಾನೆ ಎಂದು ಹೇಳಲಾಗುತ್ತಿದ್ದು, ಈ ಪ್ರಕರಣ ಸಂಬಂಧ ತನಿಖೆ ನಡೆಯುತ್ತಿದೆ ಎಂದು ಕೆಆರ್ ಟ್ರಾಫಿಕ್ ಠಾಣಾ ಪೊಲೀಸರು ಖಚಿತಪಡಿಸಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು, ಮೇ.26– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಹುಣಸೂರು ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಡಿಯಲ್ಲಿ ಖಾಲಿ ಇರುವ 04 ಅಂಗನವಾಡಿ ಕಾರ್ಯಕರ್ತೆ ಹಾಗೂ 36 ಅಂಗನವಾಡಿ ಸಹಾಯಕಿ ಹುದ್ದೆಗಳಿಗೆ ಗೌರವಧನದ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಆಫ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದ್ದು, ಆಸಕ್ತ ಮಹಿಳಾ ಅಭ್ಯರ್ಥಿಗಳು ಜೂನ್ 20 ರ ಸಂಜೆ 5.30 ರೊಳಗೆ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ದೂ: 08222–252254 ನ್ನು ಸಂಪರ್ಕಿಸಬಹುದೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂಪಿಯಿಂದ ಲಕ್ಷ್ಮಿ ಆನೆ ಸ್ಥಳಾಂತರಕ್ಕೆ ಸ್ಥಳೀಯರಿಂದ ಭಾರೀ ವಿರೋಧ; ಭಾವನಾತ್ಮಕ ಪ್ರತಿಭಟನೆ



ಹಂಪಿ: ಯುನೆಸ್ಕೋ ವಿಶ್ವ ಪರಂಪರೆಯ ತಾಣವಾದ ಹಂಪಿಯಲ್ಲಿ ಮಂಗಳವಾರ ಅರಣ್ಯ ಇಲಾಖೆಯು, ಪ್ರಸಿದ್ಧ ವಿರೂಪಾಕ್ಷ ದೇವಾಲಯಕ್ಕೆ ಸೇರಿದ 36 ವರ್ಷದ ಆನೆ ಲಕ್ಷ್ಮಿಯನ್ನು ಸ್ಥಳಾಂತರಿಸಲು ಕ್ರಮ ಕೈಗೊಂಡ ನಂತರ ಉದ್ವಿಗ್ನ ಪರಿಸ್ಥಿತಿ ಉಂಟಾಗಿದ್ದು, ಇದು ಸ್ಥಳೀಯ ನಿವಾಸಿಗಳು, ಭಕ್ತರು ಮತ್ತು ಪ್ರವಾಸಿ ಮಾರ್ಗದರ್ಶಕರಿಂದ ಭಾವನಾತ್ಮಕ ಪ್ರತಿಭಟನೆಗೆ ಕಾರಣವಾಯಿತು.

ವಿಷಯ ತಿಳಿಯುತ್ತಿದ್ದಂತೆ 500ಕ್ಕೂ ಹೆಚ್ಚು ಸ್ಥಳೀಯರು ದೇವಾಲಯದ ಆವರಣದ ಬಳಿ ಜಮಾಯಿಸಿ, ಅರಣ್ಯ ಇಲಾಖೆ ಕ್ರಮವನ್ನು ತೀವ್ರವಾಗಿ ವಿರೋಧಿಸಿದರು. ಹಲವು ವರ್ಷಗಳಿಂದ ಈ ಆನೆ ಹಂಪಿಯ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಗುರುತಿನ ಅವಿಭಾಜ್ಯ ಅಂಗವಾಗಿದೆ ಎಂದು ಹೇಳಿದರು. ಯಾವುದೇ ಸಂದರ್ಭದಲ್ಲೂ ಆನೆಯನ್ನು ಪಾರಂಪರಿಕ ಪಟ್ಟಣದಿಂದ ತೆಗೆದುಕೊಂಡು ಹೋಗಬಾರದು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಅರಣ್ಯ ಅಧಿಕಾರಿಗಳು ಆನೆಯನ್ನು ಸಾಗಿಸಲು ಲಾರಿಯೊಂದಿಗೆ ಬಂದಾಗ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತು. ಆಕ್ರೋಶಗೊಂಡ ಸ್ಥಳೀಯರು ಅಧಿಕಾರಿಗಳನ್ನು ತಡೆದ ಕಾರಣ ಪ್ರದೇಶದಲ್ಲಿ ಭಾರೀ ಪೊಲೀಸ್ ನಿಯೋಜನೆ ಮಾಡಲಾಯಿತು. ಯಾವುದೇ ಅಹಿತಕರ ಘಟನೆಗಳನ್ನು ತಡೆಗಟ್ಟಲು ವಿಜಯನಗರ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ ಮತ್ತು ಹಿರಿಯ ಅಧಿಕಾರಿಗಳು ಸ್ಥಳದಲ್ಲಿಯೇ ಮೊಕ್ಕಾಂ ಹೂಡಿದ್ದರು.

ಅರಣ್ಯ ಇಲಾಖೆಯ ಮೂಲಗಳ ಪ್ರಕಾರ, ಆನೆಯ ವಯಸ್ಸು, ಪುನರಾವರ್ತಿತ ಗಾಯಗಳು ಮತ್ತು ಆರೋಗ್ಯ ಸಂಬಂಧಿತ ಸಮಸ್ಯೆಗಳನ್ನು ಪರಿಗಣಿಸಿ ಲಕ್ಷ್ಮಿಯನ್ನು ಸ್ಥಳಾಂತರಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ. ವಿಶೇಷ ಆರೈಕೆ ಮತ್ತು ಮೇಲ್ವಿಚಾರಣೆಗಾಗಿ ಆನೆಯನ್ನು ಸ್ಥಳಾಂತರಿಸಲು ಅಧಿಕಾರಿಗಳು ಯೋಜಿಸಿದ್ದಾರೆ ಎಂದು ವರದಿಯಾಗಿದೆ.

ಆದಾಗ್ಯೂ, ಈ ಕ್ರಮವು ಆನೆಯ ಮಾವುತ ರಾಜಣ್ಣರಿಂದ ಭಾವನಾತ್ಮಕ ಪ್ರತಿಭಟನೆ ವ್ಯಕ್ತವಾಯಿತು. ಲಕ್ಷ್ಮಿಯನ್ನು ಹಂಪಿಯಿಂದ ಬೇರ್ಪಡಿಸಬೇಡಿ ಎಂದು ರಾಜಣ್ಣ ಅಧಿಕಾರಿಗಳ ಮುಂದೆ ಕಣ್ಣೀರಿಟ್ಟರು.

ರಾಜ್ಯ ಪ್ರವಾಸಿ ಮಾರ್ಗದರ್ಶಿ ಸಂಘದ ಕಾರ್ಯದರ್ಶಿ ವಿರೂಪಾಕ್ಷಿ ವಿ ಹಂಪಿ, ಹಂಪಿಯ ಜನರು ಸಾಂಪ್ರದಾಯಿಕವಾಗಿ ವಿಶ್ವದ ಅತ್ಯಂತ ಶ್ರೀಮಂತ ಸಾಮ್ರಾಜ್ಯಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟ ವಿಜಯನಗರ ಸಾಮ್ರಾಜ್ಯದ ಕಾಲದಿಂದಲೂ ಆನೆಗಳನ್ನು ನೋಡಿಕೊಳ್ಳುತ್ತಿದ್ದಾರೆ ಎಂದು ಹೇಳಿದರು.

ಏತನ್ಮಧ್ಯೆ, ಸಾಮಾಜಿಕ ಮಾಧ್ಯಮಗಳಲ್ಲಿ 'ಹಂಪಿ ಲಕ್ಷ್ಮಿಯನ್ನು ಉಳಿಸಿ' ಪೋಸ್ಟರ್‌ಗಳ ಮೂಲಕ ಅಭಿಯಾನ ಆರಂಭಿಸಿದ್ದು, ಸ್ಥಳೀಯರು ಈ ಆನೆ ಹಂಪಿಯಲ್ಲಿಯೇ ಉಳಿಯಬೇಕೆಂದು ಒತ್ತಾಯಿಸಿದ್ದಾರೆ.

ಉಚಿತ ಬಿಎಂಡಿ ತಪಾಸಣಾ ಶಿಬಿರ

ಮೈಸೂರು: ಮೈಸೂರಿನ ಅಥರ್ವ ಮಲ್ಟಿಸ್ಪೆಷಾಲಿಟಿ ಆಯುರ್ವೇದಿಕ್ ಹೀಲಿಂಗ್ ಸೆಂಟರ್ ವತಿಯಿಂದ ಮೇ 27ರಂದು ಬೆಳಗ್ಗೆ 9.30ಕ್ಕೆ ನಂ.40/ಸಿ, ಕಂಠಿ ಕನ್ವೆನ್ಷನ್ ಹಾಲ್ ಹತ್ತಿರ, ಮಹರ್ಷಿ ಸ್ಕೂಲ್ ಹಿಂಭಾಗ, ವಿದ್ಯಾರಣ್ಯಪುರಂ ಇಲ್ಲಿ ಉಚಿತ ಬಿಎಂಡಿ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 8151929394.

ಕಾಂಗ್ರೆಸ್‌ಗೆ ಹೈಕಮಾಂಡ್; ಜೆಡಿಎಸ್‌ಗೆ ಜಾತಿ; ಬಿಜೆಪಿಗೆ ಹಿಂದುತ್ವವೇ ಆತ್ಮ

● ಮಾಜಿ ಸಚಿವ ಸಿ.ಟಿ.ರವಿ ಬಣ್ಣನೆ ● ಕಾಂಗ್ರೆಸ್‌ನ ಈ ನಿಲುವು ದೇಶವನ್ನು ದುರ್ಬಲಗೊಳಿಸಿದೆ

ಮೈಸೂರು, ಮೇ 26(ವಿವಿಹೆಚ್)– ಕಾಂಗ್ರೆಸ್‌ಗೆ ಹೈಕಮಾಂಡ್ ಜೆಡಿಎಸ್‌ಗೆ ಜಾತಿ ಆದರೆ ಹಿಂದುತ್ವವೇ ಬಿಜೆಪಿಯ ಆತ್ಮ ಎಂದು ಮಾಜಿ ಸಚಿವ ಸಿ.ಟಿ.ರವಿ ಅಭಿಪ್ರಾಯಿಸಿದರು.

ನಗರದ ಪ್ರಜಾಪಿತ ಬ್ರಹ್ಮ ಕುಮಾರಿ ಆಶ್ರಮ ಆವರಣದಲ್ಲಿ ಭಾನುವಾರ ನಡೆದ ಪಂಡಿತ್ ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ 2026ರ ಮೈಸೂರು ಮಹಾನಗರ ಪ್ರಶಿಕ್ಷಣ ವರ್ಗದ ಸಮಾರೋಪ ಸಮಾರಂಭವನ್ನು ಉದ್ದೇಶಿಸಿ ಅವರು ಮಾತನಾಡಿದರು.



ಮೈಸೂರು ಮಹಾನಗರ ಪ್ರಶಿಕ್ಷಣ ವರ್ಗದ ಸಮಾರೋಪ ಸಮಾರಂಭವನ್ನು ಉದ್ದೇಶಿಸಿ ಮಾಜಿ ಸಚಿವ ಸಿ.ಟಿ.ರವಿ ಮಾತನಾಡಿದರು.

> ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ಎಸ್‌ಸಿಪಿ, ಟಿಎಸ್‌ಪಿ ಹಣ ವಿನಿಯೋಗಿಸುತ್ತಿದೆ. ಹೀಗಾಗಿ ಪ.ಜಾತಿ, ಪ.ಪಂಗಡಕ್ಕೆ ಅನ್ಯಾಯವಾಗುತ್ತಿದೆ. ಈ ವಿಷಯವನ್ನು ನಾವು ಪಕ್ಷವಾಗಿ ನ್ಯಾಯಾಲಯದಲ್ಲಿ ಪ್ರಶ್ನಿಸದೇ, ಜನತಾ ನ್ಯಾಯಾಲಯದ ಮುಂದಿಡುತ್ತೇವೆ.
> – ಸಿ.ಟಿ.ರವಿ, ಮಾಜಿ ಸಚಿವ.

ಬಂಡವಾಳ ಹಾಕಿ ಬಿಜೆಪಿ ಪಕ್ಷ ಕಟ್ಟಿಲ್ಲ. ಬದಲಾಗಿ ಕಾರ್ಯಕರ್ತರ ಬೆವರು ಹರಿಸಿ ಹಾಗೂ ವಿಚಾರ, ಸಂವಾದಗಳ ಮೂಲಕ ಕಟ್ಟಲಾಗಿದೆ ಬಿಜೆಪಿಗೆ ಹಿಂದುತ್ವವೇ ಆತ್ಮ ಹಾಗೂ ಕಾರ್ಯಕರ್ತರೇ ಪಕ್ಷದ ದೊಡ್ಡ ಶಕ್ತಿಯಾಗಿದ್ದಾರೆ ಎಂದು ಶ್ಲಾಘನೆ ವ್ಯಕ್ತಪಡಿಸಿದರು.

ಜನ ನಾಯಕತ್ವ ಜಾಹಿರಾತು ಮೂಲಕ ಉದ್ಭವವಾಗದು. ಸಾಮಾಜಿಕ ಜಾಲತಾಣದಲ್ಲಿ ಹೊಗಳಿಕೊಂಡರೆ, ಫ್ಲೆಕ್ಸ್ ಮೂಲಕ ನಾಯಕತ್ವ ಪಡೆಯಲಾಗದು. ಜನಪರ ಕಾರ್ಯ, ಹೋರಾಟದಿಂದ ಮಾತ್ರ ಅದು ಸೃಷ್ಟಿಯಾಗುತ್ತದೆ. ಸಿಕ್ಕ ಅವಕಾಶ ಬಳಕೆ ಮಾಡಿಕೊಂಡು ನೆರೆ ಹೊರೆಯವರ ಕಷ್ಟ–ಸುಖಗಳಿಗೆ ನೆರವಾಗುವ ಮೂಲಕ ಪ್ರಭಾವ ಬೀರಬೇಕು. ತನ್ಮೂಲಕ ಕ್ರಮೇಣ ನಾಯಕರಾಗಿ ರೂಪುಗೊಳ್ಳಬೇಕೆಂದು ಸಲಹೆ ನೀಡಿದರು.

ಜನಪರ ಕಾರ್ಯ ಹಾಗೂ ಜನಪರ ಹೋರಾಟದ ಮೂಲಕ ಜನರಿಂದಲೇ ನಮ್ಮ ನಾಯಕ ಎಂಬ ಅನುಭೂತಿ ಹುಟ್ಟಿಸಬೇಕು. ಇಲ್ಲವಾದಲ್ಲಿ ಜನ ನಾಯಕತ್ವ ಬೆಳೆಯಲು ಸಾಧ್ಯವಿಲ್ಲ. ಜನ ನಾಯಕತ್ವ ಇಲ್ಲದೆ ಜನಾಂದೋಲನ ಆಗುವುದಿಲ್ಲ. ಜನಾಂದೋಲನವಿಲ್ಲದೇ ಪರಿಪೂರ್ಣತೆ ಸಾಧ್ಯವಿಲ್ಲ ಎಂದು ವಿವರಿಸಿದರು.

ಬಿಜೆಪಿ ಸರ್ವ ವ್ಯಾಪಿ, ಸರ್ವ ಸ್ಪರ್ಶಿ ಎಂಬ ಧ್ಯೇಯವನ್ನು ಒಳಗೊಂಡಿದೆ. ಇದರಡಿಯಲ್ಲಿ ಪ್ರತಿಯೊಬ್ಬ ಕಾರ್ಯಕರ್ತರು ತಮಗೆ ದೊರೆತ ಸ್ಥಾನಮಾನ, ಅಧಿಕಾರ ಎಂದು ಭಾವಿಸದೇ ಜವಾಬ್ದಾರಿ ಎಂದು ತಿಳಿದು ಕೆಲಸ ಮಾಡಬೇಕು. ಬಿಜೆಪಿಗೆ ಅಧಿಕಾರ ಕೇವಲ ಸಾಧನ ಮಾತ್ರ, ಅಂತಿಮವಲ್ಲ ಎಂಬುದನ್ನು ಎಂದಿಗೂ ಮರೆಯಬಾರದು. ಜನ ಸೇವೆಯಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳುವ ಕೆಲಸ ಕಾರ್ಯಕರ್ತರಲ್ಲಿ ಆಗಬೇಕು ಎಂದರು.

ಬಿಜೆಪಿ, ಪಕ್ಷದ ಹಿತದೊಂದಿಗೆ ರಾಜೀ ಮಾಡಿಕೊಳ್ಳದೇ ದೇಶ ಮೊದಲು ಎಂಬ ತತ್ತ್ವದ ಮೇಲೆ ಕೆಲಸ ಮಾಡುತ್ತಿದೆ. ಆದರೆ ಕಾಂಗ್ರೆಸ್ ದೇಶಕ್ಕಿಂತ ಪಕ್ಷ ಮೊದಲು ಎಂಬ ಆಧಾರದಲ್ಲಿ ಕೆಲಸ ಮಾಡುತ್ತದೆ. ಆ ಕಾರಣಕ್ಕಾಗಿಯೇ ಮುಖ್ಯ ಮಂತ್ರಿ ಹಾಗೂ ಉಪಮುಖ್ಯಮಂತ್ರಿ ದೆಹಲಿಗೆ ಓಡಿ ಹೋಗಿದ್ದಾರೆ. ಈ ಎಲ್ಲಾ ಕಾರಣಗಳಿಂದಾಗಿ ಕಾಂಗ್ರೆಸ್ ಪಕ್ಷ ಹಾಗೂ ಅವರನ್ನು ನಂಬಿದ್ದ ದೇಶವೂ ದುರ್ಬಲವಾಯಿತು ಎಂದು ಕಿಡಿಕಾರಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಒಂದು ಕಡೆ ರಾಜ್ಯ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳನ್ನು ಜನರಿಗೆ ತಿಳಿಸಬೇಕು. ಮತ್ತೊಂದು ಕಡೆ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಸಾಧನೆಯನ್ನು ಜನರ ಮನೆ ಮನೆಗೆ ತಲುಪಿಸುವ ಮೂಲಕ 2028ಕ್ಕೆ ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರಬೇಕಿದೆ ಎಂದರು.

ಈ ವೇಳೆ ಮಾಜಿ ಮೇಯರ್‌ಗಳಾದ ಸಂದೇಶ್ ಸ್ವಾಮಿ, ಶಿವಕುಮಾರ್, ಪ್ರಶಿಕ್ಷಣ ವರ್ಗದ ಪ್ರಧಾನ ಕಾರ್ಯದರ್ಶಿಗಳಾದ ರುದ್ರಮೂರ್ತಿ, ರಘು, ಸೋಮಸುಂದರ್, ವಾಣೀಶ್, ಫಣೀಶ್, ರಾಜೇಶ್ ಹಾಗೂ ರಾಬಿನ್ ಉತ್ತಪ್ಪ ಉಪಸ್ಥಿತರಿದ್ದರು.

ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ಚಿನ್ನದ ಗಟ್ಟಿ, ಆಭರಣಗಳನ್ನು ಕದ್ದ 9 ಕಾರ್ಮಿಕರ ಬಂಧನ

ಬೆಂಗಳೂರು: ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಚಿನ್ನದ ಗಟ್ಟಿಗಳು ಮತ್ತು ಆಭರಣಗಳನ್ನು ಕದ್ದ ಆರೋಪದ ಮೇಲೆ ಒಂಬತ್ತು ಕಾರ್ಮಿಕರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.



ನಗರತ್‌ಪೇಟೆ ಮುಖ್ಯ ರಸ್ತೆಯಲ್ಲಿರುವ ಖಾಸಗಿ ಚಿನ್ನದ ಕಂಪನಿಯ ಮಾಲೀಕರು ಮೇ 12 ರಂದು ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ ನಂತರ ಈ ಪ್ರಕರಣ ಬೆಳಕಿಗೆ ಬಂದಿದೆ.

ದೂರಿನ ಪ್ರಕಾರ, ಕಳೆದ ಆರು ತಿಂಗಳಿನಿಂದ ಕಂಪನಿಯಲ್ಲಿ ಚಿನ್ನ ಮತ್ತು ಬೆಳ್ಳಿ ಕೆಲಸ ಮಾಡುತ್ತಿದ್ದ ಒಂಬತ್ತು ಕಾರ್ಮಿಕರು, ಮೇ 11 ರ ರಾತ್ರಿ ಆವರಣದಿಂದ ಚಿನ್ನದ ಗಟ್ಟಿಗಳು ಮತ್ತು ಆಭರಣಗಳನ್ನು ಕದ್ದು ಪರಾರಿಯಾಗಿದ್ದಾರೆ ಎಂದು ಆರೋಪಿಸಲಾಗಿದೆ.

ತನಿಖೆಯ ಸಮಯದಲ್ಲಿ, ಒಂಬತ್ತು ಕಾರ್ಮಿಕರು ಬೆಂಗಳೂರಿನಿಂದ ವಿಶಾಖಪಟ್ಟಣ ಮೂಲಕ ಪಶ್ಚಿಮ ಬಂಗಾಳಕ್ಕೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದಾರೆ ಎಂದು ತಿಳಿದು ಬಂದಿದ್ದು, ಪೊಲೀಸರು ವಿಶ್ವಾಸಾರ್ಹ ಮಾಹಿತಿಯನ್ನು ಆಧರಿಸಿ ಆರೋಪಿಗಳನ್ನು ಬಂಧಿಸಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಖಚಿತ ಮಾಹಿತಿಯ ಮೇರೆಗೆ, ಮೇ 13 ರಂದು ಆಂಧ್ರಪ್ರದೇಶದ ವಿಶಾಖಪಟ್ಟಣದ ರೈಲ್ವೆ ನಿಲ್ದಾಣದ ಬಳಿ ಒಂಬತ್ತು ಕಾರ್ಮಿಕರನ್ನು ಕದ್ದ ಚಿನ್ನದ ಗಟ್ಟಿಗಳು ಮತ್ತು ಆಭರಣಗಳೊಂದಿಗೆ ಬಂಧಿಸಲಾಗಿದೆ ಎಂದು ಅಧಿಕಾರಿ ಹೇಳಿದ್ದಾರೆ.

ವಿಚಾರಣೆಯ ಸಮಯದಲ್ಲಿ, ಆರೋಪಿಗಳು ಅಪರಾಧದಲ್ಲಿ ಭಾಗಿಯಾಗಿರುವುದಾಗಿ ಒಪ್ಪಿಕೊಂಡಿದ್ದು, ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು ಮತ್ತು ಎರಡು ದಿನಗಳ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ವಿವರವಾದ ವಿಚಾರಣೆಯ ಸಮಯದಲ್ಲಿ, ಆರೋಪಿಗಳು ತಮ್ಮ ಸಂಬಳವನ್ನು ನಿಯಮಿತವಾಗಿ ಪಾವತಿಸದ ಕಾರಣ ಮತ್ತು ಸುಲಭವಾಗಿ ಹಣ ಗಳಿಸುವ ಉದ್ದೇಶದಿಂದ ಈ ಕಳ್ಳತನ ಮಾಡಿದ್ದೇವೆ ಎಂದು ಹೇಳಿರುವುದಾಗಿ ಅಧಿಕಾರಿ ತಿಳಿಸಿದ್ದಾರೆ.

ಬಂಧಿತ ಆರೋಪಿಗಳಿಂದ ಪೊಲೀಸರು ಒಟ್ಟು 618 ಗ್ರಾಂ ಚಿನ್ನದ ಗಟ್ಟಿಗಳು ಮತ್ತು ಆಭರಣಗಳ ಸೇರಿದಂತೆ 89 ಲಕ್ಷ ರೂ. ಮೌಲ್ಯದ ಚಿನ್ನವನ್ನು ವಶಪಡಿಸಿಕೊಂಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಶಿಕ್ಷಕ : ವರ್ತಮಾನ ಕಾಲ, ಭೂತಕಾಲ ಮತ್ತು ಭವಿಷ್ಯತ್ ಕಾಲಕ್ಕೆ ಉದಾಹರಣೆ ಕೊಡು.

ವಿದ್ಯಾರ್ಥಿ : ಮೇಡಂ, ನಿನ್ನೆ ನಾನು ನಿಮ್ಮ ಮಗಳನ್ನು ನೋಡಿದೆ. ಇವತ್ತು ಅವಳನ್ನು ಪ್ರೀತಿ ಮಾಡ್ತಾ ಇದ್ದೀನಿ. ನಾಳೆ ಅವಳನ್ನು ಮದುವೆ ಆಗ್ತೀನಿ...!

ಮೈಸೂರು ಮಿತ್ರ

ಬುಧವಾರ, ಮೇ 27, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಒಳ್ಳೆಯ ನಿರ್ಧಾರ ನಿನ್ನನ್ನು ಅರ್ಥ ಗೆಲ್ಲಿಸಿದರೆ,
ಇನ್ನರ್ಧ ಪ್ರಯತ್ನ ಮತ್ತು ಪರಿಶ್ರಮ ಗೆಲ್ಲಿಸುತ್ತದೆ.

ವೇದ ಸುಳ್ಳಾದರೂ
ಗಾದೆ ಸುಳ್ಳಾಗದು } ಸಲುಗೆ ಕೊಟ್ಟರೆ ಸಾಕೂ ಹೆಗ್ಗಣವೂ ಸಹ ಏರುವುದು ಹೆಗಲಿಗೆ.

ನಿಮ್ಮ ಪತ್ರಗಳು

ಈ ಪೊಲೀಸ್ ಅಧಿಕಾರಿಗಳಿಗೆ ಮಾನ ಮರ್ಯಾದೆ ಇದೆಯಾ?

ಮಾನ್ಯರೆ,



ನಮ್ಮ ಪಕ್ಕದ ರಾಜ್ಯದ ತಮಿಳುನಾಡಿನಲ್ಲಿ, ಕಳೆದ ಕೆಲವು ದಿನಗಳ ಹಿಂದೆ 10 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ನಡೆದು, ಆಕೆ ಕೊಲೆಯಾದ ವಿಷಯಕ್ಕೆ ಸಂಬಂಧಿಸಿದಂತೆ ನಿನ್ನೆ ದಿನ ತಮಿಳುನಾಡಿನ ಹಿರಿಯ ಪೊಲೀಸ್ ಅಧಿಕಾರಿಗಳು ಪತ್ರಿಕಾಗೋಷ್ಠಿ ಕರೆದು, ಮಾಹಿತಿ ನೀಡಿದ ಪರಿ ನಾಚಿಕೆಗೇಡಿನ ಸಂಗತಿ. ನಗುತ್ತಾ, ಹಾಸ್ಯ ಮಾಡುತ್ತಾ, ಸಂತೋಷದಿಂದ ಈ ಗಂಭೀರ ಪ್ರಕರಣವನ್ನು ಪತ್ರಕರ್ತರ ಮುಂದೆ ವಿವರಿಸುತ್ತಿರುವುದು ಎಲ್ಲಾ ಕನ್ನಡ ದೃಶ್ಯ ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಹೆಣ್ಣು ಮಕ್ಕಳಿಲ್ಲವೇ, ಅಕ್ಕ- ತಂಗಿಯರಿಲ್ಲವೇ, ಅತ್ಯಾಚಾರ ನಡೆದು ಕೊಲೆ ಆದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸದೇ ಗಹಗಹಿಸಿ ನಗುವುದು ನಾಗರಿಕ ಸಮಾಜವೇ ತಲೆ ತಗ್ಗಿಸುವ ಘಟನೆ. ಇದರಲ್ಲಿ ಒಬ್ಬ ಮಹಿಳಾ ಪೊಲೀಸ್ ಅಧಿಕಾರಿಯು ಇರುವುದು ನಾಚಿಗೆಗೇಡಿನ ಸಂಗತಿ. ಈ ಪೊಲೀಸ್ ಅಧಿಕಾರಿಗಳಿಗೆ ಸ್ವಲ್ಪ ಮಟ್ಟಿಗಾದರೂ ಮಾನ ಮರ್ಯಾದೆ ಇದೇಯಾ? ಇವರು ಪೊಲೀಸ್ ಇಲಾಖೆಯಲ್ಲಿ ಕೆಲಸ ನಿರ್ವಹಿಸಲು ಅಯೋಗ್ಯರು. ಹಿರಿಯ ಪೊಲೀಸ್ ಅಧಿಕಾರಿಗಳೇ ಈ ರೀತಿ ವರ್ತಿಸಿದರೆ, ಇನ್ನು ಇವರ ಕೆಳಗಿನ ಅಧಿಕಾರಿಗಳು ಹೇಗೆ ವರ್ತಿಸುತ್ತಾರೆ? ಇಂತಹ ಅಧಿಕಾರಿಗಳಿಂದ ಸಾಮಾನ್ಯ ನಾಗರಿಕರು ರಕ್ಷಣೆ ನಿರೀಕ್ಷಿಸಲು ಸಾಧ್ಯವೇ? ಇಂತಹ ಕೆಟ್ಟ ಅಧಿಕಾರಿಗಳನ್ನು ಸರ್ಕಾರ ಸೇವೆಯಿಂದ ವಜಾ ಮಾಡಲು ತಕ್ಷಣ ಕ್ರಮ ಕೈಗೊಳ್ಳಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ಆರೋಗ್ಯಕ್ಕೆ ಒಳ್ಳೆಯತನದ ಗ್ಯಾರಂಟಿ ಇಲ್ಲ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಸಾಧಕರು ಅಥವಾ ಸಜ್ಜನರು ಅಕಾಲಿಕ ಮರಣಕ್ಕೆ ತುತ್ತಾದಾಗ, 'ದೇವರು ಒಳ್ಳೆಯವರಿಗೆ ಅನ್ಯಾಯ ಮಾಡಿದ' ಎಂಬ ಮಾತುಗಳನ್ನು ನಾವು ಕೇಳುತ್ತಿರುತ್ತೇವೆ. ಆದರೆ, ವಾಸ್ತವದಲ್ಲಿ ಪ್ರಕೃತಿ ಭಾವನೆಗಳ ಮೇಲೆ ನಡೆಯುವ ವ್ಯವಸ್ಥೆಯಲ್ಲ; ಅದು ಕೇವಲ 'ಕಾರಣ ಮತ್ತು ಪರಿಣಾಮ' ಎಂಬ ವೈಜ್ಞಾನಿಕ ನಿಯಮದ ಮೇಲೆ ಚಲಿಸುತ್ತದೆ.

ಬೆಂಕಿಯ ಗುಣ ಸುಡುವುದು; ಅಲ್ಲಿ ಕೈ ಇಟ್ಟವರು ದಾನಿಯೋ ಅಥವಾ ದ್ರೋಹಿಯೋ ಎಂದು ಬೆಂಕಿ ತಾರತಮ್ಯ ಮಾಡುವುದಿಲ್ಲ. ನಮ್ಮ ದೇಹವೂ ಒಂದು ಯಂತ್ರವಿದ್ದಂತೆ. ಇದಕ್ಕೆ ಬೇಕಾದ ಪೌಷ್ಟಿಕ ಆಹಾರ, ಗಾಢ ನಿದ್ದೆ ಮತ್ತು ನಿರಂತರ ವ್ಯಾಯಾಮವನ್ನು ನೀಡದಿದ್ದಾಗ ಅದು ಕೆಟ್ಟುಹೋಗುವುದು ಸಹಜ. ಇಲ್ಲಿ ನಮ್ಮ 'ಒಳ್ಳೆಯತನ' ರಕ್ತದ ಸಕ್ಕರೆ ಪ್ರಮಾಣವನ್ನಾಗಲಿ ಅಥವಾ ಹೃದಯದ ಬಡಿತವನ್ನಾಗಲಿ ನಿಯಂತ್ರಿಸುವುದಿಲ್ಲ.

ಸಜ್ಜನಿಕೆ ಮನಸ್ಸಿಗೆ ಶಾಂತಿ ನೀಡಬಹುದು. ಆದರೆ, ಶರೀರದ ಜೀವಕೋಶಗಳಿಗೆ ನಾವು ದೇವರಿಗೆ ಹೊಡೆದ ತೆಂಗಿನಕಾಯಿಗಿಂತ, ನಾವು ಸೇವಿಸಿದ ಆಹಾರ ಮತ್ತು ದೇಹಕ್ಕೆ ನೀಡಿದ ವಿಶ್ರಾಂತಿಯಷ್ಟೇ ಲೆಕ್ಕಕ್ಕೆ ಬರುತ್ತದೆ. ದುಷ್ಟನೊಬ್ಬ ಕಟ್ಟುನಿಟ್ಟಿನ ದೈಹಿಕ ಶಿಸ್ತು ಪಾಲಿಸಿದರೆ ಆರೋಗ್ಯವಾಗಿರುತ್ತಾನೆ; ಅದೇ ಸಜ್ಜನನೊಬ್ಬ ಆರೋಗ್ಯದ ಕಡೆಗೆ ಅಸಡ್ಡೆ ತೋರಿದರೆ ರೋಗಕ್ಕೆ ತುತ್ತಾಗುತ್ತಾನೆ.

'ಒಳ್ಳೆಯವನಾಗು, ಆದರೆ ಆರೋಗ್ಯದ ಬಗ್ಗೆ ಅಸಡ್ಡೆ ಮಾಡಬೇಡ' ಎಂಬುದು ಇಂದಿನ ತುರ್ತು ಸಂದೇಶವಾಗಬೇಕಿದೆ. ಮರಣದ ನಂತರದ ಪುಣ್ಯದ ಲೆಕ್ಕಾಚಾರಕ್ಕಿಂತ, ಬದುಕಿರುವಾಗ ಆರೋಗ್ಯ ಕಾಪಾಡಿಕೊಳ್ಳುವುದು ನಮ್ಮ ಅತಿ ದೊಡ್ಡ ಜವಾಬ್ದಾರಿ. ಸಾವಿನ ಸಂದರ್ಭದಲ್ಲಿ ದೈವದ ಮೇಲೆ ದೂರು ಹೊರಿಸುವ ಬದಲು, ನಮ್ಮ ಜೀವನಶೈಲಿಯನ್ನು ತಿದ್ದಿಕೊಳ್ಳುವ ವಿವೇಚನೆ ನಮ್ಮದಾಗಲಿ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಆಂತರಿಕ ಅಂಕವೆಂಬ ಬೆದರು ಬೊಂಬೆ!

ಮಾನ್ಯರೆ,

ಶೈಕ್ಷಣಿಕ ಕ್ಷೇತ್ರದ ಅವಿಭಾಜ್ಯ ಅಂಗವಾದ ಪರೀಕ್ಷೆಗಳಲ್ಲಿ ಇಂಟರ್ನಲ್ ಮಾರ್ಕ್ಸ್ ನೀಡುವುದು ಹಲವಾರು ದಶಕಗಳಿಂದ ಅವ್ಯಾಹತವಾಗಿ ನಡೆದುಕೊಂಡು ಬಂದಿರುವ ಹಳೆಯ ಪದ್ಧತಿಯಾಗಿದೆ.

ಶಾಲಾ ಹಂತದಿಂದ ಹಿಡಿದು ಸ್ನಾತಕೋತ್ತರ ಪದವಿ ಶಿಕ್ಷಣದವರೆಗೆ ಇಂಟರ್ನಲ್ ಮಾರ್ಕ್ಸ್‌ಗಳು ಒಂದಲ್ಲಾ ಒಂದು ರೀತಿಯಲ್ಲಿ ವಿದ್ಯಾರ್ಥಿಗಳ ಫಾಲೋ ಮಾಡುತ್ತಲೇ ಬರುತ್ತವೆ. ಅಂತಿಮ ಪರೀಕ್ಷೆಯ ಫಲಿತಾಂಶದ ಮೇಲೆ ಆಂತರಿಕ ಅಂಕಗಳು ತಮ್ಮದೇ ಆದ ಪ್ರಭಾವ ಬೀರುವುದರಿಂದ ಈ ಇಂಟರ್ನಲ್ ಅಂಕಗಳು ಊಟದ ಜೊತೆಗಿನ ಉಪ್ಪಿನಕಾಯಿಯಂತೆ ಕಾರ್ಯ ನಿರ್ವಹಿಸುತ್ತವೆ. ಆದರೆ ಈ ಅಂಕಗಳನ್ನು ನೀಡಲು ನಿರ್ದಿಷ್ಟವಾದ ಮಾನದಂಡ ಇಲ್ಲದಿರುವುದರಿಂದ, ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಇದರಿಂದ ತೊಂದರೆ ಉಂಟಾಗಬಹುದು. ಮುಖ್ಯ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ್ದರೂ, ಇಂಟರ್ನಲ್ಸ್‌ನಲ್ಲಿ ಕಡಿಮೆ ಅಂಕ ಬಂದು, ಫಲಿತಾಂಶವೇ ಬುಡಮೇಲಾಗುವ ಸಂಭವ ಕೂಡ ಇದೆ. ಅಂತಹ ಸಂದರ್ಭಗಳಲ್ಲಿ ಸಂಬಂಧಪಟ್ಟ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಂತಹ ಅನೇಕ ಪ್ರಕರಣಗಳು ಮಾಧ್ಯಮಗಳಲ್ಲಿ ವರದಿಯಾಗಿವೆ.

ಈ ಆಂತರಿಕ ಅಂಕಗಳನ್ನು ಪಡೆಯಲು ಸಂಬಂಧಪಟ್ಟ ಶಿಕ್ಷಕರನ್ನು ಓಲೈಸುವುದು, ಅವರ ಕೃಪಾಕಟಾಕ್ಷಕ್ಕೆ ಪಾತ್ರರಾಗುವುದು ಇತ್ಯಾದಿ ಇತ್ಯಾದಿಗಳನ್ನು ವಿದ್ಯಾರ್ಥಿಗಳು ಮಾಡಲೇಬೇಕಾದ ಅನಿವಾರ್ಯತೆ ಬಹುತೇಕ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಹಾಗೂ ಸಿಬಿಎಸ್‌ಇ ವ್ಯವಸ್ಥೆಯ ಶಿಕ್ಷಣ ನೀಡುವ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿಯೂ ಹಾಸು ಹೊಕ್ಕಾಗಿದೆ. ಹೀಗಾಗಿಯೇ ತಮಗೆ ಎಲ್ಲಿ ಇಂಟರ್ನಲ್ಸ್ ನಲ್ಲಿ ಕಡಿಮೆ ಅಂಕ ಬಂದು ಬಿಡುತ್ತದೆಯೋ ಎಂಬ ಆತಂಕದಿಂದಲೇ ವಿದ್ಯಾರ್ಥಿಗಳು ಇಡೀ ಶೈಕ್ಷಣಿಕ ವರ್ಷವನ್ನು ಕಳೆಯಬೇಕಾದ ಅನಿವಾರ್ಯತೆ ಇದೆ. ಈ ಹಿನ್ನೆಲೆಯಲ್ಲಿ ಅನಗತ್ಯ ಕಿರಿಕಿರಿ ಉಂಟುಮಾಡುತ್ತಿರುವ ಆಂತರಿಕ ಅಂಕಗಳ ವಿಧಾನವನ್ನು ತೆಗೆದುಹಾಕುವ ಬಗ್ಗೆ ಉನ್ನತ ಮಟ್ಟದಲ್ಲಿ ಚರ್ಚಿಸಿ, ಪರ್ಯಾಯ ವಿಧಾನವನ್ನು ಅಳವಡಿಸಿಕೊಂಡು, ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಕಾಪಾಡಲು ಅಗತ್ಯ ಹಾಗೂ ತುರ್ತು ಕ್ರಮಗಳನ್ನು ಉನ್ನತ ಶಿಕ್ಷಣ ಸಚಿವರು ಕೈಗೊಳ್ಳುವುದು ಅಗತ್ಯವಾಗಿದೆ

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಅಮೂಲ್ಯ ನೆನಪುಗಳ ಫ್ರೇಂ....

–ಆರ್.ಜಿ.ಸಿಂಗ್
ಕಾರ್ಯದರ್ಶಿ, ರಾಮಸನ್ಸ್ ಕಲಾ ಪ್ರತಿಷ್ಠಾನ



ಶೀರ್ಷಿಕೆ: ದೆಹಲಿಗೆ ರಾಜ್ಯ ಪ್ರವೇಶ
ಕಲಾವಿದ: ರೋಡೆರಿಕ್ ಡೆಂಪ್‌ಸ್ಟರ್ ಮೆಕೆಂಜಿ (1865–1941)
ಗಾತ್ರ: 366X289.8 ಸೆಂ.ಮೀ. ಕ್ಯಾನ್ವಾಸ್ ಮೇಲಿನ ತೈಲ ಚಿತ್ರ
ಸಂಗ್ರಹ: ಬ್ರಿಸ್ಟಲ್ ಸಿಟಿ ಮ್ಯೂಸಿಯಂ ಮತ್ತು ಆರ್ಟ್ ಗ್ಯಾಲರಿ.


ಈ ವರ್ಣಚಿತ್ರವು 1903ರ ದೆಹಲಿ ದರ್ಬಾರ್‌ನ ಮುಖ್ಯ ಪ್ರವೇಶ ಮೆರವಣಿಗೆಯ ಅದ್ಭುತ ವೈಭವವನ್ನು ಮನಮುಟ್ಟುವಂತೆ ಕಟ್ಟಿಕೊಡುತ್ತದೆ. ಮೆರವಣಿಗೆಯಲ್ಲಿ ತಮ್ಮ ಸಂಸ್ಥಾನಗಳ ಆನೆಗಳ ಮೇಲೆ ಆಸೀನರಾಗಿ 48 ಮಹಾರಾಜರು ಸಾಗುತ್ತಿರುವು ದನ್ನು ಕಾಣಬಹುದು. ಜಾಮಾ ಮಸೀದಿಯ ಉತ್ತರ ಭಾಗವನ್ನು ದಾಟಿ ಕೆಂಪುಕೋಟೆಯ ಕಡೆಗೆ ಮೆರವಣಿಗೆ ಸಾಗುತ್ತಿರುವ ಚಿತ್ರಣ ಇಲ್ಲಿದೆ.

ಮೆರವಣಿಗೆಗೆ ಆಗಿನ ಭಾರತದ ವೈಸರಾಯ್ ಲಾರ್ಡ್ ಜಾರ್ಜ್ ಕರ್ಜನ್ ಹಾಗೂ ವೈಸ್‌ರೈನ್ ಆಗಿದ್ದ ಲೇಡಿ ಮೇರಿ ವಿಕ್ಟೋರಿಯಾ ಕರ್ಜನ್ ನೇತೃತ್ವ ವಹಿಸಿದ್ದರು. ಇವರು ಬನಾರಸ್ ಮಹಾರಾಜರಿಗೆ ಸೇರಿದ 'ಲಚ್‌ಮನ್ ಪರ್ಷದ್' ಆನೆಯ ಮೇಲೆ ಕುಳಿತಿರುವುದನ್ನು ಕಾಣಬಹುದು. ಅವರ ನಂತರದಲ್ಲಿ ಬ್ರಿಟಿಷ್ ರಾಜಮನೆತನವನ್ನು ಪ್ರತಿನಿಧಿಸುವ ಕನಾಟ್‌ನ ಡ್ಯೂಕ್ ಮತ್ತು ಡಚೆಸ್ ರಾಜಕುಮಾರ ಆರ್ಥರ್ ಮತ್ತು ರಾಜಕುಮಾರಿ ಲೂಯಿಸ್ ಮಾರ್ಗರೇಟ್ ಅವರು ಜೈಪುರ ಮಹಾರಾಜರಿಗೆ ಸೇರಿದ 'ಮೌಲಾ ಬಕ್ಸ್' ಆನೆಯ ಮೇಲೆ ಕುಳಿತಿರುವುದನ್ನು ನೋಡಬಹುದು.

'ಭಾರತೀಯ ರಾಜಮನೆತನದ ಶ್ರೇಣಿಯನ್ನು ಹೊಸ ಶ್ರೇಯಾಂಕ ವ್ಯವಸ್ಥೆಯೊಂದಿಗೆ ರಚನೆ ಮಾಡಲಾಗಿತ್ತು. ಒಂದು ಸಂಸ್ಥಾನದ ಗಾತ್ರ ಮತ್ತು ಪ್ರಾಮುಖ್ಯತೆಯನ್ನು ಅದಕ್ಕೆ ನೀಡಲಾಗುತ್ತಿದ್ದ ಗನ್ ಸೆಲ್ಯೂಟ್‌ಗಳ ಸಂಖ್ಯೆಯಿಂದ ನಿರ್ಧರಿಸಲಾಗುತ್ತಿತ್ತು. ಹೈದರಾಬಾದ್, ಮೈಸೂರು, ಬರೋಡಾ, ಜಮ್ಮು ಮತ್ತು ಕಾಶ್ಮೀರ ಹಾಗೂ ಗ್ವಾಲಿಯರ್ ಸೇರಿದಂತೆ ಐದು ದೊಡ್ಡ ಸಂಸ್ಥಾನಗಳಿಗೆ 21 ಗನ್ ಸೆಲ್ಯೂಟ್ ನೀಡಲಾಗುತ್ತಿತ್ತು' ಎಂದು ರಿತು ಕುಮಾರ್ ತಮ್ಮ 'ಪೋಟ್ರೇಟ್ಸ್ ಆಫ್ ರಾಯಲ್ಟಿ' ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ.

ಈ ಮೆರವಣಿಗೆಯಲ್ಲೂ ಅದೇ ಶ್ರೇಣಿ ಅನುಸರಿಸಲಾಗಿದೆ. ಮೂರನೇ ಆನೆಯ ಮೇಲೆ ಹೈದರಾಬಾದ್‌ನ ನಿಜಾಮ ಮೀರ್ ಮೆಹಬೂಬ್ ಅಲಿ ಖಾನ್ (VI), ನಂತರದಲ್ಲಿ ಮೈಸೂರಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್, ಆನಂತರದಲ್ಲಿ ಬರೋಡಾದ ಮಹಾರಾಜ ಸಯ್ಯಾಜಿ ರಾವ್ ಗಾಯಕ್ವಾಡ್, ಆ ಬಳಿಕ ಜಮ್ಮು ಮತ್ತು ಕಾಶ್ಮೀರದ ಮಹಾರಾಜ ಪ್ರತಾಪ್ ಸಿಂಗ್ ಮತ್ತು ಗ್ವಾಲಿಯರ್‌ನ ಮಹಾರಾಜ ಮಾಧೋರಾವ್ ಸಿಂಧಿಯಾ ಇದ್ದಾರೆ.

ಗಂಡಭೇರುಂಡ ಮತ್ತು ಹನುಮನ ಉಬ್ಬು ಚಿತ್ರಗಳನ್ನು ಹೊಂದಿರುವ ಗುರಾಣಿಗಳನ್ನು ಹೊತ್ತೊಯ್ಯುತ್ತಿರುವ ಅಂದಿನ ಮೈಸೂರು ಸಂಸ್ಥಾನದ ಪ್ರಮಾಣಿತ ಧಾರಕರನ್ನು (ರಾಜಮನೆತನದ ಶಿಷ್ಟಾಚಾರ ಧಾರಕರು) ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಆಸೀನರಾದ ಆನೆಯ ಬಳಿಯಲ್ಲಿ ಕಾಣಬಹುದು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಎತ್ತಣಿಂದೆತ್ತ ಸಂಬಂಧವಯ್ಯಾ

ಎತ್ತಣ ಮಾಮರ ಎತ್ತಣ ಕೋಗಿಲೆ
ಎತ್ತಣಿಂದೆತ್ತ ಸಂಬಂಧವಯ್ಯಾ

ಎಂಬ ವಚನವು ಸುಪ್ರಸಿದ್ಧ. ಮಾವಿನ ಮರ ಎಲ್ಲೋ ಬೆಳೆದಿದೆ. ಕೋಗಿಲೆ ಇನ್ನೆಲ್ಲೋ ಹುಟ್ಟಿ ಬೆಳೆದಿದೆ. ಮಾವಿನ ಮರದಲ್ಲಿ ಹೊಸ ಚಿಗುರು ಮೂಡಿದಾಗ, ಎಂದರೆ ವಸಂತ ಕಾಲದಲ್ಲಿ ಕೋಗಿಲೆ ಮಾವಿನ ಮರದ ಕೊಂಬೆಯ ಮೇಲೆ ಕುಳಿತು ಪಂಚಮ ಸ್ವರದಲ್ಲಿ ಹಾಡುತ್ತದೆ. ಆ ಹಕ್ಕಿ ಹಾಡುವುದು ತನ್ನ ಇನಿಯಳನ್ನು, ಎಂದರೆ ಹೆಣ್ಣು ಕೋಗಿಲೆಯನ್ನು, ಪ್ರಣಯಕ್ಕಾಗಿ ಕೂಗಿ ಕರೆಯುವ ಉದ್ದೇಶದಿಂದ ಮಾತ್ರ. ಆಮೇಲೆ ಕೋಗಿಲೆ ಎಲ್ಲೋ ಹಾರಿ ಹೋಗುತ್ತದೆ. ಇದು ತಾತ್ಕಾಲಿಕ ಸಂಬಂಧ.

ಅದೇ ಮಾವಿನ ಮರದಲ್ಲಿ ಹೂವುಗಳು ಹುಟ್ಟಿದಾಗ ದುಂಬಿಗಳು, ಜೇನುನೊಣಗಳು ಅಲ್ಲಿಗೆ ಬಂದು ಮುತ್ತುತ್ತವೆ. ಜೇನುನೊಣಗಳು ಬರುವುದು ಸ್ವಾರ್ಥದಿಂದ. ಹೂವಿನಲ್ಲಿರುವ ಮಕರಂದವನ್ನು ಸಂಗ್ರಹಿಸುವುದು ಅವುಗಳ ಉದ್ದೇಶ. ಮರವು ಹೂವುಗಳಲ್ಲಿ ಮಕರಂದವನ್ನು ಇಟ್ಟಿರುವ ಉದ್ದೇಶವೂ ಕೀಟಗಳನ್ನು ಆಕರ್ಷಿಸುವುದೇ ಆಗಿದೆ. ಮಕರಂದವನ್ನು ಸಂಗ್ರಹಿಸುವಾಗ ಅವು ಪರಾಗಸ್ಪರ್ಶವನ್ನು ಮಾಡುತ್ತವೆ. ಅದರಿಂದ ತನ್ನ ವಂಶಾಭಿವೃದ್ಧಿಯಾಗುತ್ತದೆ ಎಂದು ಮರ ಹೂವುಗಳಲ್ಲಿ ಮಕರಂದವನ್ನು ಉತ್ಪತ್ತಿ ಮಾಡಿರುತ್ತದೆ. ಮರದಿಂದ ಕೀಟಕ್ಕೂ ಕೀಟದಿಂದ ಮರಕ್ಕೂ ಉಪಕಾರವಾಗುವುದರಿಂದ ಇಲ್ಲಿರುವುದು ಪರಸ್ಪರೋಪಕಾರಕ ಸಂಬಂಧ.

ಎಲ್ಲ ಜೀವಿಗಳ ವಂಶಾಭಿವೃದ್ಧಿಯಾಗುತ್ತಿರಬೇಕು ಎಂಬುದು ಪ್ರಕೃತಿ ನಿಯಮವೆಂದು ಹೇಳುತ್ತಾರೆ. ಇದಕ್ಕಾಗಿ ಗಂಡು–ಹೆಣ್ಣು ಎಂಬ ಭೇದವನ್ನು ಸೃಜಿಸಿ ಅವುಗಳ ಪರಸ್ಪರಾಕರ್ಷಣೆಯನ್ನೂ ಪ್ರಕೃತಿಯು ಕಲ್ಪಿಸಿದೆ. ಅನೇಕ ಪ್ರಾಣಿಗಳಲ್ಲಿ ಗಂಡು ಹೆಣ್ಣಿನ ಸಂಬಂಧ ತಾತ್ಕಾಲಿಕ ಗರ್ಭಧಾರಣೆ ಆದ ಮೇಲೆ ಗಂಡೆಲ್ಲೋ ಹೆಣ್ಣೆಲ್ಲೋ! ಹೆಣ್ಣು ಮಾತ್ರ ಸಂತತಿಯ ಪಾಲನೆ–ಪೋಷಣೆಗಳ ಭಾರವನ್ನು ಹೊಂದಿರುತ್ತದೆ. ಆದರೆ ಕೆಲವು ಪ್ರಾಣಿಗಳಲ್ಲಿ ಗಂಡು ಹೆಣ್ಣುಗಳು ಒಟ್ಟಿಗೆ ಇದ್ದು ಸಂಬಂಧವನ್ನು ಮುಂದುವರಿಸುತ್ತವೆ. ಇದನ್ನು ದಾಂಪತ್ಯ ಸಂಬಂಧವೆನ್ನಬಹುದು.

ತಾಯಿಗೂ ಮಗುವಿಗೂ ಇರುವ ಸಂಬಂಧ ಪ್ರಕೃತಿಯ ಬಳುವಳಿ. ಇದು ದೃಢ ಮತ್ತು ಪ್ರೀತಿಪೂರ್ಣ. ಮಗುವಿಗಾಗಿ (ಮರಿಗಳಿಗಾಗಿ) ಸರ್ವಸ್ವವನ್ನೂ ತ್ಯಾಗ ಮಾಡುವ ಪ್ರವೃತ್ತಿಯನ್ನು ಅನೇಕ ಪ್ರಾಣಿಗಳಲ್ಲೂ ಪಕ್ಷಿಗಳಲ್ಲೂ ಕಾಣುತ್ತೇವೆ. ಇದು ಜನ್ಯಜನಕ ಸಂಬಂಧ. ಸ್ವಭಾವತಃ ಕ್ರೂರವೂ ಕಠೋರವೂ ನಿರ್ದಯವೂ ಆದ ಪ್ರಾಣಿಗಳೂ ತಮ್ಮ ಸಂತತಿಯ ವಿಷಯದಲ್ಲಿ ಅತ್ಯಂತ ಪ್ರೀತಿಯನ್ನು ತೋರಿಸುತ್ತವೆ. ಅವುಗಳ ರಕ್ಷಣೆಗಾಗಿ ಪ್ರಾಣವನ್ನೇ ಪಣವಾಗಿ ಒಡ್ಡಿ ಹೋರಾಡುತ್ತವೆ ಎಂಬುದನ್ನು ಕಾಣುತ್ತೇವೆ.

ಮಾನವ ಪ್ರಪಂಚದಲ್ಲಿ ನೂರಾರು ಸಂಬಂಧಗಳಿವೆ. ನಾಗರಿಕತೆ ಬೆಳೆದಂತೆ ಸಂಬಂಧಗಳೂ ನಾನಾ ವಿಧವಾಗಿ ಬೆಳೆದಿವೆ.

ಸ್ವ–ಸ್ವಾಮಿಭಾವ ಸಂಬಂಧ: ಮನುಷ್ಯರು ಒಡೆತನದ ಭಾವನೆಯನ್ನು ಬೆಳೆಸಿಕೊಂಡರು. ಈ ಮನೆ ನನ್ನ ಸ್ವತ್ತು, ಈ ಭೂಮಿ ನನ್ನ ಸ್ವತ್ತು, ನಾನು ಇದರ ಸ್ವಾಮಿ (ಒಡೆಯ), ಈ ಹಣ ನನಗೆ ಸೇರಿದುದು ಎಂಬ ಭಾವನೆ ಹುಟ್ಟತೊಡಗಿತು. ಯಾವುದೇ ವಸ್ತುವಿಗೂ ಅದರ ಒಡೆಯನಿಗೂ ಇರುವ ಸಂಬಂಧವನ್ನು ಸ್ವಸ್ವಾಮಿಭಾವ ಸಂಬಂಧ ಎನ್ನುತ್ತಾರೆ. ಇದರ ಕಾರಣದಿಂದಲೇ ಶ್ರೀಮಂತ–ಬಡವ ಎಂಬ ಭೇದಭಾವನೆಯೂ ಹುಟ್ಟಿಕೊಂಡಿತು. ಈ ರಾಜ್ಯ ನನ್ನದು, ಸಮಸ್ತ ಭೂಮಿಯೇ ನನಗೆ ಸೇರಿದ್ದು ಎಂಬ ಧೋರಣೆಯನ್ನು ಕೆಲವರು ತಳೆದಿದ್ದುದರಿಂದಲೇ ಯುದ್ಧಗಳು ಆರಂಭಗೊಂಡವು.

ಸೇವ್ಯಸೇವಕಭಾವ: ನಾನು ಹಿರಿಯ, ನನಗೆ ಕಿರಿಯರೆಲ್ಲ ಸೇವೆಯನ್ನು ಮಾಡಬೇಕು, ನಾನು ನಾಯಕ, ಹಿಂಬಾಲಕರೆಲ್ಲ ನನಗೆ ಸೇವೆ ಸಲ್ಲಿಸಬೇಕು ಇತ್ಯಾದಿಗಳಿಂದ ಸೇವ್ಯ (ಸೇವೆ ಮಾಡಿಸಿಕೊಳ್ಳುವವನು) ಸೇವಕ (ಸೇವೆ ಮಾಡುವವನು) ಭಾವ ಸಂಬಂಧ ಮಾನವ ಕುಲದ ಅಂತಶ್ಶತ್ರು). ಇದು ಇತಿಹಾಸಕ್ಕೆ ಕಳಂಕವಾಗಿರುವ ದಾಸ್ಯ (Slavery) ಮುಂತಾದ ರೂಪಗಳಲ್ಲಿ ಬೆಳೆದಿತ್ತು. ದಾಸನ ಮಾಡಿಕೊ ಎನ್ನ ಎಂದು ಭಗವಂತನಿಗೆ ಮಾನವನು ಹೇಳಿದರೆ ತಪ್ಪಿಲ್ಲ. ಮನುಷ್ಯರಲ್ಲೇ ಒಬ್ಬನು ಇನ್ನೊಬ್ಬನನ್ನು ದಾಸನೆಂದು ಹೀನಾಯವಾಗಿ ನಡೆಸಿಕೊಳ್ಳುವುದು ಪಾಪ. ಈ ಸೇವ್ಯ ಸೇವಕ ಸಂಬಂಧ ಹಲವು ರೂಪಗಳಲ್ಲಿ ಇಂದೂ ಮುಂದುವರಿಯುತ್ತಿರುವುದು ಶೋಚನೀಯ. ಸರ್ಕಾರದ ಹಲವು ಇಲಾಖೆ ಗಳಲ್ಲಿ ಮೇಲಧಿಕಾರಿಗಳು ಸಿಬ್ಬಂದಿಗಳನ್ನು ಗುಲಾಮರಂತೆ ನಡೆಸಿ ಕೊಳ್ಳುತ್ತಿರುವುದು ಕಂಡು ಬರುತ್ತದೆ. ಇದು ನಿಲ್ಲದಿದ್ದರೆ ಪ್ರಜಾಪ್ರಭುತ್ವವು ಘೋಷಿಸುವ ಸಮಾನತೆ (Equality) ಅರ್ಥಹೀನ ಮೈತ್ರೀ ಸಂಬಂಧ ಮಿತ್ರ ಎಂಬ ಶಬ್ದದಿಂದ ಹುಟ್ಟಿದ ಮೈತ್ರೀ ಎಂಬ ಶಬ್ದವು ಸ್ನೇಹ, ಗೆಳೆತನ ಎಂಬರ್ಥವನ್ನು ಕೊಡುತ್ತದೆ. ಮನುಷ್ಯರ ಮಧ್ಯೆ ಮೈತ್ರೀ ಎಂಬುದಿದ್ದರೆ ಲೋಕವೇ ಸ್ವರ್ಗ. ಶತ್ರುತ್ವ ಎಂಬುದಿದ್ದರೆ ಲೋಕವೇ ನರಕ.

ಕೇನಾಮೃತಮಿದಂ ಸೃಷ್ಟಂ ಮಿತ್ರಮಿತ್ಯಕ್ಷರದ್ವಯಮ್।
ಆಪದಶ್ಚೆ ಪರಿತ್ರಾಣಂ ದುಃಖಸಂತಾಪಭೇಷಜಮ್ ॥

'ಅಮೃತ ಸಮಾನವಾದ, ಮಿತ್ರ ಎಂಬ ಈ ಎರಡು ಅಕ್ಷರಗಳನ್ನು ಸೃಷ್ಟಿಸಿದ ಪುಣ್ಯಾತ್ಮನು ಯಾರು? ಆಪತ್ತುಗಳಿಂದ ರಕ್ಷಿಸುವವನು, ದುಃಖದ ಬೇಗೆಯ ಔಷಧವಾಗಿರುವವನು ಮಿತ್ರ' ಎಂದು ಸುಭಾಷಿತವು ತಿಳಿಸುತ್ತದೆ. ನಿಷ್ಕಾರಣ ಬಂಧುವಾಗಿರುವವನೇ ಮಿತ್ರ. ಮಿತ್ರರಿಬ್ಬರ ಸಂಬಂಧವನ್ನೇ ಸೌಹಾರ್ದವೆನ್ನುತ್ತಾರೆ. ರಾಮಾಯಣದಲ್ಲಿ ರಾಮ–ಸುಗ್ರೀವರ, ಮಹಾಭಾರತದಲ್ಲಿ ಕರ್ಣ ದುರ್ಯೋಧನರ ಸೌಹಾರ್ದ ಪ್ರಸಿದ್ಧ. ಮಿತ್ರರಿಬ್ಬರಲ್ಲಿ ತಾನು ಹೆಚ್ಚು ಅವನು ಕಡಿಮೆ ಎಂಬ ಭಾವನೆ ಎಂದೂ ಯಾವ ಕಾರಣಕ್ಕೂ ಇರುವುದಿಲ್ಲ.

ಗುರುಶಿಷ್ಯ ಸಂಬಂಧ: ಮಾತೃದೇವೋಭವ, ಪಿತೃದೇವೋಭವ ಎಂದು ಹೇಳಿ ತೈತ್ತಿರೀಯೋಪನಿಷತ್ತು ಆಚಾರ್ಯದೇವೋಭವ ಎಂದೂ ಹೇಳಿದೆ. ತಾಯಿ, ತಂದೆ, ಗುರು ಎಂಬ ಕ್ರಮದಲ್ಲಿ ಪೂಜ್ಯತೆ. ವಂಶ ಎರಡು ವಿಧ ಎಂದು ಶಾಸ್ತ್ರವು ಹೇಳುತ್ತದೆ. ವಂಶೋದ್ವಿಧಾ ಜನ್ಮನಾ ವಿದ್ಯಯಾ ಚ। ಎಂದರೆ ವಂಶ ಜನ್ಮದಿಂದ ಒಂದು ವಂಶ, ವಿದ್ಯೆಯಿಂದ ಇನ್ನೊಂದು ವಂಶ. ಪಿತೃ (ತಂದೆ), ಪಿತಾಮಹ (ತಾತ), ಪ್ರಪಿತಾಮಹ (ಮುತ್ತಾತ) ಇತ್ಯಾದಿ ಕ್ರಮದಿಂದ ಬಂದುದು ಜನ್ಮ ವಂಶ. ಗುರು, ಪರಮಗುರು, ಪರಮೇಷ್ಠಿ ಗುರು ಎಂಬ ಕ್ರಮವನ್ನು ಆಶ್ರಯಿಸಿದುದು ವಿದ್ಯಾವಂಶ. ಗುರುಶಿಷ್ಯ ಪರಂಪರೆಯಿಂದಲೇ ವಿದ್ಯೆಯ ರಕ್ಷಣೆ ತಂದೆಯು ಆಸ್ತಿಯನ್ನು ಮಕ್ಕಳಿಗೆ ಬಿಟ್ಟು ಹೋಗುವಂತೆ ಗುರು ವಿದ್ಯೆಯನ್ನು ಶಿಷ್ಯರಿಗೆ ಬಿಟ್ಟು ಹೋಗುತ್ತಾನೆ. ವಿದ್ಯಾ ವಂಶವೂ ಅವಿಚ್ಛಿನ್ನವಾಗಿ ಮುಂದುವರಿಯಬೇಕು.

ಕಾರ್ಯಕಾರಣ ಸಂಬಂಧ: ಯಾವುದೇ ಕಾರ್ಯವಾಗಬೇಕಾದರೆ ಅದಕ್ಕೆ ಕಾರಣ ಇದ್ದೇ ಇರಬೇಕು. ಎಲ್ಲೋ ಹೊಗೆ ಬರುತ್ತಿದ್ದರೆ ಬೆಂಕಿ ಇದ್ದೇ ಇರುತ್ತದೆ ಎಂಬುದು ಅನುಭವ ಸಿದ್ಧ. ಕಾರ್ಯ ಕಾರಣಗಳ ಸಂಬಂಧ ಅವಿನಾಭವ ನಿಯಮದಿಂದ ತಿಳಿದುಕೊಳ್ಳಬಹುದಾದುದು. ನಿರ್ಜನವಾದ ಪ್ರದೇಶದಲ್ಲಿ ಮಡಕೆಯನ್ನು ನೋಡಿದರೆ ಅಲ್ಲಿ ಹಿಂದೆ ಜನರು ಇದ್ದರು, ಯಾವನೋ ಕುಂಬಾರ ಮಡಕೆಯನ್ನು ಮಾಡಿದ್ದ ಎಂದು ಸಂಶಯಾತೀತವಾಗಿ ಊಹಿಸಬಹುದು. ಆಸ್ತಿಕರು, ಎಂದರೆ ದೇವರ ಅಸ್ತಿತ್ವದಲ್ಲಿ ನಂಬಿಕೆಯನ್ನಿಟ್ಟಿರುವರು, ಈ ಬೃಹತ್ತಾದ ಮಹತ್ತಾದ ವಿಚಿತ್ರವಾದ ಜಗತ್ತನ್ನು ಸೃಷ್ಟಿಸಿದ ದೇವರೊಬ್ಬನಿದ್ದಾನೆ ಎಂದು ಕಾರ್ಯಕಾರಣ ಸಂಬಂಧವನ್ನು ಆಶ್ರಯವಾಗಿಟ್ಟುಕೊಂಡು ವಾದ ಮಾಡುತ್ತಾರೆ. ರೈತರು ಬಿತ್ತನೆ ಮಾಡಿ ಬೆಳೆ ಬೆಳೆಯುವುದು ಕಾರಣಗಳು ಸರಿಯಾಗಿದ್ದಾಗ ಕಾರ್ಯ ಉಂಟಾಗುವುದು ಎಂಬ ನಂಬಿಕೆಯಿಂದಲೇ. ಜಗತ್ತಿನ ಎಲ್ಲ ಕೆಲಸಗಳೂ ನಡೆದು ಫಲಕೊಡುತ್ತಿರುವುದು ಈ ಸಂಬಂಧದ ಅವಲಂಬನೆಯಿಂದಲೇ ಎಂದು ನಾವು ಹೇಳಬಹುದು. ಆಕಸ್ಮಿಕವಾಗಿ ಏನೋ ನಡೆಯಿತೆಂದರೆ ಅದರ ನಿರ್ದಿಷ್ಟ ಕಾರಣ ನಮಗೆ ಗೊತ್ತಾಗಲಿಲ್ಲ ಎಂದು ಅರ್ಥಮಾಡಿಕೊಳ್ಳಬೇಕು.

ವಾಚ್ಯವಾಚಕ ಸಂಬಂಧ: ಮಾತಿಗೂ ಅರ್ಥಕ್ಕೂ ಇರುವ ಸಂಬಂಧವನ್ನು ವಾಚ್ಯ ವಾಚಕ ಸಂಬಂಧ ಎನ್ನುತ್ತಾರೆ. ವಸ್ತುತಃ ಶಬ್ದಕ್ಕೂ ಅರ್ಥಕ್ಕೂ ಸಾಕ್ಷಾತ್ ಸಂಬಂಧವಿಲ್ಲ. ಆ ಸಂಬಂಧ ಕೇವಲ ಮಾನವನಿರ್ಮಿತ. ಒಂದೇ ವಸ್ತುವನ್ನು ಮಾನವರ ಬೇರೆ ಬೇರೆ ಗುಂಪುಗಳು ಬೇರೆ ಬೇರೆ ಶಬ್ದಗಳಿಂದ ಕರೆಯುತ್ತೇವೆ. ಒಂದೇ ಪ್ರಾಣಿಯನ್ನು ಕೆಲವರು ಕ್ಯಾಟ್ ಎಂದೂ, ಬೇರೆ ಕೆಲವರು ಬೆಕ್ಕು ಎಂದೂ ಇನ್ನೂ ಕೆಲವರು ಬಿಲ್ಲೀ ಎಂದೂ ಕರೆಯುತ್ತಾರೆ. ಪ್ರಪಂಚದ ನಾನಾ ಭಾಷೆಗಳಲ್ಲಿ ಅದಕ್ಕೆ ಸಾವಿರ ಹೆಸರುಗಳಿರಬಹುದು. ಆದ್ದರಿಂದ ವಾಚ್ಯವಾಚಕ ಸಂಬಂಧ ಇಚ್ಛಾಜನ್ಯ.

ಮನುಷ್ಯರು ಹೊಸದಾಗಿ ಕಂಡು ಹಿಡಿದ ವಸ್ತುಗಳಿಗೆ ಹೊಸ ಹೆಸರನ್ನು ಇಡುವುದು, ಮಕ್ಕಳಿಗೆ ತಾಯಿ ತಂದೆಯರು ತಮಗೆ ಇಷ್ಟ ಬಂದ ಹೆಸರನ್ನಿಡುವುದು. ಇದಕ್ಕೆ ಸಾಕ್ಷಿಯಾಗಿದೆ. ಒಂದೇ ಭಾಷೆಯಲ್ಲಿ ಒಂದು ಶಬ್ದವು ಹಲವು ಅರ್ಥಗಳನ್ನು ಕೊಡುವ ಸಾಧ್ಯತೆಯೂ ಇದೆ. ಇಂತಹ ಸಂದರ್ಭವನ್ನು ಶ್ಲೇಷ ಎಂದು ಕರೆದಿದ್ದಾರೆ. ಎತ್ತು ಎಂಬ ಶಬ್ದಕ್ಕೆ ಕನ್ನಡದಲ್ಲಿ ಗಂಡು ಹಸು, ಮೇಲಕ್ಕೆ ಏರಿಸು ಎಂಬ ಅರ್ಥಗಳಿವೆ. ಇಂಗ್ಲೀಷಿನಲ್ಲಿ ಸ್ಪ್ರಿಂಗ್ ಎಂಬ ಶಬ್ಧಕ್ಕೆ ವಸಂತ ಋತು, ನೀರಿನ ಚಿಲುಮೆ, ಲೋಹದ ಸುರುಳಿ, ಹಠಾತ್ತನೆ ಮೇಲೇಳು ಇತ್ಯಾದಿ ಅರ್ಥಗಳಿವೆ. ಸಂಸ್ಕೃತ ಭಾಷೆಯಲ್ಲಂತೂ ಶ್ಲೇಷ ಸಾಮ್ರಾಜ್ಯವೇ ಇದೆ. ಹೀಗೆ ಸಂಬಂಧಗಳಿಗೆ ಕೊನೆಯಿಲ್ಲ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಭೋವಿ ಸಮಾಜದ ಮಹಿಳೆಯರು ಆರ್ಥಿಕ ಸ್ವಾವಲಂಬಿಗಳಾಗಲು ಸ್ವ-ಸಹಾಯ ಸಂಘಗಳ ರಚನೆ ಅವಶ್ಯ

● ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಡಾ.ಎಂ.ರಾಮಪ್ಪ ● ಸಮುದಾಯದ ಜನರ ಆರ್ಥಿಕ ಸ್ವಾವಲಂಬನೆಗೆ ನಿಗಮ ನೆರವು


ಮೈಸೂರು ಜಿಪಂ ಸಭಾಂಗಣದಲ್ಲಿ ಮಂಗಳವಾರ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆ ನಡೆಯಿತು. ನಿಗಮದ ಅಧ್ಯಕ್ಷ ಡಾ.ಎಂ.ರಾಮಪ್ಪ, ವ್ಯವಸ್ಥಾಪಕ ನಿರ್ದೇಶಕ ಚಂದ್ರ ನಾಯಕ್, ಜಿಪಂ ಸಿಇಓ ಎಸ್.ಯುಕೇಶ್‌ಕುಮಾರ್, ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಡಿಸಿಪಿ ಹರ್ಷ ಪ್ರಿಯಂವದ ಮತ್ತಿತರರಿದ್ದರು.

ಮೈಸೂರು, ಮೇ 26(ಎಂಕೆ)– ಭೋವಿ ಸಮುದಾಯದ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು. ಈ ನಿಟ್ಟಿನಲ್ಲಿ ಸಮುದಾಯದ ಮುಖಂಡರು ಮತ್ತು ನಿಗಮದ ಅಧಿಕಾರಿಗಳು ಸಮುದಾಯದ ಮಹಿಳೆಯರನ್ನು ಒಂದುಗೂಡಿಸಿ, ಸ್ವ-ಸಹಾಯ ಸಂಘಗಳನ್ನು ರಚಿಸಲು ಮಾರ್ಗದರ್ಶನ ನೀಡುವಂತೆ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಡಾ.ಎಂ.ರಾಮಪ್ಪ ಸೂಚಿಸಿದರು.

ಮೈಸೂರು ಜಿಪಂ ಸಭಾಂಗಣದಲ್ಲಿ ಮಂಗಳವಾರ ನಡೆದ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಭೋವಿ ಸಮುದಾಯದ ಮಹಿಳೆಯರನ್ನು ಒಂದುಗೂಡಿಸಿ, ಕನಿಷ್ಟ 10 ಮಹಿಳೆಯರುಳ್ಳ ಸ್ವ-ಸಹಾಯ ಸಂಘ ರಚನೆಯಾದರೆ ಮೈಕ್ರೋ ಕ್ರೆಡಿಟ್ ಯೋಜನೆಯಡಿ ಉತ್ಪಾದನಾ ಚಟುವಟಿಕೆಗೆ 5 ಲಕ್ಷ ರೂ.ವರೆಗೆ ಸಾಲ-ಸೌಲಭ್ಯ ಪಡೆದುಕೊಳ್ಳಬಹುದು. ಇದರಿಂದ ಮಹಿಳಾ ಸ್ವ-ಸಹಾಯದ ಸಂಘದ ಜೊತೆಗೆ ಸಂಘದ ಸದಸ್ಯರೆಲ್ಲರೂ ಆರ್ಥಿಕವಾಗಿ ಸದೃಢರಾಗಲಿದ್ದಾರೆ ಎಂದರು.

ನಿಷ್ಪಕ್ಷಪಾತ ತನಿಖೆಗೆ ಮನವಿ...

"ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ ಈ ಹಿಂದೆ ನಡೆದಿರುವ ಅವ್ಯವಹಾರದ ತನಿಖೆ ನಡೆಸುವಂತೆ ಪೊಲೀಸ್ ಮಹಾನಿರ್ದೇಶಕರು ಹಾಗೂ ಗೃಹ ಮಂತ್ರಿಗಳಿಗೆ ಮೂರು ಬಾರಿ ಪತ್ರ ಬರೆದಿದ್ದೇನೆ. 97 ಕೋಟಿ ರೂ.ಅವ್ಯವಹಾರ ನಡೆದಿದೆ ಎನ್ನಲಾಗುತ್ತಿದ್ದು, ಕಾಗದ ಪತ್ರಗಳನ್ನು ಗಮನಿಸಿದರೆ 60 ರಿಂದ 65 ಕೋಟಿ ರೂ. ಅವ್ಯವಹಾರ ನಡೆದಿರುವಂತಿದೆ. ಅವ್ಯವಹಾರ ನಡೆದ ಸಂದರ್ಭದಲ್ಲಿದ್ದ ನಿಗಮದ ಎಂಡಿ ಮತ್ತು ಇನ್ನಿತರ ಅಧಿಕಾರಿಗಳು ಸದ್ಯಕ್ಕೆ ಜಾಮೀನಿನ ಮೇಲೆ ಹೊರಗಿದ್ದು, ತನಿಖೆ ನಡೆಸಿ ನಿಗಮಕ್ಕಾಗಿರುವ ನಷ್ಟವನ್ನು, ತಪ್ಪಿತಸ್ಥರಿಂದಲೇ ಭರಿಸುವಂತೆ ಕೋರಿದ್ದೇನೆ.

–ಡಾ.ಎಂ.ರಾಮಪ್ಪ, ಅಧ್ಯಕ್ಷರು, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ.

ಶಿಕ್ಷಣದಿಂದ ವಂಚಿತರಾಗಬಾರದು: ಮಹಿಳಾ ಸ್ವ-ಸಹಾಯ ಸಂಘಗಳ ರಚನೆಗಾಗಿ ಭೋವಿ ಜನಾಂಗದ ಹೆಣ್ಣು ಮಕ್ಕಳು ಮುಂದೆ ಬರಬೇಕು. ಈ ನಿಟ್ಟಿನಲ್ಲಿ ಮಹಿಳಾ-ಮಕ್ಕಳ ಅಭಿವೃದ್ಧಿ ಇಲಾಖೆ, ಭೋವಿ ಜನಾಂಗದ ಮುಖಂಡರು, ಸಮುದಾಯದ ಮಹಿಳೆಯರಿಗೆ ಮಾಹಿತಿ ನೀಡಿ, ಸರ್ಕಾರದ ಯೋಜನೆಗಳನ್ನು ಪಡೆದುಕೊಳ್ಳುವಂತೆ ಪ್ರೇರೇಪಿಸಬೇಕು. ಮುಖ್ಯವಾಗಿ ಭೋವಿ ಜನಾಂಗದ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ಕ್ರಮ ವಹಿಸಬೇಕು. ಅರ್ಜಿ ಸಲ್ಲಿಸುವ ಎಲ್ಲಾ ವಿದ್ಯಾರ್ಥಿಗಳಿಗೂ ಹಾಸ್ಟೆಲ್ ವ್ಯವಸ್ಥೆ ಮಾಡಿಕೊಡಬೇಕು. ಹಾಗೆಯೇ ಶಾಲಾ-ಕಾಲೇಜು ದಾಖಲಾತಿಗೆ ವಿಳಂಬವಾಗದಂತೆ ಜಾತಿ ಪ್ರಮಾಣ ಪತ್ರ ಒದಗಿಸಬೇಕು ಎಂದು ಸೂಚನೆ ನೀಡಿದರು.

ಸಬ್ಸಿಡಿ ಸಾಲ-ಸೌಲಭ್ಯಕ್ಕೆ ಅರ್ಜಿ ಸಲ್ಲಿಸಿ, ಆಯ್ಕೆಯಾದ ಫಲಾನುಭವಿಗಳಿಗೆ ಬ್ಯಾಂಕ್‌ಗಳು ಸಾಲ ನೀಡಲು ನಿರಾಕರಿಸಬಾರದು. ಜನಸಂಖ್ಯೆಯ ಆಧಾರದ ಮೇಲೆ ಸಾಲ ನೀಡುವ ಟಾರ್ಗೆಟ್(ಗರಿಷ್ಠ ಮಿತಿ) ನಿಗದಿಯಾಗಲಿದ್ದು, ಅರ್ಹರಿಗೆ ಅನ್ಯಾಯವಾಗದಂತೆ ಕ್ರಮವಹಿಸಬೇಕು. ಗಂಗಾ ಕಲ್ಯಾಣ ಯೋಜನೆಯಡಿ ಬೋರ್‌ವೆಲ್ ಕೊರೆಸಿದ ಕೆಲವೇ ದಿನಗಳಲ್ಲಿ ಯಂತ್ರೋಪಕರಣಗಳನ್ನು ಒದಗಿಸಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ನೆರವಾಗಬೇಕು.

ಭೋವಿ ಸಮುದಾಯಕ್ಕೆ 11 ಗ್ಯಾರಂಟಿ ಸಿಕ್ಕಿವೆ!

ಮೈಸೂರು, ಮೇ 26(ಎಂಕೆ)– ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಹಾಗೂ ನಿಗಮ ಆರು ಗ್ಯಾರಂಟಿ ಸೇರಿ 11 ಗ್ಯಾರಂಟಿ ಯೋಜನೆಗಳನ್ನು ರಾಜ್ಯದ ಬೋವಿ ಸಮುದಾಯ ಪಡೆದುಕೊಳ್ಳುತ್ತಿದೆ ಎಂದು ಕರ್ನಾಟಕ ಬೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಡಾ.ಎಂ.ರಾಮಪ್ಪ ತಿಳಿಸಿದರು.

ಮೈಸೂರು ಜಿಪಂ ಸಭಾಂಗಣದಲ್ಲಿ ಪ್ರಗತಿ ಪರಿಶೀಲನಾ ಸಭೆ ಬಳಿಕ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ನಿಗಮದ ಸ್ವಯಂ ಉದ್ಯೋಗ, ಉದ್ಯಮ ಶೀಲತಾ ಯೋಜನೆ, ಸ್ವಾವಲಂಬಿ ಸಾರಥಿ, ಗಂಗಾ ಕಲ್ಯಾಣ, ಮೈಕ್ರೋ ಕ್ರೆಡಿಟ್ ಹಾಗೂ ಭೂ ಒಡೆತನ ಯೋಜನೆಗಳ ಜೊತೆಗೆ ಪಂಚ ಗ್ಯಾರಂಟಿ ಯೋಜನೆಗಳನ್ನು ಬೋವಿ ಸಮುದಾಯ ಪಡೆದುಕೊಳ್ಳುತ್ತಿದೆ ಎಂದರು. ರಾಜ್ಯದ 11 ಜಿಲ್ಲೆಗಳಲ್ಲಿ ನಿಗಮದ ಕಚೇರಿ ಇದ್ದು, ಮುಂದಿನ ದಿನಗಳಲ್ಲಿ ಮೈಸೂರಿನಲ್ಲಿರುವ ಕಚೇರಿ ತೆರೆಯಲಾಗುವುದು. ಸ್ವಾವಲಂಬಿ ಸಾರಥಿ ಜೊತೆಗೆ ಗೂಡ್ಸ್ ವಾಹನಗಳು, ಕೃಷಿ ಉಪಯುಕ್ತತೆಗೆ ಟ್ರ್ಯಾಕ್ಟರ್‌ಗಳನ್ನು ಕೊಡಬೇಕು ಎಂಬ ಚಿಂತನೆ ಇದೆ. ಹಾಗೆಯೇ ನಿರುದ್ಯೋಗಿ ಯುವಕ-ಯುವತಿಯರಿಗೆ ಫಾಸ್ಟ್ ಫುಡ್ ಟ್ರಕ್ ಟ್ರೈಲರ್ ಅಥವಾ ಮೊಬೈಲ್ ಕಿಚನ್ ಕಿಯೋಸ್ಕ್ ಸೌಲಭ್ಯವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕ್ರಮವಹಿಸಲಾಗಿದೆ ಎಂದು ಹೇಳಿದರು.

ಕೇಳಿದಷ್ಟು ಅನುದಾನ ಕೊಟ್ಟಿಲ್ಲ: 2025-26ನೇ ಸಾಲಿನಲ್ಲಿ ಬೋವಿ ಅಭಿವೃದ್ಧಿ ನಿಗಮಕ್ಕೆ 300 ಕೋಟಿ ರೂ.ಅನುದಾನ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿತ್ತು. ಆದರೆ, 93.75 ಕೋಟಿ ರೂ.ನೀಡಲಾಗಿದ್ದು, ಅದರಲ್ಲಿ ಈಗಾಗಲೇ 68.81 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಅನುದಾನ ನೀಡುವ ಭರವಸೆ ಇದ್ದು, ಮುಖ್ಯಮಂತ್ರಿಗಳು ಮನವಿಗೆ ಸ್ಪಂದಿಸುತ್ತಾರೆ ಎಂಬ ವಿಶ್ವಾಸವಿದೆ ಎಂದು ಡಾ.ಎಂ. ರಾಮಪ್ಪ ಹೇಳಿದರು.

2 ಲಕ್ಷ ರೂ.ಪರಿಹಾರ: ಕಲ್ಲು ಹೊಡೆಯುವುದು ಬೋವಿ ಸಮುದಾಯದ ಮೂಲ ಕಸುಬಾಗಿದ್ದು, ಕೈಯಿಂದ ಕಲ್ಲು ಹೊಡೆಯುವುದಕ್ಕೆ ಯಾವುದೇ ವಿರೋಧವಿಲ್ಲ. ಆದರೆ, ದೊಡ್ಡ ದೊಡ್ಡ ಬಂಡೆಗಳನ್ನು ಹೊಡೆಯುವ ಕ್ರಷರ್‌ಗಳಲ್ಲಿ ಕೆಲಸ ಮಾಡದಂತೆ ಸಮುದಾಯದ ಜನರಿಗೆ ತಿಳಿಸಲಾಗುತ್ತಿದೆ. ಕ್ರಷರ್‌ಗಳಲ್ಲಿ ಹಾನಿಗೊಳಗಾದ ಸಮುದಾಯದ ಕೂಲಿ ಕಾರ್ಮಿಕರಿಗೆ ನಿಗಮದಿಂದ 2 ಲಕ್ಷ ರೂ.ವರೆಗೆ ಪರಿಹಾರ ನೀಡಲಾಗುವುದು ಎಂದರು.

ಆರ್ಥಿಕ ಸ್ವಾವಲಂಬನೆಗೆ ನೆರವು: ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಚಂದ್ರನಾಯಕ್ ಮಾತನಾಡಿ, 2016ರಲ್ಲಿ ಸ್ಥಾಪನೆಯಾದ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮವು ಸಮಾಜ ಕಲ್ಯಾಣ ಇಲಾಖೆ ಅಡಿಯಲ್ಲಿ ಕಾರ್ಯನಿರ್ವಹಿಸಲಿದ್ದು, ಸ್ವಯಂ ಉದ್ಯೋಗ ನೇರಸಾಲ ಯೋಜನೆ, ಕುರಿ ಮತ್ತು ಮೇಕೆ ಸಾಕಾಣಿಕೆ, ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ, ಹೈನುಗಾರಿಕೆ, ಸ್ವಾವಲಂಬಿ ಸಾರಥಿ ಯೋಜನೆ, ಮೈಕ್ರೋ ಕ್ರೆಡಿಟ್ ಯೋಜನೆ, ಗಂಗಾ ಕಲ್ಯಾಣ ಯೋಜನೆ ಹಾಗೂ ಭೂ ಒಡೆತನ ಯೋಜನೆಗಳ ಮೂಲಕ ಸಮುದಾಯದ ಜನರ ಆರ್ಥಿಕ ಸ್ವಾವಲಂಬನೆಗೆ ನೆರವು ನೀಡುತ್ತಿದೆ ಎಂದರು.

ಜಿಪಂ ಸಿಇಓ ಎಸ್.ಯುಕೇಶ್‌ಕುಮಾರ್ ಮಾತನಾಡಿ, ಭೋವಿ ನಿಗಮದ ಯೋಜನಾವಾರು ನೋಡಲ್ ಅಧಿಕಾರಿ ನೇಮಕ ಮಾಡಿ, ಫಲಾನುಭವಿಗಳು, ಬ್ಯಾಂಕ್‌ನೊಂದಿಗೆ ಸಮನ್ವಯ ಸಾಧಿಸಬೇಕು. ಇದರಿಂದ ಬ್ಯಾಂಕ್‌ನಿಂದ ಸಾಲ ನೀಡಲು ನಿರಾಕರಣೆಯಾದಲ್ಲಿ ಸ್ಪಷ್ಟ ಕಾರಣ ತಿಳಿಯಲಿದ್ದು, ಸಮಸ್ಯೆ ಇದ್ದಲ್ಲಿ ಸರಿಪಡಿಸಬಹುದಾಗಿದೆ. ಹಾಗೆಯೇ ಶೇ. 100 ರಷ್ಟು ಗುರಿ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದರು. ಎಡಿಸಿ ಆರ್. ಐಶ್ವರ್ಯ, ಡಿಸಿಪಿ ಹರ್ಷ ಪ್ರಿಯಂವದ, ಜಿಪಂ ಉಪಕಾರ್ಯದರ್ಶಿ ಭೀಮಪ್ಪ ಕೆ.ಲಾಳಿ, ಚೆಸ್ಕಾಂ ಮುಖ್ಯ ಇಂಜಿನಿಯರ್ ಸುನೀಲ್, ಸಮುದಾಯದ ಮುಖಂಡರಿದ್ದರು.

ಮೆರವೇಗೌಡರ ಹುಟ್ಟುಹಬ್ಬ ಆಚರಣೆ...


ಮೈಸೂರು ಜಿಲ್ಲಾ ಪಟಾಕಿ ಮಾರಾಟಗಾರರ ಸಂಘದ ಅಧ್ಯಕ್ಷ ಮೆರವೇಗೌಡರ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಈ ವೇಳೆ ಆನಂದ್, ವೇಣು, ಪ್ರಕಾಶ್, ರವಿ, ಚೇತನ್, ಕನ್ನೇಗೌಡ ಟೈಗರ್ಸ್ ಹಾಗೂ ಸ್ನೇಹಿತರು ಉಪಸ್ಥಿತರಿದ್ದರು.

ವಿದ್ಯುತ್ ವ್ಯತ್ಯಯ


ಮೈಸೂರು ಮೇ.26 – ಜ್ಯೋತಿನಗರ ಉಪ ವಿಭಾಗ ವ್ಯಾಪ್ತಿಯ ಪ್ರದೇಶಗಳಲ್ಲಿ ಭೂಗತ ಕೇಬಲ್ ಕಾಮಗಾರಿ ಕೆಲಸದ ನಿಮಿತ್ತ ಮೇ 27, 29 ಹಾಗೂ 30ರವರೆಗೆ ಬೆಳಿಗ್ಗೆ 9ರಿಂದ ಸಂಜೆ 6ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಮೇ 27ರಂದು ಶಕ್ತಿನಗರ, ಟೀಚರ್ಸ್ ಬಡಾವಣೆ, ಮೇ 29ರಂದು ಚಾಮುಂಡಿ ವಿಹಾರ ಬಡಾವಣೆ, ಮೇ 30ರಂದು ಶಕ್ತಿನಗರ, ಜೆಎಸ್‌ಎಸ್ ಬಡಾವಣೆ ಹಾಗೂ ಟೀಚರ್ಸ್ ಬಡಾವಣೆಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮುಕ್ತ ವಿವಿ ಎಂಎ ಪರೀಕ್ಷೆಯಲ್ಲಿ ಮಾಸ್ ಕಾಪಿ!

ಅಭ್ಯರ್ಥಿಗಳಿಂದ ಪರೀಕ್ಷಾ ಕೇಂದ್ರದಲ್ಲೇ ಹಣ ಪಡೆದು ಲೆಕ್ಕ ಹಾಕುತ್ತಿರುವ ವೀಡಿಯೊ ವೈರಲ್



ಮೈಸೂರು,ಮೇ26 (ಬಿಎಲ್‌ಯು)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಂಎ ಪರೀಕ್ಷೆಯಲ್ಲಿ ಪರೀಕ್ಷಾ ಕೇಂದ್ರದಲ್ಲೇ ಹಣ ವಸೂಲಿ ಮಾಡಿ, ಮಾಸ್ ಕಾಪಿಗೆ ಅವಕಾಶ ಮಾಡಿಕೊಟ್ಟಿರುವ ವೀಡಿಯೊ ವೈರಲ್ ಆಗಿದೆ.

ಬೆಳಗಾವಿಯ ಅಥಣಿಯ ಖಾಸಗಿ ಕಾಲೇಜಿನ ಪರೀಕ್ಷಾ ಕೊಠಡಿಯಲ್ಲಿ ಈ ಪರೀಕ್ಷಾ ಅಕ್ರಮ ನಡೆದಿದೆ. ಕಳೆದ 3 ದಿನಗಳಿಂದ ಎಂಎ ಪರೀಕ್ಷೆ ನಡೆಯುತ್ತಿದೆ. ಆದರೆ, ಪರೀಕ್ಷಾ ಅಕ್ರಮದಲ್ಲಿ ಮೇಲ್ವಿಚಾರಕರೇ ಭಾಗಿಯಾಗಿದ್ದಾರೆ. ಪ್ರತಿಯೊಂದು ವಿಷಯದ ಪರೀಕ್ಷೆಗೆ ಒಂದೂವರೆ ಸಾವಿರ ರೂಪಾಯಿ ಹಣ ವಸೂಲಿ ಮಾಡುತ್ತಿದ್ದಾರೆ. ತರುವಾಯ ಇಷ್ಟ ಬಂದ ಹಾಗೆ ಬುಕ್ ಇಟ್ಟುಕೊಂಡು ಕಾಪಿ ಮಾಡಲು ಅವಕಾಶ ನೀಡಿದ್ದಾರೆ.

"ಮಾಸ್ ಕಾಪಿ ಮಾಡುತ್ತಿರುವ ವೀಡಿಯೊ ವೈರಲ್ ಬಗ್ಗೆ ಪರೀಕ್ಷಾಂಗ ಕುಲಸಚಿವರಿಂದ ಮಾಹಿತಿ ಪಡೆದ ಬಳಿಕ ಪ್ರತಿಕ್ರಿಯೆ ನೀಡುತ್ತೇನೆ.

–ಪ್ರೊ.ಶರಣಪ್ಪ ವಿ.ಹಲಸೆ, ಕುಲಪತಿ, ಕರ್ನಾಟಕ ಮುಕ್ತ ವಿವಿ

ನಾನು ಕಾಪಿ ಮಾಡಲ್ಲ. ಹಣವನ್ನು ಕೊಡುವುದಿಲ್ಲ ಎಂದು ವಿದ್ಯಾರ್ಥಿನಿಯೊಬ್ಬಳು ಹೇಳಿದಾಗ ಪರೀಕ್ಷಾ ಕೊಠಡಿ ಮೇಲ್ವಿಚಾರಕರು ಅದಕ್ಕೆ ಒಪ್ಪಿಲ್ಲ. ನೀವು ಒಂದು ವೇಳೆ ಹಣ ಕೊಡದೆ ಪರೀಕ್ಷೆ ಬರೆದರೆ ಅದಕ್ಕೆ ನಾನು ಸಹಿ ಹಾಕುವುದಿಲ್ಲ ಎಂದು ಪರೀಕ್ಷಾ ಮೇಲ್ವಿಚಾರಕರೇ ಬೆದರಿಕೆ ಹಾಕಿದ್ದಾನೆ. ಪರೀಕ್ಷಾ ಕೇಂದ್ರದಲ್ಲೇ ಹಣ ವಸೂಲಿ ಮಾಡಿ, ಮಾಸ್ ಕಾಪಿಗೆ ಅವಕಾಶ ಮಾಡಿಕೊಟ್ಟಿರುವ ದೃಶ್ಯವನ್ನು ಪರೀಕ್ಷಾರ್ಥಿಯ ಪತಿ ಮೊಬೈಲ್‌ನಲ್ಲಿ ಸೆರೆ ಹಿಡಿದು ವೈರಲ್ ಮಾಡಿದ್ದಾನೆ.

ನಾಳೆ ಸಂಗೀತ ಕಲಾನಿಧಿ ಮೈಸೂರು ವಾಸುದೇವಾಚಾರ್ಯರ ಜನ್ಮದಿನೋತ್ಸವ

ಮೈಸೂರು,ಮೇ 26(ಎಂಟಿವೈ)– ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯ ಬಿಡಾರಂ ಕೃಷ್ಣಪ್ಪನವರ ರಾಮ ಮಂದಿರದಲ್ಲಿ ಮೇ 28ರ ಬೆಳಗ್ಗೆ 10.30ಕ್ಕೆ ಸಂಗೀತ ಕಲಾನಿಧಿ ಮೈಸೂರು ವಾಸುದೇವಾಚಾರ್ಯರ ಜನ್ಮ ದಿನಾಚರಣಾ ಮಹೋತ್ಸವ ಆಯೋಜಿಸಲಾಗಿದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದ್ದಾರೆ.


ಟಿ.ಎಸ್.ಶ್ರೀವತ್ಸ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮ ನಡೆಸಲಾಗುತ್ತಿದೆ. ಹೆಸರಾಂತ ಸಂಗೀತ ವಿದುಷಿ ಡಾ.ಟಿ.ಎಸ್. ಸತ್ಯವತಿ ಮತ್ತು ವೃಂದದವರಿಂದ 'ವಾಸುದೇವ ವಾಗ್ಗೇಯ ವೈಭವ' ಕಾರ್ಯಕ್ರಮ ಜರುಗಲಿದೆ. ವಿದುಷಿಯರಾದ ಅರ್ಚನಾ ಭೋಜ್, ಶಿಲ್ಪಾ ಶಶಿಧರ್, ಅಂಜನಾ ಪಿ.ರಾವ್ ಮತ್ತು ಲಾವಣ್ಯ ಕೃಷ್ಣಮೂರ್ತಿ ಗಾಯನ ನಡೆಸಿಕೊಡಲಿದ್ದಾರೆ. ಪಿಟೀಲು-ಅದಿತಿ ಕೃಷ್ಣಪ್ರಕಾಶ್, ಮೃದಂಗ-ಪ್ರೊ.ಜಿ.ಎಸ್. ರಾಮಾನುಜಮ್ ರವರು ಸಹಕರಿಸಲಿದ್ದಾರೆ ಎಂದರು.

ಮೈಸೂರು ವಾಸುದೇವಾಚಾರ್ಯರು ನಾಡಿನ ಶ್ರೇಷ್ಠ ಸಂಗೀತಗಾರರು. ಹೀಗಾಗಿ ಸರ್ಕಾರದ ಸಹಯೋಗದಲ್ಲಿ ಅವರ ಸ್ಮರಣೆ ಈ ರೀತಿ ಆರಂಭವಾಗುತ್ತಿದೆ. ಕಾರ್ಯಕ್ರಮದಲ್ಲಿ ಅವರ ಕೃತಿಗಳ ವಿಶ್ಲೇಷಣೆಯೂ ನಡೆಯಲಿದೆ. ಇದಲ್ಲದೆ ಅಂದೇ ಸಂಜೆ ನಾದಬ್ರಹ್ಮ ಸಂಗೀತ ಸಭಾದಲ್ಲಿ ಸುಕನ್ಯಾ ಪ್ರಭಾಕರ್ ಅವರಿಂದ ಮೈಸೂರು ವಾಸುದೇವಾಚಾರ್ಯರ ಕೃತಿಗಳ ಗಾಯನ ನಡೆಯಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಶ್ರೀನಿವಾಸಮೂರ್ತಿ, ಯೋಗಾನಂದನ್, ರವಿಶಂಕರ್ ಇದ್ದರು.

ವೃತ್ತಿಪರ ಕೋರ್ಸ್‌ಗಳ ಸರ್ಕಾರಿ ಕೋಟಾ ಸೀಟುಗಳಿಗೆ ನಿಗದಿತ ಶುಲ್ಕ ಮಾತ್ರವೇ ಪಾವತಿ

ಹೆಚ್ಚಿನ ಶುಲ್ಕಕ್ಕೆ ಬೇಡಿಕೆ ಬಂದರೆ ದೂರು ಸಲ್ಲಿಸಲು ಸೂಚನೆ

ಬೆಂಗಳೂರು, ಮೇ 26 (ಕೆಎಂಶಿ)–ವೃತ್ತಿಪರ ಕೋರ್ಸ್‌ಗಳಿಗೆ ಸರ್ಕಾರಿ ಕೋಟಾದ ಸೀಟುಗಳ ಪ್ರವೇಶ ಸಂದರ್ಭದಲ್ಲಿ ಸರ್ಕಾರ ನಿಗದಿಪಡಿಸಿರುವ ಶುಲ್ಕ ಮತ್ತು ಇತರೇ ಶುಲ್ಕವನ್ನು ಹೊರತುಪಡಿಸಿ, ಹೆಚ್ಚಿನ ಶುಲ್ಕಕ್ಕೆ ಬೇಡಿಕೆ ಇಟ್ಟ ಪಕ್ಷದಲ್ಲಿ ಅಂತಹ ಸಂಸ್ಥೆಗಳ ವಿರುದ್ಧ ನೊಂದ ವಿದ್ಯಾರ್ಥಿಗಳು ಶುಲ್ಕ ನಿಯಂತ್ರಣ ಸಮಿತಿಗೆ ದೂರು ನೀಡಬಹುದು ಎಂದು ಸಮಿತಿ ಅಧ್ಯಕ್ಷ ನ್ಯಾಯಮೂರ್ತಿ ಬಿ.ಶ್ರೀನಿವಾಸಗೌಡ ತಿಳಿಸಿದ್ದಾರೆ. ರಾಜ್ಯದ ಖಾಸಗಿ ವೃತ್ತಿಪರ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲಿನ (ಅನುದಾನಿತ, ಅನುದಾನ ರಹಿತ, ಅಲ್ಪಸಂಖ್ಯಾತ-ಧಾರ್ಮಿಕ & ಭಾಷಾ ಅಲ್ಪಸಂಖ್ಯಾತ) ವಿವಿಧ ವೃತ್ತಿಪರ ಕೋರ್ಸ್‌ಗಳಲ್ಲಿ ಲಭ್ಯವಿರುವ ಸರ್ಕಾರಿ ಕೋಟಾದ ಸೀಟುಗಳನ್ನು ಕೆಇಎ ಮೂಲಕ ಹಂಚಿಕೆ ಮಾಡಲಾಗುತ್ತಿದೆ. ಈ ಕೋರ್ಸ್‌ಗಳಿಗೆ ಸರ್ಕಾರ ನಿಗದಿಪಡಿಸಿರುವ ಶುಲ್ಕ ಬಿಟ್ಟು ಬೇರೆ ಶುಲ್ಕ ವಸೂಲಿ ಮಾಡುವಂತಿಲ್ಲ ಎಂದು ತಿಳಿಸಿದ್ದಾರೆ. ಮುಂದೆ ಪ್ರವೇಶ ಬಯಸುವ ಹಾಗೂ ಈಗಾಗಲೇ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಕೂಡ ಈ ರೀತಿಯ ಸಮಸ್ಯೆ ಎದುರಿಸುತ್ತಿದ್ದರೆ ದೂರು ಸಲ್ಲಿಸಬಹುದು ಎಂದು ನ್ಯಾಯಮೂರ್ತಿ ಶ್ರೀನಿವಾಸಗೌಡ ಸಲಹೆ ನೀಡಿದ್ದಾರೆ.



ಗೋಹತ್ಯೆ ಸಂಪೂರ್ಣ ನಿಷೇಧ ಕೋರಿದ್ದ ಪಿಐಎಲ್‌ನ ತುರ್ತು ವಿಚಾರಣೆಗೆ ಸುಪ್ರೀಂಕೋರ್ಟ್ ನಿರಾಕರಣೆ



ನವದೆಹಲಿ: ಬಕ್ರೀದ್ ಹಬ್ಬ ಸಮೀಪಿಸುತ್ತಿದ್ದು, ಅದಕ್ಕೂ ಮೊದಲು ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸುವ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ತುರ್ತು ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಮಂಗಳವಾರ ನಿರಾಕರಿಸಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜೋಯ್ಮಲ್ಯ ಬಾಗ್ಚಿ ಅವರಿದ್ದ ಪೀಠವು ಮುಂದೆ ಈ ಅರ್ಜಿ ಬಂದಾಗ, ಇಂಥದ್ದೊಂದು ಸಂಗತಿ ನಿಮಗೆ ಹಬ್ಬದ ಒಂದು ದಿನದ ಮುಂಚಿತವಾಗಿ ನೆನಪಿಗೆ ಬರುತ್ತದೆ. ಈ ಕುರಿತು ವಿಚಾರಣೆ ನಡೆಸುವ ತುರ್ತು ಅಗತ್ಯ ಕಂಡು ಬರುತ್ತಿಲ್ಲ ಎಂದು ಅಭಿಪ್ರಾಯಪಟ್ಟಿತು.

ನಾಡಿದ್ದು ಬಕ್ರೀದ್ ಹಬ್ಬವಿದೆ. ಗೋಹತ್ಯೆ ತಡೆ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಕೋರಿ ಈ ಅರ್ಜಿ ಸಲ್ಲಿಸಲಾಗಿದೆ. ಆದ್ದರಿಂದ ದಯವಿಟ್ಟು ಈ ಅರ್ಜಿಯನ್ನು ನಾಳೆಯೇ ವಿಚಾರಣಾ ಪಟ್ಟಿಗೆ ಸೇರಿಸಬೇಕು ಎಂದು ಅರ್ಜಿದಾರರ ಪರ ವಕೀಲ ಬರುಣ್‌ಕುಮಾರ್ ಸಿನ್ಹಾ ಪೀಠಕ್ಕೆ ಒತ್ತಾಯಿಸಿದರು. ಅಖಿಲ ಭಾರತ ಹಿಂದೂ ಮಹಾಸಭಾದ ಮಾಜಿ ಉಪಾಧ್ಯಕ್ಷ ಸತೀಶ್‌ಕುಮಾರ್ ಅಗರ್ವಾಲ್ ಅರ್ಜಿ ಸಲ್ಲಿಸಿದ್ದರು. ಹಸುಗಳು ಮತ್ತು ಅವುಗಳ ಸಂತತಿಯನ್ನು ಹತ್ಯೆಯಿಂದ ರಕ್ಷಿಸಲು ಗೋಹತ್ಯೆ ವಿರೋಧಿ ಕಾನೂನುಗಳನ್ನು ಜಾರಿಗೊಳಿಸುವಂತೆ ಕೋರಿದ್ದರು. ಇದರೊಂದಿಗೆ, ಕಾನೂನಿನ ಪ್ರಕಾರ ದೇಶದ ಪ್ರತಿಯೊಂದು ರಾಜ್ಯದಲ್ಲೂ ಕಸಾಯಿಖಾನೆಗಳನ್ನು ನಿಯಂತ್ರಿಸಲು ನಿರ್ದಿಷ್ಟ ಮಾರ್ಗಸೂಚಿಗಳನ್ನು ಹೊರಡಿಸುವಂತೆ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಬೇಕೆಂದು ಅರ್ಜಿಯಲ್ಲಿ ವಿನಂತಿಸಲಾಗಿತ್ತು.


ಗೌಜಲ ಹಕ್ಕಿ ಮಾರಾಟಗಾರನ ಬಂಧನ

ಮೈಸೂರು, ಮೇ26(ಬಿಎಲ್‌ಯು)– ಅಕ್ರಮವಾಗಿ ಗೌಜಲ ಹಕ್ಕಿ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಮೈಸೂರಿನ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳದವರು ಬಂಧಿಸಿದ್ದಾರೆ. ಮೈಸೂರಿನ ರಮ್ಮನಹಳ್ಳಿ ವಾಸಿ ಶಿವಣ್ಣ ಬಂಧಿತ ಆರೋಪಿಯಾಗಿದ್ದಾನೆ.

ರಮ್ಮನಹಳ್ಳಿಯ ಆಟದ ಮೈದಾನದ ಬಳಿ ಶಿವಣ್ಣ ಗೌಜಲ ಹಕ್ಕಿ ಮಾರಾಟ ಮಾಡುತ್ತಿದ್ದ. ಆ ವೇಳೆ ಸ್ಥಳಕ್ಕೆ ಹೋದ ಅರಣ್ಯ ಸಂಚಾರಿ ದಳದವರು ಆರೋಪಿ ಶಿವಣ್ಣನನ್ನು ಬಂಧಿಸಿ, ಎರಡು ಗೌಜಲ ಹಕ್ಕಿ ಹಾಗೂ ಪಂಜರವನ್ನು ವಶಕ್ಕೆ ಪಡೆದಿದ್ದಾರೆ.

ಅರಣ್ಯ ಕಾಯ್ದೆ ಮತ್ತು ವನ್ಯಜೀವಿಗಳ ಸಂರಕ್ಷಣಾ ಕಾಯ್ದೆಗೆ ಸಂಬಂಧಿಸಿದಂತೆ ಅಕ್ರಮ ಚಟುವಟಿಕೆ ಕಂಡು ಬಂದರೆ ಮಾಹಿತಿ ನೀಡುವಂತೆ ಅರಣ್ಯ ಸಂಚಾರಿ ದಳದವರು ಸಲಹೆ ನೀಡಿದ್ದಾರೆ. ಮೈಸೂರಿನ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳದ ದೂರವಾಣಿ ಸಂಖ್ಯೆ 9741209859 ಹಾಗೂ ಮಡಿಕೇರಿ ಸಿಐಡಿ ಅರಣ್ಯ ಘಟಕ ಪೊಲೀಸ್ ಅಧೀಕ್ಷಕರ ಕಚೇರಿ ದೂರವಾಣಿ ಸಂಖ್ಯೆ 9480800220 ಅನ್ನು ಸಂಪರ್ಕಿಸುವಂತೆ ಸೂಚಿಸಿದ್ದಾರೆ.

ಗಣಪತಿ ಸಚ್ಚಿದಾನಂದ ಶ್ರೀಗಳ ಹುಟ್ಟುಹಬ್ಬ; ಗೋ ಸೇವೆ


ಅಪೂರ್ವ ಸ್ನೇಹ ಬಳಗ ಹಾಗೂ ಶ್ರೀ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳ ಭಕ್ತವೃಂದದಿಂದ ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳ 84ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ನಂಜುಮಳಿಗೆಯಲ್ಲಿ ಗೋಪೂಜೆ ಸಲ್ಲಿಸಿ, ಮೇವು ವಿತರಿಸಲಾಯಿತು. ಈ ವೇಳೆ ಪಾಲಿಕಾ ಮಾಜಿ ಸದಸ್ಯರಾದ ಮಾ.ವಿ.ರಾಮಪ್ರಸಾದ್, ಎಂ.ಡಿ.ಪಾರ್ಥಸಾರಥಿ, ಜಗದೀಶ್, ಜೀವಧಾರ ಗಿರೀಶ್, ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ, ವಿಕ್ರಂ ಅಯ್ಯಂಗಾರ್, ಆಧ್ಯಾತ್ಮಿಕ ಚಿಂತಕ ವಿಕಾಶ್‌ಶಾಸ್ತ್ರಿ, ನಿರೂಪಕ ಅಜಯ್‌ಶಾಸ್ತ್ರಿ, ಅಪೂರ್ವ ಸುರೇಶ್, ರಾಜಣ್ಣ, ಶ್ರೀಕಾಂತ್ ಕಶ್ಯಪ್, ಜತ್ತಿ ಪ್ರಸಾದ್, ಶಿವಲಿಂಗಸ್ವಾಮಿ, ಶಿವು, ಅರುಣ್, ಚಕ್ರಪಾಣಿ, ಸುಚೇಂದ್ರ, ದಯಾನಂದ ನಾಯಕ್ ಇನ್ನಿತರರಿದ್ದರು.

ಗಂಗರಾಜು ಜಾಮೀನು ಅರ್ಜಿ ವಿಚಾರಣೆ




ಮೈಸೂರು, ಮೇ26(ಬಿಎಲ್‌ಯು)–ಕಾರು ಡಿಕ್ಕಿ ಹೊಡೆಸಿ, ಕೊಲೆಯತ್ನ ಆರೋಪ ಎದುರಿಸುತ್ತಿರುವ ಮೈಸೂರಿನ ಆರ್‌ಟಿಐ ಕಾರ್ಯಕರ್ತ ಗಂಗರಾಜು ಜಾಮೀನು ಅರ್ಜಿ ವಿಚಾರಣೆ ನಾಳೆ (ಮೇ 27) ನಡೆಯಲಿದೆ. ಮೈಸೂರಿನ 2 ನೇ ಎಡಿಜೆ ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ವಿಚಾರಣೆ ನಡೆಯಿತು. ಈ ವೇಳೆ ಜಾಮೀನು ನೀಡುವ ಕುರಿತಂತೆ ನಾಳೆ ಆಕ್ಷೇಪಣೆ ಸಲ್ಲಿಸುವಂತೆ ಸರ್ಕಾರಿ ಅಭಿಯೋಜಕರಿಗೆ 2ನೇ ಎಡಿಜೆ ನ್ಯಾಯಾಲಯದ ನ್ಯಾಯಾಧೀಶರಾದ ರೂಪ ಸೂಚನೆ ನೀಡಿ, ವಿಚಾರಣೆಯನ್ನು ನಾಳೆಗೆ ಮುಂದೂಡಿದರು.

ಉಚಿತ ಮೂಳೆ ಖನಿಜ ಸಾಂದ್ರತೆ ತಪಾಸಣಾ ಶಿಬಿರ

ಮೈಸೂರು, ಮೇ 26–ಮೈಸೂರಿನ ದಟ್ಟಗಳ್ಳಿಯಲ್ಲಿರುವ ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರದಲ್ಲಿ ಮೇ 27ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2ರವರೆಗೆ ಉಚಿತ ಮೂಳೆ ಖನಿಜ ಸಾಂದ್ರತೆ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8277888527 ಸಂಪರ್ಕಿಸಬಹುದು.

4 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡರಿಂದ ಚಾಲನೆ


ಚಾಮುಂಡೇಶ್ವರಿ ಕ್ಷೇತ್ರದ ದಡದಕಲ್ಲಹಳ್ಳಿ, ಯಾಚೇಗೌಡನಹಳ್ಳಿ ಮತ್ತು ಹೊಸಕೋಟೆ ಗ್ರಾಮಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ನೀಡಿದ ಶಾಸಕ ಜಿ.ಟಿ.ದೇವೇಗೌಡ ಅವರನ್ನು ಗ್ರಾಮಸ್ಥರು ಆತ್ಮೀಯವಾಗಿ ಅಭಿನಂದಿಸಿದರು.

ಮೈಸೂರು, ಮೇ 26–ಚಾಮುಂಡೇಶ್ವರಿ ಕ್ಷೇತ್ರದ ದಡದಕಲ್ಲಹಳ್ಳಿ, ಯಾಚೇಗೌಡಹಳ್ಳಿ ಮತ್ತು ಹೊಸಕೋಟೆ ಗ್ರಾಮಗಳಲ್ಲಿ 4 ಕೋಟಿ 83 ಲಕ್ಷ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡರು ಚಾಲನೆ ನೀಡಿದರು.

ದಡದಕಲ್ಲಹಳ್ಳಿ ಗ್ರಾಮದಲ್ಲಿ 80 ಲಕ್ಷ ರೂ. ವೆಚ್ಚದಲ್ಲಿ ಗ್ರಾಮದ ಪರಿಮಿತಿಯ ರಸ್ತೆಗಳ ಅಭಿವೃದ್ಧಿಗೆ ಚಾಲನೆ ನೀಡಿದರು. ದಡದಕಲ್ಲಹಳ್ಳಿ ಗ್ರಾಮದ ಕೆಲವು ಮನೆಗಳಿಗೆ ವಿದ್ಯುತ್ ಸಂಪರ್ಕವಿಲ್ಲದೆ ತೊಂದರೆಯಾಗುತ್ತಿದ್ದು, ನಿರಂತರ ವಿದ್ಯುತ್ ಸಂಪರ್ಕ ಒದಗಿಸಲು ಗ್ರಾಮಸ್ಥರು ಕೋರಿದ್ದರು. ಸೆಸ್ಕಾಂನ ಅಧೀಕ್ಷಕ ಅಭಿಯಂತರರಿಗೆ ಕೂಡಲೇ ಸದರಿ ಮನೆಗಳಿಗೆ ನಿರಂತರ ವಿದ್ಯುತ್ ಸಂಪರ್ಕ ಒದಗಿಸಲು ಗೌಡರು ಸೂಚಿಸಿದರು.

ಹೊಸಕೋಟೆಯಿಂದ ಯಾಚೇಗೌಡನಹಳ್ಳಿ ಸಂಪರ್ಕಿಸುವ ಪ್ರಮುಖ ರಸ್ತೆಯನ್ನು 3 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಯಾಚೇಗೌಡನಹಳ್ಳಿ ಪರಿಮಿತಿಯಲ್ಲಿ 23 ಲಕ್ಷ ವೆಚ್ಚದಲ್ಲಿ ರಸ್ತೆಗಳ ಅಭಿವೃದ್ಧಿಗೆ ಚಾಲನೆ ನೀಡಿದರು.

ಯಾಚೇಗೌಡನಹಳ್ಳಿಯಿಂದ ಕಾವೇರಿ ಹಿನ್ನೀರಿಗೆ ಹೋಗುವ ಈ ರಸ್ತೆ ಹಾಳಾಗಿದ್ದು, ಸದರಿ ರಸ್ತೆಯ ಅಭಿವೃದ್ಧಿಪಡಿಸಿಕೊಡುವಂತೆ ಅಲ್ಲಿನ ರೈತರು ಮನವಿ ಮಾಡಿದ್ದರು. ಶಾಸಕರು ಮುಂದಿನ ಅನುದಾನದಲ್ಲಿ ರಸ್ತೆ ಅಭಿವೃದ್ಧಿಪಡಿಸುವ ಭರವಸೆ ನೀಡಿದರು.

ಬಸ್ ಸೌಲಭ್ಯವಿಲ್ಲದ ಬಗ್ಗೆ ಅಲ್ಲಿನ ಶಾಲಾ ಮಕ್ಕಳು ತಿಳಿಸಿದ ಕೂಡಲೇ ವಿಭಾಗೀಯ ನಿಯಂತ್ರಣಾಧಿಕಾರಿ ವೀರೇಶ್ ಅವರಿಗೆ ದೂರವಾಣಿ ಮೂಲಕ ಮಾಹಿತಿ ತಿಳಿಸಿ, ಕೂಡಲೇ ಬಸ್ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲು ಸೂಚಿಸಿದರು.

ಹೊಸಕೋಟೆಯಲ್ಲಿ 80 ಲಕ್ಷ ವೆಚ್ಚದಲ್ಲಿ ಗ್ರಾಮದ ಪರಿಮಿತಿಯಲ್ಲಿ ಚರಂಡಿ ಮತ್ತು ರಸ್ತೆ ನಿರ್ಮಾಣಕ್ಕೆ ಚಾಲನೆ ನೀಡಿದರು. ಗ್ರಾಮಸ್ಥರು ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಮಾಡುವಂತೆ ಮನವಿ ಮಾಡಿದರು. ಶಾಸಕರು ಕೂಡಲೇ ಶಾಸಕರ ಅನುದಾನದಲ್ಲಿ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲು ಸೂಚಿಸಿದರು. ಜಿಪಂ ಮಾಜಿ ಸದಸ್ಯ ಹೆಚ್.ಎಸ್. ನಾಗರಾಜು, ಗ್ರಾಪಂ ಮಾಜಿ ಅಧ್ಯಕ್ಷ ಯೋಗಮೂರ್ತಿ, ಸದಸ್ಯ ಲೋಕೇಶ್, ಮುಖಂಡರಾದ ವೀರಭದ್ರಸ್ವಾಮಿ, ಸಿದ್ದಲಿಂಗಪ್ಪ, ಮಂಜು, ಮುಕುಂದ, ವೆಂಕಟೇಶ್, ಸೋಮಶೇಖರ್, ನಾಗೇಂದ್ರ, ಯಾಚೇಗೌಡನಹಳ್ಳಿ ನಂಜುಂಡೇಗೌಡ, ಮಲ್ಲೇಶ್, ಶಿವಣ್ಣ, ತಿಲಕ್, ಶರತ್, ಪರಶುರಾಮ್, ಹೊಸಕೋಟೆ ತಿಮ್ಮೇಗೌಡ, ಕೆಂಪೇಗೌಡ, ಬಸವರಾಜು, ರಾಮಕೃಷ್ಣೇಗೌಡ, ವೆಂಕಟೇಶ್, ಮಾಜಿ ಉಪಾಧ್ಯಕ್ಷರಾದ ಮಹದೇವು, ಪುನೀತ್‌ಗೌಡ ಶಿವರಾಮು, ಲೋಕೇಶ್, ರಘು, ಲೋಕೇಶ್, ಯೋಗೇಶ್ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.

ಅರ್ಜಿ ಆಹ್ವಾನ

ಮೈಸೂರು, ಮೇ 26– ಮೈ ಭಾರತ್ ಕೇಂದ್ರದ ವತಿಯಿಂದ ಕ್ರೀಡಾ ಸಂಸ್ಕೃತಿ, ದೈಹಿಕ ಸದೃಢತೆ ಮತ್ತು ಯುವಜನರ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಮತ್ತು ಯುವಜನರು ಮೈ ಭಾರತ್ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೋತ್ಸಾಹಿಸುವ ಉದ್ದೇಶದಿಂದ ಕ್ರೀಡಾ ಸಾಮಗ್ರಿಗಳ ವಿತರಣೆಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಮೈ ಭಾರತ್ ಚಟುವಟಿಕೆಗಳಲ್ಲಿ ಭಾಗವಹಿಸಿದ ಯುವ ಸಂಘಗಳು ಹಿಂದಿನ ಹಣಕಾಸು ವರ್ಷದಲ್ಲಿ ಕ್ರೀಡಾ ಕಿಟ್‌ಗಳು ಅಥವಾ ಸಾಮಗ್ರಿಗಳನ್ನು ಪಡೆಯದ ಸಂಘಗಳಿಗೆ ಆದ್ಯತೆ ನೀಡಲಾಗುವುದು. ಅಲ್ಲದೆ, ಯುವ ಸಂಘಗಳು ಮತ್ತು ಅದರ ಎಲ್ಲಾ ಸದಸ್ಯರು ಮೈ ಭಾರತ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ. ನೋಂದಾಯಿಸದ ಸಂಘಗಳನ್ನು ಪರಿಗಣಿಸಲಾಗುವುದಿಲ್ಲ. ಯುವ ಸಂಘಗಳು ಜೂ.3 ರೊಳಗೆ ನಿಗದಿತ ನಮೂನೆಯಲ್ಲಿ ಸಂಬಂಧಿತ ದಾಖಲೆಗಳೊಂದಿಗೆ ಜಿಲ್ಲಾ ಯುವ ಅಧಿಕಾರಿ, ಮೈ ಭಾರತ್ ಕೇಂದ್ರ ಮೈಸೂರು ಇಲ್ಲಿನ ಕಚೇರಿಗೆ ತಮ್ಮ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕಚೇರಿ ವಿಳಾಸ: #26/ಎ, ರಾಜರಾಜೇಶ್ವರಿ ದೇವಸ್ಥಾನದ ರಸ್ತೆ, ವಿಶ್ವೇಶ್ವರ ನಗರ, 3ನೇ ಹಂತ, ಮೈಸೂರು– 570008 ಅಥವಾ ದೂ.ಸಂ: 0821-2489858, 7736426247 ಅನ್ನು ಸಂಪರ್ಕಿಸಬಹುದೆಂದು ಮೈ ಭಾರತ್ ಕೇಂದ್ರದ ಯುವ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಬುಧವಾರ 27 ಮೇ 2026

ನಾಲ್ವರು ಸರಗಳ್ಳರ ಬಂಧನ: ಲಕ್ಷಾಂತರ ಮೌಲ್ಯದ ಚಿನ್ನಾಭರಣ ವಶ

ಮಂಡ್ಯ, ಮೇ 26– ಒಂಟಿ ಮಹಿಳೆಯರನ್ನೇ ಗುರಿಯಾಗಿಸಿಕೊಂಡು ಸರಗಳ್ಳತನ ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಬಂಧಿಸಿ, ಅವರಿಂದ 70 ಲಕ್ಷಕ್ಕೂ ಹೆಚ್ಚು ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ.ಶೋಭರಾಣಿ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಎಸ್ಪಿ ಶೋಭಾರಾಣಿ ಮಾತನಾಡಿದರು. ಈ ವೇಳೆ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

ನಗರದ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಳವಳ್ಳಿ ತಾಲೂಕು ತಳಗವಾದಿ ಗ್ರಾಮದ ಟಿ.ಪಿ.ರೋಹಿತ್ ಅಲಿಯಾಸ್ ಗೆದ್ದಾ (20), ಟಿ.ಎನ್.ನಂಜೇಗೌಡ ಅಲಿಯಾಸ್ ಕಾಶಿ (19), ಟಿ.ಎಚ್.ಗುರುಪ್ರಸಾದ್ ಅಲಿಯಾಸ್ ಗುರು (36) ಹಾಗೂ ಎಸ್. ಮಾದೇಶ ಅಲಿಯಾಸ್ ಮಾದ(20) ಬಂಧಿತ ಆರೋಪಿಗಳು. ಆರೋಪಿಗಳಿಂದ ಒಟ್ಟು 475.5 ಗ್ರಾಂ ತೂಕದ ಚಿನ್ನ ಹಾಗೂ ಕೃತ್ಯಕ್ಕೆ ಬಳಸಿದ್ದ 2 ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಒಟ್ಟಾರೆ 70,37,400 ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು.

ಮಳವಳ್ಳಿ ತಾಲೂಕಿನ ಅಣಸಾಲೆ ಗ್ರಾಮದ ಪುಟ್ಟಮ್ಮ ಅವರು ತಮ್ಮ ಮನೆ ಇ–ಸ್ವತ್ತು ಮಾಡಿಸುವ ಸಲುವಾಗಿ ಮಾ.30ರಂದು ಚಿಕ್ಕಮುಲಗೂಡು ಗ್ರಾಪಂಗೆ ಹೋಗಿ ತಮ್ಮ ಊರಿಗೆ ವಾಪಸ್ ತೆರಳುತ್ತಿದ್ದ ವೇಳೆ ಚಿಕ್ಕಮುಲಗೂಡು–ರಾಮನಾಥ ಮೊಳೆ ರಸ್ತೆಯಲ್ಲಿ ಮಧ್ಯಾಹ್ನ 12.30ರಲ್ಲಿ ಅಪರಿಚಿತರಿಬ್ಬರು ಬೈಕ್‌ನಲ್ಲಿ ಬಂದು ಪುಟ್ಟಮ್ಮ ಅವರ ಕತ್ತಿನಲ್ಲಿದ್ದ ಚಿನ್ನದ ತಾಳಿ ಮತ್ತು 2 ಗುಂಡುಗಳು ಸೇರಿದಂತೆ 27 ಗ್ರಾಂ ತೂಕದ ಚಿನ್ನದ ಸರ ಕಸಿದು ಪರಾರಿಯಾಗಿದ್ದರು. ಈ ವೇಳೆ ಪುಟ್ಟಮ್ಮ ಅವರು ಕಿರುಗಾವಲು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಈ ಸಂಬಂಧ ತನಿಖೆ ಕೈ ಗೊಂಡಾಗ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ರೋಹಿತ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿ ಸತ್ಯಾಂಶ ಬೆಳಕಿಗೆ ಬಂತು ಎಂದರು.

ಸ್ಕೆಚ್ ಹಾಕುತ್ತಿದ್ದ ಗುರುಪ್ರಸಾದ್: ಆರೋಪಿ ಗುರುಪ್ರಸಾದ್ ಮದುವೆಯಾಗಿದ್ದು, ತನ್ನ ಪತ್ನಿಗೆ ತಾನು ಸಿರಿವಂತ ಎಂದು ತೋರಿಸಿಕೊಳ್ಳುವ ಸಲುವಾಗಿ ಚೈನ್ ಕಳವು ಮಾಡಿ ಐಷಾರಾಮಿ ಜೀವನ ನಡೆಸುತ್ತಿದ್ದ. ಆದರೆ ಕಳೆದ 2024ರಲ್ಲಿ ಪತ್ನಿ ಈತನೊಂದಿಗೆ ಜಗಳ ಮಾಡಿಕೊಂಡು ತವರು ಸೇರಿಸಿಕೊಂಡಿದ್ದಳು. ಅಂದಿನಿಂದ ಚೈನ್ ಕಳವು ಮಾಡುವುದನ್ನು ನಿಲ್ಲಿಸಿದ್ದ. ಈ ಮಧ್ಯೆ ಆಕೆ ಆತ್ಮಹತ್ಯೆ ಮಾಡಿಕೊಂಡು ಸಾವನ್ನಪ್ಪಿದ್ದಳು. ಆತ್ಮಹತ್ಯೆಗೆ ಗುರುಪ್ರಸಾದ್ ಕಾರಣ ಎಂದು ಆತನ ವಿರುದ್ಧ ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸಲಾಗಿತ್ತು. ಜೈಲಿನಿಂದ ಹೊರ ಬಂದ ಗುರುಪ್ರಸಾದ್ ಮತ್ತೆ ತಮ್ಮೂರಿನಲ್ಲಿ ಹಣದ ಅವಶ್ಯವಿರುವ ಯುವಕರನ್ನು ಒಗ್ಗೂಡಿಸಿ ತಂಡವೊಂದನ್ನು ಕಟ್ಟಿ ಆ ಮೂಲಕ ಚಿನ್ನದ ಸರ ಕಳವು ಮಾಡಲು ಸ್ಕೆಚ್ ಹಾಕಿದ್ದ ಒಂಟಿ ಮಹಿಳೆಯರನ್ನು ಗುರಿಯಾಗಿಸಿಕೊಂಡು ಚೈನ್ ಕಳವು ಯೋಜನೆಯನ್ನು ಗುರುಪ್ರಸಾದ್ ರೂಪಿಸುತ್ತಿದ್ದ. ಅದನ್ನು ರೋಹಿತ್, ನಂಜೇಗೌಡ, ಮಾದೇಶ 2 ತಂಡಗಳಾಗಿ ವಿಭಜನೆಗೊಂಡು ಕಳವು ಮಾಡುತ್ತಿದ್ದರು. ಹೀಗೆ ಕದ್ದ ಚಿನ್ನಾಭರಣಗಳನ್ನು ಕೋಶಮಟ್ಟಂ ಎಂಬ ಚಿನ್ನಾಭರಣ ಗಿರವಿ ಸಂಸ್ಥೆಯಲ್ಲಿ ಮೊದಲು ಆರೋಪಿ ಗುರುಪ್ರಸಾದ್ ತಮ್ಮ, ತಾಯಿ, ಚಿಕ್ಕಮ್ಮ ಇತರೆ ಸಂಬಂಧಿಕರ ಒಡವೆಗಳು ಎಂದೇಳಿಕೊಂಡು ಗಿರವಿ ಇಡುತ್ತಿದ್ದ. ನಂತರ ಅದನ್ನು ಮಾರಾಟ ಮಾಡಿ ಉಳಿದ ಹಣವನ್ನು ಪಡೆದು ಹಂಚಿಕೊಳ್ಳುತ್ತಿದ್ದರು ಎಂದು ವಿವರಿಸಿದರು.

ಆರೋಪಿಗಳು ಜಿಲ್ಲೆಯ ವಿವಿಧ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2022ರಲ್ಲಿ 2 ಪ್ರಕರಣ, 23ರಲ್ಲಿ 8 ಪ್ರಕರಣ, 24ರಲ್ಲಿ 2, 26ರಲ್ಲಿ 4 ಪ್ರಕರಣ ಸೇರಿ 16 ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ. ಬನ್ನೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲೂ ಒಂದು ಪ್ರಕರಣದಲ್ಲಿ ಭಾಗಿಯಾಗಿದ್ದಾರೆ. ರೋಹಿತ್ ಮತ್ತು ನಂಜೇಗೌಡ ತಂಡ 4, ಗುರುಪ್ರಸಾದ್–ಮಾದೇಶ ತಂಡ 8 ಹಾಗೂ ರೋಹಿತ್ ಮತ್ತು ಮಾದೇಶ ತಂಡ 4 ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ ಎಂದು ತಿಳಿಸಿದರು.

ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ವಾಹನಗಳ ಪ್ರವೇಶ ಹಾಗೂ ನಿರ್ಗಮನಕ್ಕೆ ಸಂಬಂಧಿಸಿದಂತೆ ಸಮಿತಿ ರಚನೆಯಾಗಿದ್ದು, ಅಲ್ಲಿ ಹಲವು ಸಲಹೆಗಳನ್ನು ನೀಡಲಾಗುವುದು ಎಂದು ಸುದ್ದಿಗಾರರ ಪ್ರಶ್ನೆಗೆ ಚುಟುಕಾಗಿ ಉತ್ತರಿಸಿದರು.

ಗಸ್ತು ಹೆಚ್ಚಳ: ಮದ್ದೂರಿನಲ್ಲಿ ಹಲವು ಕೊಲೆ ಪ್ರಕರಣಗಳು, ಕಾನೂನು ಸುವ್ಯವಸ್ಥೆ ಹದ್ದು ಬಸ್ತಿನಲ್ಲಿದೆ. ಕೆಲವು ಕಾರಣಗಳಿಂದಾಗಿ ಕೊಲೆಗಳು ನಡೆದಿವೆ. ಬಳಿಕ ಗಸ್ತನ್ನು ಹೆಚ್ಚಿಸಲಾಗಿದೆ. ಅನುಮಾನಾಸ್ಪದವಾಗಿ ತಡರಾತ್ರಿವರೆಗೆ ಓಡಾಡುವ ಸಾರ್ವಜನಿಕರು, ಯುವಕರನ್ನು ತಡೆದು ವಿಚಾರಣೆಗೆ ಒಳಪಡಿಸಲಾಗುತ್ತದೆ. ಅನುಮಾನ ಬಂದಲ್ಲಿ ಅಂತವರನ್ನು ಠಾಣೆಗೆ ಕರೆತಂದು ಫಿಂಗರ್‌ಪ್ರಿಂಟ್ ಪಡೆದು ತನಿಖೆ ನಡೆಸಲಾಗುವುದು. ತಪ್ಪಿತಸ್ಥರೆಂದು ಕಂಡುಬಂದಲ್ಲಿ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಅಪರ ಪೊಲೀಸ್ ಅಧೀಕ್ಷಕ ಎಸ್.ಇ.ಗಂಗಾಧರಸ್ವಾಮಿ, ಡಿವೈಎಸ್ಪಿ ಯಶ್ವಂತ್ ಕುಮಾರ್ ಇತರರಿದ್ದರು.

ಪ್ರಗತಿಯಲ್ಲಿ ಭೂ ಕಬಳಿಕೆ ಪ್ರಕರಣದ ತನಿಖೆ

ಮಂಡ್ಯ: ನಾಗಮಂಗಲ ತಾಲೂಕಿನಲ್ಲಿ ಸರ್ಕಾರಿ ಭೂ ಕಬಳಿಕೆ ಪ್ರಕರಣದ ತನಿಖೆ ಪ್ರಗತಿಯಲ್ಲಿದ್ದು, ಅಪರ ಪೊಲೀಸ್ ಅಧೀಕ್ಷಕ ತಿಮ್ಮಯ್ಯ ಅವರು ತನಿಖೆ ಚುರುಕುಗೊಳಿಸಿದ್ದಾರೆ ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕಿ ಡಾ.ವಿ.ಜೆ. ಶೋಭರಾಣಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಾರಂಭದಲ್ಲಿ 320 ಎಕರೆ ಸರ್ಕಾರಿ ಭೂ ಕಬಳಿಕೆಯಾಗಿದೆ ಎಂದು ತಿಳಿದು ಬಂದಿದ್ದು, ನಂತರ ತನಿಖೆ ಪ್ರಾರಂಭವಾಗಿ ಹಂತ ಹಂತವಾಗಿ ನಡೆಯುತ್ತಿರುವ ತನಿಖೆಯಿಂದಾಗಿ 1 ಸಾವಿರ ಎಕರೆಗೂ ಹೆಚ್ಚಿನ ಭೂ ಕಬಳಿಕೆಯಾಗಿರುವುದು ತಿಳಿದು ಬಂತು ಎಂದರು. ಯಾವ್ಯಾವ ಅಧಿಕಾರಿಗಳ ಕಾಲದಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿ ಭೂ ಕಬಳಿಕೆಯಾಗಿದೆ. ಇದರಲ್ಲಿ ಯಾವ ಅಧಿಕಾರಿಗಳು ಭಾಗಿಯಾಗಿದ್ದಾರೆ ಎಂಬುದರ ಕುರಿತು ಹಳೇ ದಾಖಲೆಗಳ ಶೋಧ ನಡೆಸಲಾಗುತ್ತಿದೆ. ಇನ್ನೂ ಅವುಗಳನ್ನು ಎಫ್‌ಎಸ್‌ಎಲ್ ತನಿಖೆಗೂ ಕಳುಹಿಸಬೇಕಾಗಿದೆ. ಹಾಗಾಗಿ ಇನ್ನೂ ತನಿಖೆ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಉಪ ಲೋಕಾಯುಕ್ತರಿಂದ ತಹಸೀಲ್ದಾರ್‌ಗೆ ಛೀಮಾರಿ ವಿಚಾರ

ಮಳವಳ್ಳಿಯಲ್ಲಿ ನಡೆದಿರುವ ಭೂ ಹಗರಣಕ್ಕೆ ಹಿಡಿದ ಕೈಗನ್ನಡಿ

ಮಂಡ್ಯ, ಮೇ 26– ಉಪ ಲೋಕಾಯುಕ್ತ ನ್ಯಾಯಮೂರ್ತಿಗಳು ತಹಸೀಲ್ದಾರ್‌ಗೆ ಛೀಮಾರಿ ಹಾಕಿರುವುದು ಮಳವಳ್ಳಿ ತಾಲೂಕಿನಲ್ಲಿ ನಡೆದಿರುವ ಭಾರೀ ಭೂ ಹಗರಣಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದು ಮಾಜಿ ಶಾಸಕ ಡಾ.ಕೆ.ಅನ್ನದಾನಿ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಅನ್ನದಾನಿ ಮಾತನಾಡಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರದ ಮಾಜಿ ಶಾಸಕನಾಗಿ ಈ ಸಂಬಂಧ ಸಾಕಷ್ಟು ಬಾರಿ ಕ್ರಮ ವಹಿಸಲು ಮನವಿ ಮಾಡಿದ್ದೆ. ಆದರೆ ಯಾವುದೇ ಕ್ರಮ ಕೈಗೊಳ್ಳದ ಕಾರಣ ಸಿದ್ದಾಚಾರ್ ಅವರ ಮೂಲಕ ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದು, ಇದೀಗ ತಾಲೂಕು ಆಡಳಿತ ಭೂಗಳ್ಳರ ಪರವಾಗಿ ಕೆಲಸ ಮಾಡುತ್ತಿರುವುದು ಬೆಳಕಿಗೆ ಬಂದಿದೆ ಎಂದರು.

ಮಳವಳ್ಳಿ ತಾಲೂಕಿನ ಅಭಿವೃದ್ಧಿಗೆ ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತ ನಿರ್ಲಕ್ಷ್ಯ ವಹಿಸಿದ್ದು, ತಾಲೂಕಿನಲ್ಲಿ ಆಡಳಿತ ಯಂತ್ರ ಸಂಪೂರ್ಣ ಕುಸಿದಿದ್ದು, ಇಲ್ಲಿನ ಭೂ ಹಗರಣಗಳಿಗೆ ಕುಮ್ಮಕ್ಕು ನೀಡುವಲ್ಲಿ ಮಾತ್ರ ಕೆಲಸ ಮಾಡುತ್ತಿದೆ. ಹಾಲಿ ಶಾಸಕರು ಯಾವುದೇ ಕ್ರಮ ಕೈಗೊಳ್ಳದಿರುವುದು ಹಲವು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ ಎಂದು ಹೇಳಿದರು.

ತಾಲೂಕಿನಲ್ಲಿ 305 ಎಕರೆ ಅಕ್ರಮ ಆರ್‌ಟಿಸಿ ವಜಾ ಸಂಬಂಧ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಸಂಬಂಧ ವಿರೋಧ ಪಕ್ಷವಾಗಿ ದೂರಿದ್ದೇನೆ. ಇದೀಗ ಲೋಕಾಯುಕ್ತರು ಛೀಮಾರಿ ಹಾಕಿದ್ದಾರೆ. ಕೂಡಲೇ ಭೂಗಳ್ಳರ ಪರವಾಗಿ ಕೆಲಸ ಮಾಡುವ ಅಧಿಕಾರಿಗಳ ವಿರುದ್ಧ ಕ್ರಮ ವಹಿಸಬೇಕೆಂದು ಒತ್ತಾಯಿಸಿದರು.

ತಾಪಂ ಆಡಳಿತ ನಿಷ್ಕ್ರಿಯಗೊಂಡಿದೆ. ಇಓ ಹಾಗೂ ತಾಲೂಕಿನ ಎಲ್ಲಾ ಆಡಳಿತಾಧಿಕಾರಿಗಳು ಸಾರ್ವಜನಿಕರ ಯಾವುದೇ ಕೆಲಸ ಮಾಡದೇ ಅಭಿವೃದ್ಧಿಯ ಕಡೆ ನಿರ್ಲಕ್ಷ್ಯ ತೋರಿದ್ದಾರೆ. ಹಲಗೂರು ಗ್ರಾಪಂನಲ್ಲಂತೂ ಲಕ್ಷಾಂತರ ರೂ. ಹಣ ದುರುಪಯೋಗವಾಗಿದೆ ಎಂದು ಆರೋಪಿಸಿದರು.

ಪುರಸಭೆ ಆವರಣದಲ್ಲಿ ನಿರ್ಮಿಸಿರುವ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಜಾಗದಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿ ಮಾಡಿಲ್ಲ. ಕೇಂದ್ರ ಸಚಿವರು ನೀಡಿದ 10 ಲಕ್ಷ ರೂ.ಗಳಲ್ಲಿ ಒಂದು ಕಾಂಪೌಂಡ್ ನಿರ್ಮಾಣವಾಗಿರುವುದು ಬಿಟ್ಟರೆ ಬೇರಾವ ಕೆಲಸಗಳನ್ನು ಮಾಡಿಲ್ಲ ಎಂದು ದೂರಿದರು.

ಮಳವಳ್ಳಿ ತಾಲೂಕು ಕಾವೇರಿ ಜಲಾನಯನ ಪ್ರದೇಶದ ಕೊನೆಯ ಭಾಗವಾಗಿದೆ. ಇಲ್ಲಿಗೆ ನೀರು ಒದಗಿಸುವಲ್ಲಿ ಶಾಸಕರು ವಿಫಲರಾಗಿದ್ದಾರೆ. ಈ ಭಾಗದ ಕಾಲುವೆಗಳ ದುರಸ್ತಿ ಯಾವಾಗ ಆಗುತ್ತವೆ ಎಂಬ ಮಾಹಿತಿಯೂ ರೈತರಿಗೆ ನೀಡದೇ ನೀರನ್ನೂ ಒದಗಿಸದೆ ವಂಚನೆ ಮಾಡಲಾಗುತ್ತಿದೆ. ಜಲಜೀವನ್ ಮಿಷನ್ ಯೋಜನೆಯು ತಾಲೂಕಿನ ಯಾವ ಗ್ರಾಮದಲ್ಲೂ ಜಾರಿಯಾಗಿಲ್ಲ. ಇದಕ್ಕಾಗಿ ರಸ್ತೆ ಅಗೆದಿರುವುದನ್ನು ಸರಿಪಡಿಸಲಾಗಿಲ್ಲ ಎಂದು ಆರೋಪಿಸಿದರು. ಸಾಮಾಜಿಕ ಸಂಘಟನೆಗಳು, ಸಂಸ್ಥೆಗಳು ಸಾರ್ವಜನಿಕರ ಪರ ಕೆಲಸ ಮಾಡುವ ಸಂಬಂಧ ಪ್ರಶ್ನೆ ಮಾಡಿದರೆ ಸುಮೋಟೊ ಪ್ರಕರಣ ದಾಖಲಿಸುವಂತೆ ಶಾಸಕರು ಹೇಳಿಕೆ ನೀಡಿದ್ದಾರೆ. ತಾಲೂಕಿನಲ್ಲಿ ಸಾರ್ವಜನಿಕರ ಕೆಲಸ ಮಾಡಲು ಅಧಿಕಾರಿಗಳನ್ನು ಪ್ರಶ್ನೆ ಮಾಡುವುದೇ ಅಪರಾಧವಾಗಿದೆ. ಶಾಸಕರು ಈ ಕೂಡಲೇ ತಮ್ಮ ಹೇಳಿಕೆ ಹಿಂಪಡೆಯಬೇಕೆಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಜಿಪಂ ಮಾಜಿ ಸದಸ್ಯ ಹನುಮಂತು, ಯುವ ಜೆಡಿಎಸ್ ತಾಲೂಕು ಅಧ್ಯಕ್ಷ ಚಂದಳ್ಳಿ ಶ್ರೀಧರ್, ಸಿದ್ದಾಚಾರ್, ಶಂಕರ್, ಚೇತನ್ ಇದ್ದರು.

ಮಜ್ಜನಕಟ್ಟೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ

ಕೆ.ಆರ್.ಪೇಟೆ, ಮೇ 26– ಕೆರೆ ಕಟ್ಟೆಗಳ ಅಭಿವೃದ್ಧಿಯಿಂದ ಅಂತರ್ಜಲ ವೃದ್ಧಿಯಾಗುತ್ತದೆ. ಆ ಮೂಲಕ ರೈತರ ಕೃಷಿ ಕೊಳವೆ ಬಾವಿಗಳು ಹಾಗೂ ಕುಡಿಯುವ ನೀರಿನ ಜಲಮೂಲಗಳಿಗೆ ಅನುಕೂಲವಾಗುತ್ತದೆ ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.



ಮಜ್ಜನಕಟ್ಟೆ ಅಭಿವೃದ್ಧಿಗೆ ಶಾಸಕ ಹೆಚ್.ಟಿ.ಮಂಜು ಭೂಮಿ ಪೂಜೆ ನೆರವೇರಿಸಿದರು.

ಸುಮಾರು 1 ಕೋಟಿ ರೂ. ವೆಚ್ಚದಲ್ಲಿ ತಾಲೂಕಿನ ಹರಳಹಳ್ಳಿ ಗ್ರಾಮದ ಜಮಾಬಂದಿಗೆ ಸೇರಿದ ಮಜ್ಜನಕಟ್ಟೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕೆರೆಗಳು ಮಾನವನಿಗೆ ಮತ್ತು ಪರಿಸರಕ್ಕೆ ನೀರು ಒದಗಿಸುವ ನೈಸರ್ಗಿಕ ಹಾಗೂ ಕೃತಕ ಜಲಾಶಯಗಳಾಗಿವೆ. ಇವು ಅಂತರ್ಜಲ ಹೆಚ್ಚಿಸಲು, ಕೃಷಿಗೆ ನೀರೊದಗಿಸಲು, ಜಲಚರಗಳ ಸಂರಕ್ಷಣೆ ಮತ್ತು ಜೀವ ವೈವಿಧ್ಯತೆ ಕಾಪಾಡಲು ಅತ್ಯಂತ ಅವಶ್ಯಕವಾಗಿವೆ. ಕೆರೆಗಳು ರೈತರ ಜೀವನಾಡಿಯಾಗಿದ್ದು, ಮಳೆಗಾಲದಲ್ಲಿ ಸಂಗ್ರಹವಾದ ನೀರು ಹೊಲ, ಗದ್ದೆ ಮತ್ತು ತೋಟಗಳಿಗೆ ನೀರಾವರಿಯಾಗಿ ಬಳಕೆಯಾಗುತ್ತದೆ. ಕೆರೆಯಲ್ಲಿ ನೀರು ನಿಲ್ಲುವುದರಿಂದ ಅದು ನಿಧಾನವಾಗಿ ಭೂಮಿಗೆ ಇಂಗುತ್ತದೆ. ಇದರಿಂದ ಸುತ್ತಮುತ್ತಲಿನ ಕೊಳವೆ ಬಾವಿಗಳಲ್ಲಿ ನೀರಿನ ಮಟ್ಟ ಹೆಚ್ಚುತ್ತದೆ. ಹಳ್ಳಿಗಳಲ್ಲಿ ದನ, ಕರು, ಕುರಿ ಮುಂತಾದ ಪ್ರಾಣಿಗಳಿಗೆ ಕುಡಿಯುವ ನೀರನ್ನು ಒದಗಿಸುವಲ್ಲಿ ಕೆರೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಕೆರೆ ಕಟ್ಟೆಗಳು ಪಕ್ಷಿಗಳಿಗೆ ಆವಾಸಸ್ಥಾನವಾಗಿದ್ದು, ಪರಿಸರದ ತಾಪಮಾನ ನಿಯಂತ್ರಿಸಲು ಮತ್ತು ಹವಾಮಾನ ಬದಲಾವಣೆ ತಡೆಯಲು ಸಹಾಯ ಮಾಡುತ್ತವೆ. ಮೀನು ಸಾಕಾಣಿಕೆಗೆ ಕೆರೆಗಳು ಅತ್ಯುತ್ತಮ ಸ್ಥಳವಾಗಿದ್ದು, ಇದು ಸ್ಥಳೀಯರಿಗೆ ಉದ್ಯೋಗ ಮತ್ತು ಆದಾಯದ ಮೂಲವನ್ನು ಒದಗಿಸುತ್ತದೆ ಕೆರೆಗಳು ನಮ್ಮ ಜಲ ಸಂಪತ್ತಿನ ಬೆನ್ನೆಲುಬಾಗಿವೆ ಎಂದರು. ಪ್ರಾಚೀನ ಕಾಲದಿಂದಲೂ ಕೆರೆಗಳ ನಿರ್ಮಾಣ ಮತ್ತು ಸಂರಕ್ಷಣೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಇಂದಿನ ದಿನಗಳಲ್ಲಿ ನಗರೀಕರಣ ಹಾಗೂ ಮಾಲಿನ್ಯದಿಂದ ಕೆರೆಗಳು ಕಲುಷಿತಗೊಳ್ಳುತ್ತಿವೆ. ಆದ್ದರಿಂದ ಕೆರೆಗಳನ್ನು ಸಂರಕ್ಷಿಸಿ, ಸ್ವಚ್ಛವಾಗಿಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಆ ನಿಟ್ಟಿನಲ್ಲಿ ಸಣ್ಣ ನೀರಾವರಿ ಇಲಾಖೆ ಅಡಿ ಮಜ್ಜನ ಕೆರೆ ಅಭಿವೃದ್ಧಿಗೆ 1 ಕೋಟಿ ರೂ. ಅನುದಾನ ನೀಡಲಾಗಿದೆ ಎಂದರು. ಈ ವೇಳೆ ಗ್ರಾಮದ ಮುಖಂಡರಾದ ಕರುಣಾಕರ್, ಶಂಕರೇಗೌಡ, ರಾಮೇಗೌಡ, ಮಹೇಶ್, ಈಶ್ವರ್, ಶಿವರಾಂ, ವಿನಯ್, ಕುಮಾರಸ್ವಾಮಿ, ಯಶ್ವಂತ್, ರಾಕೇಶ್, ರಾಮೇಗೌಡ, ಚಂದ್ರಶೇಖರ್, ಹರಳಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಯೋಗೇಶ್, ಶಾಸಕರ ಆಪ್ತ ಸಹಾಯಕ ಧ್ರುವಕುಮಾರ್, ಮರಡಹಳ್ಳಿ ಪ್ರದೀಪ್ ಮತ್ತಿತರರಿದ್ದರು.

ಒಂದನೇ ಪುಟದಿಂದ

ಬಾಲಿವುಡ್ ನಟ ರಣವೀರ್ ಸಿಂಗ್

ಸರದಿಯಲ್ಲಿ ಸಾಗಿ ದೇವಿ ಸನ್ನಿದಿಯಲ್ಲಿ ಪ್ರಾರ್ಥಿಸಿ, ಕ್ಷಮೆಯಾಚಿಸಿದರು. ದರ್ಶನದ ಬಳಿಕ ಹೊರ ಬಂದಾಗಲೂ ಮಾಸ್ಕ್ ಧರಿಸಿ, ವಾಹನ ನಿಲುಗಡೆ ಸ್ಥಳಕ್ಕೆ ನಡೆದು ಹೋಗಿ, ಮೈಸೂರು ನಗರದತ್ತ ಪ್ರಯಾಣ ಬೆಳೆಸಿದರು. ಆದರೆ ಅವರ ಮುಂದಿನ ಪ್ರಯಾಣ, ವಾಸ್ತವ್ಯದ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ.

ಅಪಹಾಸ್ಯ ಮಾಡಿದ್ದರು: ಗೋವಾದಲ್ಲಿ ಕಳೆದ ನವೆಂಬರ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪಾಲ್ಗೊಂಡಿದ್ದ ಬಾಲಿವುಡ್ ನಟ ರಣವೀರ್ ಸಿಂಗ್, ವೇದಿಕೆಯಲ್ಲೇ ಕಾಂತಾರ ಚಾಪ್ಟರ್–1ರ ದೈವದ ಪಾತ್ರದ ಬಗ್ಗೆ ಅಪಹಾಸ್ಯ ಮಾಡುವಂತೆ ಅಭಿನಯಿಸಿದ್ದರು. ಇದು ಕರಾವಳಿ ತುಳುನಾಡಿನ ದೈವಗಳನ್ನು ಅಪಮಾನಿಸುವಂತಿದೆ ಎಂದು ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ನಂತರ ರಣವೀರ್ ಸಿಂಗ್ ವಿರುದ್ಧ ಪ್ರಕರಣ ದಾಖಲಾಗಿತ್ತು. ಇದರ ವಿಚಾರಣೆ ನಡೆಸಿದ್ದ ಹೈಕೋರ್ಟ್, ನಟ ರಣವೀರ್ ಸಿಂಗ್ ಮಾಡಿರುವ ಅಪಹಾಸ್ಯವನ್ನು ಗಂಭೀರವಾಗಿ ಪರಿಗಣಿಸಿತ್ತು. ಇದನ್ನರಿತ ನಟ ರಣವೀರ್ ಸಿಂಗ್ ಪರ ವಕೀಲರು, ರಣವೀರ್ ಅವರು ಬಹಿರಂಗ ಕ್ಷಮೆಯಾಚಿಸಿರುವ ಪತ್ರವನ್ನು ನೀಡಿದ್ದರು. ಈ ವೇಳೆ ನ್ಯಾಯಾಲಯವು, ಇದು ಭಾವನಾತ್ಮಕ ವಿಚಾರವಾಗಿದ್ದು, ಚಾಮುಂಡಿಬೆಟ್ಟಕ್ಕೆ ಹೋಗಿ ದೇವಿ ದರ್ಶನ ಪಡೆಯುವಂತೆ ಆದೇಶಿಸಿತ್ತು.

ಪರಿಷತ್ ಚುನಾವಣೆ ಬಗ್ಗೆ ಮಾತ್ರ ಚರ್ಚೆ!

ಮಟ್ಟದ ಸಭೆಯಲ್ಲಿ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ನಾನು ಭಾಗವಹಿಸಿದ್ದೆವು. ಸಭೆಯಲ್ಲಿ ಕೇವಲ ಮುಂಬರುವ ವಿಧಾನ ಪರಿಷತ್ ಮತ್ತು ರಾಜ್ಯಸಭಾ ಚುನಾವಣೆಗೆ ಸಂಬಂಧಿಸಿದಂತೆ ಮಾತ್ರ ಸುದೀರ್ಘವಾಗಿ ಚರ್ಚೆ ನಡೆಸಲಾಗಿದೆ. ಅಭ್ಯರ್ಥಿಗಳ ಆಯ್ಕೆ ಮತ್ತು ಚುನಾವಣಾ ಕಾರ್ಯತಂತ್ರಗಳ ಬಗ್ಗೆ ಮಾತ್ರ ಮಾತುಕತೆಯಾಗಿದೆ. ಚುನಾವಣಾ ವಿಚಾರವನ್ನು ಹೊರತುಪಡಿಸಿ ನಾವು ಮತ್ಯಾವ ಬಾಕಿ ವಿಷಯಗಳ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಸಿಲ್ಲ. ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿರುವ ಹಾಗೂ ರಾಜಕೀಯ ವಲಯದಲ್ಲಿ ಕೇಳಿಬರುತ್ತಿರುವ ಉಳಿದೆಲ್ಲಾ ವಿಚಾರಗಳು ಕೇವಲ ವದಂತಿ ಮತ್ತು ಊಹೆ ಮಾತ್ರ ಎಂದು ತಿಳಿಸಿದರು. ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಮಾಧ್ಯಮಗಳ ಯಾವುದೇ ಪ್ರಶ್ನೆಯನ್ನು ತೆಗೆದುಕೊಳ್ಳುವುದಿಲ್ಲ ಎಂದು ಸುದ್ದಿಗೋಷ್ಠಿ ಆರಂಭದಲ್ಲೇ ತಿಳಿಸಿದ್ದರು. ವೇಣುಗೋಪಾಲ್ ಅವರ ಹೇಳಿಕೆ ಮುಗಿದ ಬೆನ್ನಲ್ಲೇ ಮಾಧ್ಯಮಗಳು ಕರ್ನಾಟಕದಲ್ಲಿ ಸಿಎಂ ಬದಲಾವಣೆ ಆಗಲಿದ್ಯಾ ಎಂಬ ಪ್ರಶ್ನೆ ಕೇಳಿದ್ದಕ್ಕೆ ನಾಯಕರು ಯಾವುದೇ ಪ್ರತಿಕ್ರಿಯೆ ನೀಡದೇ ಕಾರಿನಲ್ಲಿ ತೆರಳಿದ್ದಾರೆ.

ಸುದ್ದಿಗೋಷ್ಠಿ ನಡೆಯುವ ಸಂದರ್ಭದಲ್ಲಿ ಸಿದ್ದರಾಮಯ್ಯ ಮತ್ತು ಡಿಕೆ ಶಿವಕುಮಾರ್ ಮೌನವಾಗಿದ್ದರು. ಸುದ್ದಿಗೋಷ್ಠಿ ಮುಗಿದ ಬಳಿಕ ಇಬ್ಬರು ಏನು ಮಾತನಾಡದೇ ತೆರಳಿದ್ದಾರೆ. ಸಿಎಂ ಕಾರು ಹತ್ತಿದರೆ ಡಿಕೆಶಿ ವೇಣುಗೋಪಾಲ್ ಜೊತೆ ಮಾತನಾಡುತ್ತಾ ಎಐಸಿಸಿ ಕಚೇರಿ ಪ್ರವೇಶಿಸಿದ್ದಾರೆ.

ಮಸೂದೆಗೆ ಕೇಂದ್ರದ ಬ್ರೇಕ್

ಸಮಸ್ಯೆಯನ್ನು ಪರಿಹರಿಸಲು ಸಮರ್ಪಕವಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ಹೇಳಿದೆ. ಈ ಸಂಬಂಧ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿರುವ ಕೇಂದ್ರ ಗೃಹ ಸಚಿವಾಲಯ, ಇಂಥದ್ದೊಂದು ಮಸೂದೆಯ ಅಗತ್ಯ ಇದೆಯೇ ಎಂದು ಪ್ರಶ್ನಿಸಿದೆ. ಬಿಜೆಪಿ ಮತ್ತು ಜೆಡಿಎಸ್‌ನ ತೀವ್ರ ವಿರೋಧದ ಹೊರತಾಗಿಯೂ, ಕಳೆದ ವರ್ಷ ಡಿಸೆಂಬರ್ 19 ರಂದು ಮುಕ್ತಾಯ ಗೊಂಡ ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ ರಾಜ್ಯ ವಿಧಾನಮಂಡಲದ ಎರಡೂ ಸದನಗಳು ಈ ಮಸೂದೆಯನ್ನು ಅಂಗೀಕರಿಸಲಾಗಿದೆ.

ಈ ವಿಷಯವನ್ನು ಸಿಎಸ್ ವಿಭಾಗದಲ್ಲಿ ಪರಿಶೀಲಿಸಲಾಗಿದೆ. ಈ ನಿಟ್ಟಿನಲ್ಲಿ, ಪರಿಹರಿಸಬೇಕಾದ ಸಮಸ್ಯೆಗಳು ಈಗಾಗಲೇ ಭಾರತೀಯ ನ್ಯಾಯ ಸಂಹಿತಾ, 2023 ಮತ್ತು ಇತರ ಚಾಲ್ತಿಯಲ್ಲಿರುವ ಕಾನೂನುಗಳ ಅಡಿಯಲ್ಲಿ ಗಣನೀಯವಾಗಿ ಸೇರಿಕೊಂಡಿವೆ. ಹೀಗಿರುವಾಗ ರಾಜ್ಯ ಸರ್ಕಾರವು ಪ್ರತ್ಯೇಕ ಕಾನೂನು ಜಾರಿಗೆ ತರುವುದರಿಂದ ನಕಲು ಮತ್ತು ಏಕರೂಪತೆಯ ಕೊರತೆ ಉಂಟಾಗಬಹುದು ಎಂದು ಗೃಹ ಸಚಿವಾಲಯ ಪತ್ರದಲ್ಲಿ ತಿಳಿಸಿದೆ. ಮೇಲಿನದನ್ನು ಗಮನದಲ್ಲಿಟ್ಟುಕೊಂಡು, ಈ ಹಂತದಲ್ಲಿ ಪ್ರಸ್ತಾವಿತ ಮಸೂದೆಯ ಅಗತ್ಯವಿಲ್ಲದಿರಬಹುದು ಮತ್ತು ಅಸ್ತಿತ್ವದಲ್ಲಿರುವ ಕಾನೂನು ಚೌಕಟ್ಟು ಸಮಸ್ಯೆಗಳನ್ನು ಪರಿಹರಿಸಲು ಸಾಕಾಗುತ್ತದೆ ಎಂದು ಕೇಂದ್ರ ಹೇಳಿದೆ.

ಕರ್ನಾಟಕ ಸಂಸದೀಯ ವ್ಯವಹಾರಗಳು ಮತ್ತು ಶಾಸನ ಇಲಾಖೆಯ ಕಾರ್ಯದರ್ಶಿಗೆ ಮೇ 20 ರಂದು ಪತ್ರ ಬರೆದಿರುವ ಕೇಂದ್ರ ಗೃಹ ಸಚಿವಾಲಯದ ಕಾನೂನು ವಿಭಾಗ, ಈ ಮಸೂದೆಯ ಕುರಿತು ಮುಂದಿನ ಕ್ರಮ ಕೈಗೊಳ್ಳಲು ಸ್ಪಷ್ಟೀಕರಣವನ್ನು ನೀಡುವಂತೆ ಸೂಚಿಸಿದೆ. ಈ ಮಸೂದೆಯು 1 ಲಕ್ಷ ರೂಪಾಯಿಗಳವರೆಗೆ ದಂಡ ಮತ್ತು ಏಳು ವರ್ಷಗಳವರೆಗೆ ಜೈಲು ಶಿಕ್ಷೆಯನ್ನು ವಿಧಿಸಲು ಅವಕಾಶ ನೀಡುತ್ತದೆ.

ಅಧಿಕಾರ ತ್ಯಾಗಕ್ಕೆ ಸಿದ್ಧರಾದ್ರಾ ಸಿಎಂ ಸಿದ್ದರಾಮಯ್ಯ...!?

ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಕೈಗೊಂಡ ನಿರ್ಧಾರಗಳನ್ನು ಶ್ಲಾಘಿಸಿದ ರಾಹುಲ್ ಗಾಂಧಿ, ದೇಶದ ಹಿಂದುಳಿದ ವರ್ಗಗಳ ಅತ್ಯಂತ ಪ್ರಭಾವಿ ನಾಯಕರಾಗಿರುವ ತಾವು ರಾಷ್ಟ್ರ ರಾಜಕಾರಣಕ್ಕೆ ಬರಬೇಕು. ಈ ಮೂಲಕ ಹಿಂದುಳಿದ ವರ್ಗಗಳನ್ನು ಸಂಘಟಿಸಿ ಕಾಂಗ್ರೆಸ್ ಪಕ್ಷಕ್ಕೆ ಭದ್ರವಾದ ಬುನಾದಿ ಹಾಕಿ ಕೊಡಬೇಕು. ಇದಕ್ಕೆ ಒಪ್ಪಿದರೆ ತಮ್ಮನ್ನು ರಾಜ್ಯಸಭೆ ಸದಸ್ಯರನ್ನಾಗಿ ನೇಮಕ ಮಾಡಿ, ಪಕ್ಷದಲ್ಲಿ ಉನ್ನತ ಹುದ್ದೆ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಬಯಸಿದರೆ ಸಿಎಂ ಆಗಿ ಮುಂದುವರಿಕೆ

ಆದರೆ ಇದಕ್ಕೆ ಒಪ್ಪದ ಸಿದ್ದರಾಮಯ್ಯ ಅವರು ತಮಗೆ ರಾಷ್ಟ್ರ ರಾಜಕಾರಣದಲ್ಲಿ ಯಾವುದೇ ಆಸಕ್ತಿ ಇಲ್ಲ. ಹೈಕಮಾಂಡ್ ಬಯಸಿದರೆ ತಾವು ಮುಖ್ಯಮಂತ್ರಿಯಾಗಿ ಆಡಳಿತ ಅವಧಿ ಪೂರ್ಣಗೊಳಿಸುತ್ತೇನೆ. ಜೊತೆಗೆ ಮುಂದಿನ ಬಾರಿಯೂ ಕಾಂಗ್ರೆಸ್ ನೇತೃತ್ವದ ಸರ್ಕಾರ ತಂದುಕೊಡುತ್ತೇನೆ. ತನಗೆ ನೀಡಿದ ಅವಕಾಶದಲ್ಲಿ ಯಾವುದೇ ಕಪ್ಪು ಚುಕ್ಕೆ ಇಲ್ಲದೆ ಕೆಲಸ ಮಾಡಿದ್ದೇನೆ. ಪಕ್ಷ ಮತ್ತು ಸರ್ಕಾರಕ್ಕೆ ಹೊಸ ವರ್ಚಸ್ಸು ತಂದುಕೊಡಲು ಪ್ರಯತ್ನ ನಡೆಸಿದ್ದೇನೆ ತಮ್ಮ ಸರ್ಕಾರದ ವಿರುದ್ಧ ಯಾವುದೇ ಭ್ರಷ್ಟಾಚಾರ ಆರೋಪಗಳು ಕೇಳಿಬಂದಿಲ್ಲ. ಹಾಗೆ ಯಾವುದೇ ಮಂತ್ರಿಗಳು, ಶಾಸಕರು ತಮ್ಮ ವಿರುದ್ಧ ಬಂಡಾಯ ಅಥವಾ ಭಿನ್ನಮತ ವ್ಯಕ್ತಪಡಿಸಿಲ್ಲ. ಹೀಗಾಗಿ ಹೈಕಮಾಂಡ್ ಅವಕಾಶ ನೀಡಿದರೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಂಪುಟ ಪುನರ್‌ರಚನೆ ಮಾಡಿ ಮತ್ತೆ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ತರುತ್ತೇನೆ ಎಂದು ಹೇಳಿದ್ದಾರೆ.

ರಾಹುಲ್ ಗಾಂಧಿ ಮೆಚ್ಚುಗೆ

ಇದಕ್ಕೆ ರಾಹುಲ್ ಗಾಂಧಿ ಮೆಚ್ಚುಗೆ ವ್ಯಕ್ತಪಡಿಸಿದರಾದರೂ, ಕಾಂಗ್ರೆಸ್ ಪಕ್ಷ ತಮಗೆ ಎಲ್ಲ ರೀತಿಯ ಅವಕಾಶವನ್ನು ನೀಡಿದೆ ಕರ್ನಾಟಕದಲ್ಲಿ ದಾಖಲೆ ಅವಧಿಗೆ ಮುಖ್ಯಮಂತ್ರಿ ಆಗಿ ಕೆಲಸ ಮಾಡಲು ಮತ್ತು ದಾಖಲೆ ಬಜೆಟ್ ಮಂಡನೆ ಮಾಡಲು ಅವಕಾಶ ನೀಡಿದೆ. ಪಕ್ಷ ನೀಡಿದ ಅವಕಾಶದಲ್ಲಿ ತಾವು ಅತ್ಯುತ್ತಮವಾಗಿ ಕೆಲಸ ಮಾಡಿದ್ದೀರಿ. ಇದಕ್ಕಾಗಿ ಪಕ್ಷ ಹೆಮ್ಮೆ ಪಡುತ್ತದೆ. ಆದರೆ, ಈಗ ಪಕ್ಷದ ಹಿತ ದೃಷ್ಟಿಯಿಂದ ತಾವು ಅಧಿಕಾರ ತ್ಯಾಗ ಮಾಡಬೇಕಾಗುತ್ತದೆ. ಕರ್ನಾಟಕ ಮತ್ತು ದೇಶದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವ ದೃಷ್ಟಿಯಿಂದ ಹೈಕಮಾಂಡ್ ಮಹತ್ವದ ನಿರ್ಧಾರವನ್ನು ತೆಗೆದುಕೊಳ್ಳುತ್ತಿದೆ. ಅದಕ್ಕೆ ಅವಕಾಶ ನೀಡುವ ದೃಷ್ಟಿಯಿಂದ ತಾವು ಮುಖ್ಯಮಂತ್ರಿ ಸ್ಥಾನ ತ್ಯಜಿಸಬೇಕು ಎಂದು ಹೇಳಿರುವುದಾಗಿ ತಿಳಿದು ಬಂದಿದೆ.

ಹೈಕಮಾಂಡ್ ತೀರ್ಮಾನ

ತಾವು ಅಧಿಕಾರ ತ್ಯಜಿಸಿದ ನಂತರ ನಿಮ್ಮ ಸ್ಥಾನಕ್ಕೆ ಯಾರನ್ನು ನೇಮಕ ಮಾಡಬೇಕು ಎಂಬ ಬಗ್ಗೆ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುತ್ತದೆ. ಈ ತೀರ್ಮಾನ ಪಕ್ಷಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ವರ್ಚಸ್ಸು ತಂದು ಕೊಡಲಿದೆ ಎಂಬ ವಿಶ್ವಾಸವಿದೆ. ಹೀಗಾಗಿ ತಾವು ಯಾವುದೇ ರೀತಿಯ ಗೊಂದಲ ಮತ್ತು ಅಪಸ್ವರಗಳಿಗೆ ಅವಕಾಶ ವಿಲ್ಲದೆ ಗೌರವಯುತವಾಗಿ ಅಧಿಕಾರ ತ್ಯಾಗ ಮಾಡಬೇಕು. ಇದನ್ನು ತಮ್ಮಿಂದ ಹೈಕಮಾಂಡ್ ಬಯಸುತ್ತಿದೆ ಎಂದು ಹೇಳಿದ್ದಾರೆನ್ನಲಾಗಿದೆ.

ರಾಜ್ಯಸಭೆ ಸದಸ್ಯತ್ವ ಆಹ್ವಾನ

ತಾವು ರಾಜ್ಯಸಭೆಯ ಸದಸ್ಯರಾಗಲು ಬಯಸುವುದಾದರೆ ಪಕ್ಷ ಮುಕ್ತವಾಗಿದೆ ಈ ಬಗ್ಗೆ ಮತ್ತೊಮ್ಮೆ ಆಲೋಚನೆ ಮಾಡಿ. ಇಲ್ಲವಾದರೆ ರಾಜ್ಯಸಭೆ ಚುನಾವಣೆ ಮುಗಿದ ತಕ್ಷಣವೇ ಅಧಿಕಾರ ತ್ಯಾಗ ಮಾಡಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳಿ, ಕರ್ನಾಟಕದಲ್ಲಿ ಮುಂಬರುವ ವಿಧಾನಸಭೆ ಚುನಾವಣೆಯನ್ನು ನಿಮ್ಮ ನೇತೃತ್ವದಲ್ಲಿಯೇ ಎದುರಿಸಬೇಕು ಎಂದು ಪಕ್ಷ ಬಯಸಿದೆ. ಸೋನಿಯಾ ಗಾಂಧಿ ಅವರ ಆಶಯ ಕೂಡ ಇದೆ ಆಗಿದೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ಅಲ್ಲದೆ ಪಕ್ಷದ ರಾಜ್ಯ ಘಟಕ ನೀಡಿರುವ ವಿಧಾನಪರಿಷತ್ ಮತ್ತು ರಾಜ್ಯಸಭೆಯ ಅಭ್ಯರ್ಥಿಗಳ ಪಟ್ಟಿಯನ್ನು ಹೈಕಮಾಂಡ್ ಪರಿಶೀಲಿಸಲಿದೆ. ಉಳಿದ ರಾಜ್ಯಗಳ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಳಿಸಿದ ನಂತರ ಇವುಗಳನ್ನು ಪರಿಶೀಲಿಸಿ ನಿರ್ಧಾರ ಪ್ರಕಟಿಸಲಿದೆ ಎಂದು ಹೇಳಿ ರಾಹುಲ್ ಗಾಂಧಿ ಹೊರ ನಡೆದಿದ್ದಾರೆ.

ಸೋನಿಯಾಗೆ ಪೂರ್ಣ ಮಾಹಿತಿ

ಬಳಿಕ ತಮ್ಮ ತಾಯಿ ಹಾಗೂ ಪಕ್ಷದ ನಾಯಕಿ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಿ ಮಾತುಕತೆಯ ಸಂಪೂರ್ಣ ವಿವರಗಳನ್ನು ನೀಡಿದ್ದಾರೆ. ಈ ವೇಳೆ ಅವರು ಸಿದ್ದರಾಮಯ್ಯ ಅವರನ್ನು ಅಧಿಕಾರ ತ್ಯಜಿಸುವಂತೆ ನೀಡಿರುವ ಸೂಚನೆಗೆ ಸಹಮತ ವ್ಯಕ್ತಪಡಿಸಿದ್ದು, ಇವರ ನಂತರದ ಸ್ಥಾನಕ್ಕೆ ಆಯ್ಕೆ ಮಾಡುವ ವ್ಯಕ್ತಿಯಿಂದ ಪಕ್ಷಕ್ಕೆ ದೇಶದಲ್ಲಿ ದೊಡ್ಡಮಟ್ಟದ ಹೆಸರು ಸಿಗಬೇಕು. ಆ ರೀತಿಯಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಸಲಹೆ ಮಾಡಿರುವುದಾಗಿ ತಿಳಿದುಬಂದಿದೆ. ತಮ್ಮ ತಾಯಿ ನೀಡಿದ ಸಲಹೆಯೊಂದಿಗೆ ಮತ್ತೆ ಕಾಂಗ್ರೆಸ್ ಭವನಕ್ಕೆ ಬಂದ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಪ್ರಮುಖ ನಾಯಕರ ಜೊತೆ ಮಾತುಕತೆ ನಡೆಸಿ ಅಧಿಕಾರ ತ್ಯಾಗ ಕುರಿತಂತೆ ತಾವು ನೀಡಿರುವ ಅಭಿಪ್ರಾಯಕ್ಕೆ ಸೋನಿಯಾ ಗಾಂಧಿ ಅವರು ಸಹಮತ ವ್ಯಕ್ತಪಡಿಸಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ. ಇದರೊಂದಿಗೆ ಬೆಳಗ್ಗೆಯಿಂದ ನಡೆಯುತ್ತಿದ್ದ ಸರಣಿ ಸಭೆಗಳು ಮುಕ್ತಾಯಗೊಂಡಿವೆ.

ಸಿಎಂ ಸಭೆ

ಇದರ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಯಲ್ಲಿರುವ ಕೆ.ಜೆ. ಜಾರ್ಜ್ ಅವರ ನಿವಾಸಕ್ಕೆ ತೆರಳಿ ತಮ್ಮ ಆಪ್ತ ಮಂತ್ರಿಗಳಾದ ಎಂಬಿ ಪಾಟೀಲ್, ಡಾ. ಪರಮೇಶ್ವರ್, ಡಾ. ಮಹದೇವಪ್ಪ, ಸತೀಶ್ ಜಾರಕಿಹೊಳಿ, ಬೈರತಿ ಸುರೇಶ್ ಸೇರಿದಂತೆ ಕೆಲವು ಪ್ರಮುಖರೊಂದಿಗೆ ಮಾತುಕತೆ ನಡೆಸಿದರು. ರಾಹುಲ್ ಗಾಂಧಿ ಜೊತೆಗಿನ ತಮ್ಮ ಚರ್ಚೆಯ ವಿವರಗಳನ್ನು ಅವರಿಗೆ ನೀಡಿದ ಸಿಎಂ ಮುಂದೆ ತಾವು ಕೈಗೊಳ್ಳಬೇಕಾದ ನಿರ್ಧಾರಗಳ ಕುರಿತಂತೆ ಅಭಿಪ್ರಾಯ ಆಲಿಸಿದರು ಎಂದು ಗೊತ್ತಾಗಿದೆ.

ಮೂಲದ ಟೆಕ್ಕಿ ದುರ್ಮರಣ

ಸಮ್ಮುಖದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ರೋಷನ್ ಅವರು ತಾಯಿ, ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಈ ಸಂಬಂಧ ಇಲವಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಐದಾರು ವರ್ಷದಲ್ಲಿ ಹಲವರು ಬಲಿ: ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರದ ದತ್ತಾಂಶದ ಪ್ರಕಾರ ಮೈಸೂರು ಜಿಲ್ಲೆಯಲ್ಲಿ ಪ್ರಸಕ್ತ ವರ್ಷ ಇಬ್ಬರು, ಕಳೆದ ವರ್ಷ ಒಬ್ಬರು, 2024ರಲ್ಲಿ ಇಬ್ಬರು ಸಿಡಿಲಿಗೆ ಬಲಿಯಾಗಿದ್ದಾರೆ. 2011 ಮತ್ತು 2023ರ ನಡುವೆ ಮೈಸೂರಿನಲ್ಲಿ 16, ಮಂಡ್ಯದಲ್ಲಿ 18 ಹಾಗೂ ಚಾಮರಾಜನಗರದಲ್ಲಿ 6 ಮಂದಿ ಸೇರಿ ಒಟ್ಟು 40 ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಇಂದು ಬೆಂಗಳೂರಿಗೆ ಡಿಸಿಎಂ ಡಿ.ಕೆ. ಶಿವಕುಮಾರ್



ನವದೆಹಲಿ, ಮೇ 26– ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಇಡೀ ದಿನ ವರಿಷ್ಠರೊಂದಿಗೆ ಸಭೆ ನಡೆಸಿದ ಬಳಿಕ ಇಂದು ದೆಹಲಿಯಲ್ಲೇ ವಾಸ್ತವ್ಯ ಹೂಡಿದ್ದಾರೆ. ನಾಳೆ ಮಧ್ಯಾಹ್ನ 12.15ಕ್ಕೆ ದೆಹಲಿಯಿಂದ ಹೊರಟು ಮಧ್ಯಾಹ್ನ 3.20ಕ್ಕೆ ಬೆಂಗಳೂರು ತಲುಪಲಿದ್ದಾರೆ. ಈ ಮಧ್ಯೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಆಪ್ತ ಸಚಿವರೊಂದಿಗೆ ವಿಶೇಷ ವಿಮಾನದಲ್ಲಿ ಹೊರಟು ರಾತ್ರಿ ಬೆಂಗಳೂರು ತಲುಪಿದ್ದಾರೆ. ಮುಂದಿನ ರಾಜಕೀಯ ಬೆಳವಣಿಗೆಗಳ ಸಂಬಂಧ ತಮ್ಮ ಆಪ್ತ ವರಿಷ್ಠ ನಾಯಕರೊಟ್ಟಿಗೆ ಮಾತುಕತೆ ನಡೆಸುವ ಸಲುವಾಗಿಯೇ ಡಿ.ಕೆ. ಶಿವಕುಮಾರ್ ದೆಹಲಿಯಲ್ಲೇ ಬೀಡು ಬಿಟ್ಟಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ, ನಾಳೆ ಸಂಜೆ 4.30ಕ್ಕೆ ಬೃಹತ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಐದು ನಗರ ಪಾಲಿಕೆಗಳ ಚುನಾವಣೆಗೆ ಸಂಬಂಧಿಸಿದಂತೆ ಮಹತ್ವದ ಸಭೆ ನಡೆಯಲಿದ್ದು, ಅದರಲ್ಲಿ ಬೆಂಗಳೂರು ಉಸ್ತುವಾರಿ ಸಚಿವರೂ ಆದ ಡಿ.ಕೆ. ಶಿವಕುಮಾರ್ ಪಾಲ್ಗೊಳ್ಳಬೇಕಿದೆ.

ಸಿದ್ದು–ಡಿಕೆಶಿ ಬೆಂಬಲಿಗರಿಗೆ ಹೈಕಮಾಂಡ್ ವಾರ್ನಿಂಗ್

ದೆಹಲಿ: ನಾಯಕತ್ವ ಬದಲಾವಣೆ ಹಾಗೂ ಪವರ್ ಫೈಟ್ ವಿಚಾರ ದೆಹಲಿ ಅಂಗಳ ತಲುಪಿತ್ತು. ಕಾಂಗ್ರೆಸ್ ಹೈಕಮಾಂಡ್ ಇವತ್ತು ಬೆಳಗಿನಿಂದ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿಕೆ ಶಿವಕುಮಾರ್ ಜೊತೆ ಸಾಲು ಸಾಲು ಸಭೆ ನಡೆಸಿದ್ದರು. ಇದೀಗ ಕೊನೆಗೂ ಉಭಯ ನಾಯಕರೊಂದಿಗೆ ಹೈಕಮಾಂಡ್ ನಾಯಕರ ಸಭೆ ಮುಕ್ತಾಯವಾಗಿದೆ. ಸಭೆ ಮುಗಿದ ಬೆನ್ನಲ್ಲೇ ಕಾಂಗ್ರೆಸ್ ಹೈಕಮಾಂಡ್ ಸಿದ್ದು–ಡಿಕೆಶಿ ಬೆಂಬಲಿಗರಿಗೆ ವಾರ್ನಿಂಗ್ ಕೊಟ್ಟಿದೆ.

ಚರ್ಚೆಯ ಗುಟ್ಟು ಬಿಟ್ಟುಕೊಡದ ಹೈಕಮಾಂಡ್: ಇಂದು ಕೇವಲ ಕರ್ನಾಟಕ ಮಾತ್ರವಲ್ಲದೆ ಇಡೀ ದೇಶದ ಚಿತ್ತ ದೆಹಲಿಯತ್ತ ನೆಟ್ಟಿತ್ತು. ರಾಹುಲ್ ಗಾಂಧಿ ಸೇರಿದಂತೆ ಹೈಕಮಾಂಡ್ ನಾಯಕರು ಸಾಲು ಸಾಲು ಮ್ಯಾರಥಾನ್ ಸಭೆ ನಡೆಸಿದ್ದರು. ಆದರೆ, ಸಭೆ ಮುಕ್ತಾಯ ಬಳಿಕ ಕಾಂಗ್ರೆಸ್ ಹೈಕಮಾಂಡ್ ನಾಯಕತ್ವ ಬಿಕ್ಕಟ್ಟು ಚರ್ಚೆಯ ಯಾವುದೇ ಗುಟ್ಟು ಬಿಟ್ಟುಕೊಡದೆ ಸೈಲೆಂಟ್ ಆಗಿದೆ. ಇದರ ಜೊತೆ ಯಾರೂ ಬಹಿರಂಗ ಹೇಳಿಕೆ ಕೊಡದಂತೆ ತಾಕೀತು ಕೂಡ ಮಾಡಿದೆ. ಸಿಎಂ ಹಾಗೂ ಡಿಸಿಎಂಗೆ ತಮ್ಮ ಬೆಂಬಲಿಗರಿಗೆ ಖಡಕ್ ಆಗಿ ಸೂಚಿಸುವಂತೆ ಕಾಂಗ್ರೆಸ್ ಹೈಕಮಾಂಡ್ ತಿಳಿಸಿದೆ.

ರಾಜ್ಯದಲ್ಲಿ ಮೊದಲ ಎಬೋಲಾ ಕೇಸ್ ಪತ್ತೆ?

ಬೆಂಗಳೂರು: ರಾಜ್ಯದಲ್ಲಿ ಮೊದಲ ಎಬೋಲಾ ಪ್ರಕರಣ ಪತ್ತೆಯಾಗಿರುವ ಶಂಕೆ ವ್ಯಕ್ತವಾಗಿದೆ. ಉಗಾಂಡದಿಂದ ಬೆಂಗಳೂರಿಗೆ ಆಗಮಿಸಿದ ಮಹಿಳೆಯಲ್ಲಿ ಎಬೋಲಾ ರೋಗ ಲಕ್ಷಣಗಳು ಕಂಡುಬಂದಿದ್ದು, ರಾಜೀವ್ ಗಾಂಧಿ ಆಸ್ಪತ್ರೆಗೆ ಮಹಿಳೆಯನ್ನು ಶಿಫ್ಟ್ ಮಾಡಲಾಗಿದೆ.

ಫೈನಲ್‌ಗೆ ರಾಯಲ್ ಎಂಟ್ರಿ ಕೊಟ್ಟ ಆರ್‌ಸಿಬಿ

ಹಾಗೂ ದೇವ್‌ದತ್ತ ಪಡಿಕ್ಕಲ್ 30(19) ಬ್ಯಾಟಿಂಗ್ ನೆರವಿನಿಂದ ಉತ್ತಮ ಆರಂಭ ದೊರೆಯಿತು. ಈ ವೇಳೆ ಒಂದಾದ ನಾಯಕ ರಜತ್ ಪಾಟೀದರ್ ಹಾಗೂ ಕೃನಾಲ್ ಪಾಂಡ್ಯ 95(45 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ನೆರವಾದರು. ಕೃನಾಲ್ 28 ಎಸೆತಗಳಲ್ಲಿ 43 ರನ್ ಬಾರಿಸಿದರೆ, ಪಾಟೀದರ್ 33 ಎಸೆತಗಳಲ್ಲಿ 5 ಬೌಂಡರಿ ಹಾಗೂ 9 ಭರ್ಜರಿ ಸಿಕ್ಸರ್ ಸಹಿತ ಅಜೇಯ 93 ರನ್ ಚಚ್ಚಿದರು. ಉಳಿದಂತೆ ಟಿಮ್ ಡೇವಿಡ್ 4(5), ಜಿತೇಶ್ ಶರ್ಮಾ ಅಜೇಯ 15(5) ರನ್ ಬಾರಿಸಿದರು.

ಜಿಟಿ ಪರ ಕಗಿಸೋ ರಬಾಡ ಹಾಗೂ ಜಾಸನ್ ಹೋಲ್ಡರ್ ತಲಾ 2 ವಿಕೆಟ್, ಪ್ರಸಿದ್ಧ್ ಕೃಷ್ಣ ಒಂದು ವಿಕೆಟ್ ಕಿತ್ತರು.

ಆರ್‌ಸಿಬಿ ನೀಡಿದ ಬೃಹತ್ ಮೊತ್ತ ಚೇಸ್ ಮಾಡಲು ಮುಂದಾದ ಜಿಟಿಗೆ ಆರಂಭಿಕ ಆಘಾತ ಎದುರಾಯಿತು. ಸಾಯ್ ಸುದರ್ಶನ್ 14(9) ರನ್ ಗಳಿಸಿದ್ದ ವೇಳೆ ಡಫಿ ಬೌಲಿಂಗ್‌ನಲ್ಲಿ ಹಿಟ್ ವಿಕೆಟ್ ಆಗಿ ಹೊರ ನಡೆದರು. ಮುಂದಿನ ಓವರ್ ಬೌಲಿಂಗ್ ಮಾಡಿದ ಭುವನೇಶ್ವರ್ ಕುಮಾರ್, ಜಿಟಿ ನಾಯಕ ಶುಭ್‌ಮನ್ ಗಿಲ್ 2(7) ಅವರನ್ನು ಕ್ಲೀನ್ ಬೌಲ್ಡ್ ಮಾಡಿದರು.

ಇವರಿಗೆ ಜೊತೆಯಾದ ರಸಿಕ್ ಸಲಾಂ ದರ್ ನಿಶಾಂತ್ ಸಿಂಧು 5(3) ಹಾಗೂ ಜಾಸನ್ ಹೋಲ್ಡರ್ (ಡಕ್ ಔಟ್) ಅವರನ್ನು ಒಂದೇ ಓವರ್‌ನಲ್ಲಿ ಪೆವಿಲಿಯನ್‌ಗಟ್ಟಿದರು. ಈ ವೇಳೆ 11 ಎಸೆತಗಳಲ್ಲಿ 29 ರನ್ ಗಳಿಸಿ ಬ್ಯಾಟಿಂಗ್ ಮಾಡುತ್ತಿದ್ದ ಜೋಸ್ ಬಟ್ಲರ್ ಅವರನ್ನು ಜೋಸ್ ಹೇಜಲ್ವುಡ್ ಕ್ಲೀನ್ ಬೌಲ್ಡ್ ಮಾಡುವ ಮೂಲಕ ಆರ್‌ಸಿಬಿ ಕಡೆಗೆ ಪಂದ್ಯ ವಾಲಿಸಿದರು.

ಈ ವೇಳೆ ಇಂಪ್ಯಾಕ್ಟ್ ಪ್ಲೇಯರ್ ಆಗಿ ಕಣಕ್ಕಿಳಿದ ರಾಹುಲ್ ತೆವಾಟಿಯಾ 43 ಎಸೆತಗಳಲ್ಲಿ 8 ಬೌಂಡರಿ, 4 ಸಿಕ್ಸರ್ ಸಹಿತ 68 ರನ್ ಕಲೆಹಾಕಿ ಹೊರನಡೆದರು. ಉಳಿದಂತೆ ವಾಷಿಂಗ್ಟನ್ ಸುಂದರ್ 8(8), ರಶೀದ್ ಖಾನ್ 8(9), ಕಗಿಸೋ ರಬಾಡ 9(5), ಮೊಹಮ್ಮದ್ ಸಿರಾಜ್ 5(13) ಹಾಗೂ ಪ್ರಸಿದ್ಧ್ ಕೃಷ್ಣ ಅಜೇಯ 6(7) ರನ್ ಗಳಿಸಿದರು.

ಆರ್‌ಸಿಬಿ ಪರ ಜಾಕೋಬ್ ಡಫಿ 3 ವಿಕೆಟ್, ಭುವನೇಶ್ವರ್ ಕುಮಾರ್, ರಸಿಕ್ ಸಲಾಂ ದರ್ ಹಾಗೂ ಕೃನಾಲ್ ಪಾಂಡ್ಯ ತಲಾ 2 ವಿಕೆಟ್, ಹೇಜಲ್ವುಡ್ ಒಂದು ವಿಕೆಟ್ ಪಡೆದು ಮಿಂಚಿದರು.

ಗ್ರಂಥಾಲಯ, ಮಾಹಿತಿ ವಿಜ್ಞಾನ ವಿದ್ಯಾರ್ಥಿ ಸಂಘದ ಸಮಾರೋಪ



ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘದ 2025–26ನೇ ಸಾಲಿನ ಸಮಾರೋಪ ಸಮಾರಂಭ ನಡೆಯಿತು.

ಮೈಸೂರು, ಮೇ 26(ಎಸ್‌ಪಿಎನ್)– ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿ ಆವರಣದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದಲ್ಲಿ ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ (ಎಂಯುಎಲ್‌ಐಎಸ್‌ಎಸ್‌ಎ)ದ 2025–26ನೇ ಸಾಲಿನ ಸಮಾರೋಪ ಸಮಾರಂಭ ನಡೆಯಿತು.

ಬೆಂಗಳೂರು ರಾಮನ್ ಸಂಶೋಧನಾ ಸಂಸ್ಥೆಯ ನಿವೃತ್ತ ಗ್ರಂಥಪಾಲಕರಾದ ಡಾ.ಬಿ.ಎಂ.ಮೀರಾ ಮಾತನಾಡಿ, ಗ್ರಂಥಾಲಯ ವಿದ್ಯಾರ್ಥಿಗಳಿಗೆ ವಿವಿಧ ವಿಭಾಗದಲ್ಲಿ ಉದ್ಯೋಗದ ಸಾಕಷ್ಟು ಅವಕಾಶಗಳಿವೆ. ಇದನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಗ್ರಂಥಾಲಯ ವಿದ್ಯಾರ್ಥಿಗಳಿಗೆ ಸಲಹೆ ನೀಡಿದ ಅವರು, ಕಳೆದ ಹಲವು ವರ್ಷಗಳಿಂದ ಮೈಸೂರು ವಿವಿ ಗ್ರಂಥಾಲಯ ವಿಭಾಗದಲ್ಲಿ ವಿಶೇಷ ಉಪನ್ಯಾಸ ಆಯೋಜಿಸಿ, ವಿದ್ಯಾರ್ಥಿಗಳಿಗೆ ಬೇಕಾದ ಮಾಹಿತಿ ಒದಗಿಸುತ್ತಿರುವ ಇಲ್ಲಿನ ಅಧ್ಯಾಪಕರ ಕಾರ್ಯ ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು.

ಮುಲಿಸಾದ ಶಿಕ್ಷಕ ಸಲಹೆಗಾರ ಡಾ.ಎಂ.ಸುನೀಲ್‌ಕುಮಾರ್, ಮುಲಿಸಾ ಕಾರ್ಯಕ್ರಮದ ಸಂಕ್ಷಿಪ್ತ ವರದಿ ಮಂಡಿಸಿದರೆ, ಮುಲಿಸಾ ಖಜಾಂಚಿ ಡಿ.ಸುಪ್ರಿತ ಸಂಘಟನೆಯ ಖರ್ಚು–ವೆಚ್ಚ ಮಂಡಿಸಿದರು. ಪ್ರಥಮ ಮತ್ತು ದ್ವಿತೀಯ ವರ್ಷ ಗ್ರಂಥಾಲಯ–ಮಾಹಿತಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಂದ ತಮ್ಮ ಅನಿಸಿಕೆ ಹಂಚಿಕೊಂಡರೆ, ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನ ಮತ್ತು ಪ್ರಮಾಣ ಪತ್ರ ವಿತರಿಸಲಾಯಿತು. ಈ ವೇಳೆ ಮೈಸೂರು ವಿವಿ ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಜಿ.ಆರ್. ಜನಾರ್ಧನ, ಮುಲಿಸಾ ಅಧ್ಯಕ್ಷ ಪ್ರೊ.ಎನ್.ಎಸ್.ಹರಿನಾರಾಯಣ, ಪ್ರಾಧ್ಯಾಪಕಿ ಪ್ರೊ.ಎಚ್.ಆದಿತ್ಯಕುಮಾರಿ ಇನ್ನಿತರರು ಉಪಸ್ಥಿತರಿದ್ದರು. ಪ್ರಾಧ್ಯಾಪಕ ಪ್ರೊ.ಎಂ. ಚಂದ್ರಶೇಖರ ಸ್ವಾಗತಿಸಿದರೆ, ವಿದ್ಯಾರ್ಥಿನಿ ಡಿ.ಸುಪ್ರಿತ ಪ್ರಾರ್ಥಿಸಿದರು.

ಪರಿಷತ್‌ನ 7 ಸ್ಥಾನಗಳಿಗೆ ಜೂ.18ಕ್ಕೆ ಚುನಾವಣೆ

ಬೆಂಗಳೂರು,ಮೇ 26(ಕೆಎಂಶಿ)–ಬಿ.ಕೆ.ಹರಿಪ್ರಸಾದ್, ನಸೀರ್ ಅಹ್ಮದ್ ಸೇರಿದಂತೆ ತೆರವಾಗುತ್ತಿರುವ ಏಳು ವಿಧಾನಪರಿಷತ್ತು ಸ್ಥಾನಗಳಿಗೆ ಜೂನ್ 18 ರಂದು ಚುನಾವಣೆ ನಡೆಸಲು ಕೇಂದ್ರ ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸಿದೆ.

ನಸೀರ್ ಅಹ್ಮದ್, ಹರಿಪ್ರಸಾದ್ ಅಲ್ಲದೆ, ಗೋವಿಂದರಾಜು, ಎಂಟಿಬಿ ನಾಗರಾಜ್, ತಿಪ್ಪಣ್ಣಪ್ಪ, ಪ್ರತಾಪ್‌ಸಿಂಹ ನಾಯಕ ಹಾಗೂ ಸುನಿಲ್ ವಲ್ಯಾಪುರೆ ಅವರ ಪರಿಷತ್ತು ಅವಧಿ ಜೂನ್ 30ಕ್ಕೆ ಕೊನೆಗೊಳ್ಳಲಿದೆ. ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ನಡೆಯುವ ದ್ವೈವಾರ್ಷಿಕ ಚುನಾವಣೆಗಾಗಿ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲು ಜೂ.8ರಂದು ಕಡೆ ದಿನವಾಗಿರುತ್ತದೆ. 9ರಂದು ಪರಿಶೀಲನೆ, 11ರಂದು ನಾಮಪತ್ರ ಹಿಂತೆಗೆದುಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ಅಗತ್ಯಬಿದ್ದರೆ ಜೂನ್ 18ರಂದು ಬೆಳಿಗ್ಗೆ 9ರಿಂದ ಸಂಜೆ 4ರವರೆಗೂ ಮತದಾನ ನಡೆದು, ಅಂದೇ ಫಲಿತಾಂಶ ಪ್ರಕಟಗೊಳ್ಳಲಿದೆ. ವಿಧಾನಸಭೆಯ ಬಲಾಬಲದ ಆಧಾರದ ಮೇಲೆ ಕಾಂಗ್ರೆಸ್‌ಗೆ 4, ಬಿಜೆಪಿಗೆ 2, ಜೆಡಿಎಸ್‌ಗೆ 1 ಸ್ಥಾನ ದೊರೆಯಲಿದೆ. ಈಗಾಗಲೇ ರಾಜ್ಯಸಭೆಯಿಂದ ತೆರವಾಗುತ್ತಿರುವ ನಾಲ್ಕು ಸ್ಥಾನಗಳಿಗೂ ಚುನಾವಣೆ ವೇಳಾಪಟ್ಟಿ ಪ್ರಕಟಿಸಿರುವ ಆಯೋಗ, ಅಂದೇ ಪರಿಷತ್ತು ಚುನಾವಣೆಗೂ ಸಮಯ ನಿಗದಿ ಮಾಡಿದೆ.

ಶಾಸಕರಿಗೆ ಸನ್ಮಾನ...



ಒಂಟಿಕೊಪ್ಪಲ್ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಮೇಲ್ಛಾವಣಿ ನಿರ್ಮಾಣಕ್ಕೆ ಅನುದಾನ ನೀಡಿದ ಶಾಸಕ ಕೆ.ಹರೀಶ್‌ಗೌಡ ಅವರನ್ನು ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನ ಸಮಿತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಟ್ರಸ್ಟ್ ಅಧ್ಯಕ್ಷ ನಾಗರಾಜ್, ಕಾರ್ಯದರ್ಶಿ ರವಿ, ಸದಸ್ಯರಾದ ಸೋಮಣ್ಣ, ಜಗದೀಶ್, ನಟರಾಜ್ ಮುಖಂಡರಾದ ಯೋಗೇಶ್ ಪ್ರಕಾಶ್, ಒಂಟಿಕೊಪ್ಪಲ್ ಗುರುರಾಜ್ ಉಪಸ್ಥಿತರಿದ್ದರು.

ಅಂತರ ರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ

ಮೈಸೂರು: ಕುವಾರ್ ಪ್ರದರ್ಶಕ ಕಲೆಗಳ ಕೇಂದ್ರದ ವತಿಯಿಂದ ಕಲೆಮನೆ ಸಭಾಂಗಣದಲ್ಲಿ ಮೇ 31ರಂದು ಮಧ್ಯಾಹ್ನ 3 ಗಂಟೆಗೆ 72ನೇ ಅಂತರ ರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಡಾ.ಜೈ ಶ್ರೀ ಪ್ರಸಾದ್ ಭಾಗವಹಿಸಲಿದ್ದಾರೆ. ಶ್ವೇತಾ ಸುನಿಲ್‌ರಿಂದ ಭರತನಾಟ್ಯ, ನಾಟ್ಯ ಸರಸ್ವತಿ ಅಕಾಡೆಮಿ ನಿರ್ದೇಶಕಿ ಡಾ.ಸರಸ್ವತಿ ಮತ್ತು ಶಿಷ್ಯ ವೃಂದದವರಿಂದ ಕೂಚುಪುಡಿ ನೃತ್ಯ, ಬೆಂಗಳೂರಿನ ಜತಿನ್ ಅಕಾಡೆಮಿ ಆಫ್ ಡಾನ್ಸ್ ನಿರ್ದೇಶಕರಾದ ವಿದುಷಿ ಅರ್ಚನಾ ಪುಣ್ಯೇಶ್ ಮತ್ತು ಇವರ ಶಿಷ್ಯ ವೃಂದದವರಿಂದ ಕೂಚುಪುಡಿ ನೃತ್ಯ ಪ್ರದರ್ಶನವಿರುತ್ತದೆ.

ರಾಹುಲ್ ವೆಲ್ಲಾಳರಿಂದ ದಾಸವಾಣಿ ...



ಮೈಸೂರಿನ ಅಗ್ರಹಾರದ ಶ್ರೀ ಕಾಶಿ ವಿಶ್ವನಾಥ ಸನ್ನಿಧಿ ಆವರಣದಲ್ಲಿ ಉತ್ತರಾದಿ ಮಠದಿಂದ ಹಮ್ಮಿಕೊಂಡಿರುವ ಅಧಿಕಮಾಸ ಉತ್ಸವದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪ್ರಖ್ಯಾತ ಗಾಯಕ ರಾಹುಲ್ ವೆಲ್ಲಾಳ ಅವರಿಂದ ದಾಸವಾಣಿ ನೆರವೇರಿತು.

ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ

ಶುಶ್ರೂಷಕರು ಶ್ರದ್ಧೆಯಿಂದ ಕೆಲಸ ಮಾಡಬೇಕು: ನಿವೃತ್ತ ಪ್ರಾಂಶುಪಾಲ ಮಧು ಸಲಹೆ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಿವೃತ್ತ ಶುಶ್ರೂಷಕರ ಸಂಘದ ವತಿಯಿಂದ ಆಯೋಜಿಸಿದ್ದ ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆಯನ್ನು ಸರ್ಕಾರಿ ಶುಶ್ರೂಷ ಶಾಲೆಯ ನಿವೃತ್ತ ಪ್ರಾಂಶುಪಾಲ ಎಂ.ಮಧು ಉದ್ಘಾಟಿಸಿದರು.

ಮೈಸೂರು, ಮೇ26(ಬಿಎಲ್‌ಯು)– ಶುಶ್ರೂಷಕರ ಕರ್ತವ್ಯದಲ್ಲಿ ಸಣ್ಣ ಲೋಪವಾದರೂ ವೈದ್ಯರ ಹೆಸರಿಗೆ ಕಳಂಕ ಬರುತ್ತದೆ. ಈ ಹಿನ್ನೆಲೆಯಲ್ಲಿ ಶುಶ್ರೂಷಕರು ಹೆಚ್ಚಿನ ಜವಾಬ್ದಾರಿಯಿಂದ ಕೆಲಸ ಮಾಡಬೇಕು ಎಂದು ಸರ್ಕಾರಿ ಶುಶ್ರೂಷ ಶಾಲೆಯ ನಿವೃತ್ತ ಪ್ರಾಂಶುಪಾಲ ಎಂ.ಮಧು ಸಲಹೆ ನೀಡಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ನಿವೃತ್ತ ಶುಶ್ರೂಷಕರ ಸಂಘದ ವತಿಯಿಂದ ಆಯೋಜಿಸಿದ್ದ ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ತಾಯಿ–ಮಕ್ಕಳಂತೆ ರೋಗಿ ಹಾಗೂ ಶುಶ್ರೂಷಕರ ಸಂಬಂಧ. ಶುಶ್ರೂಷಕರು ರೋಗಿಯನ್ನು ಪ್ರತಿ ಹಂತದಲ್ಲಿ ಗಮನಿಸುತ್ತಿದ್ದಾರೆ. ಶುಶ್ರೂಷಕರ ನಗುಮುಖದ ಸೇವೆಯಿಂದ ರೋಗಿ ಬಲು ಬೇಗ ಗುಣಮುಖನಾಗುತ್ತಾನೆ ಎಂದು ಮಧು ಅಭಿಪ್ರಾಯಪಟ್ಟರು.

ಇತ್ತೀಚೆಗೆ ಆಸ್ಪತ್ರೆಗಳಲ್ಲಿ ರೋಗಿಯ ಸಂಬಂಧಿಕರು ಕೆಲವು ವಿಚಾರಕ್ಕೆ ಗಲಾಟೆ ಮಾಡುತ್ತಾರೆ. ಇದರಿಂದ ವೈದ್ಯರು ಹಾಗೂ ಶುಶ್ರೂಷಕರು ರೋಗಿಗಳಿಗೆ ಚಿಕಿತ್ಸೆ ನೀಡುವುದು ಕಷ್ಟವಾಗುತ್ತದೆ. ಆದ ಕಾರಣ ಜನರು ವೈದ್ಯರು ಹಾಗೂ ಶುಶ್ರೂಷಕರ ಸೇವೆಯನ್ನು ಮನಗಾಣಬೇಕು. ಅವರ ಕರ್ತವ್ಯಕ್ಕೆ ಎಂದೂ ಅಡ್ಡಿಪಡಿಸಬಾರದು ಎಂದು ಸಲಹೆ ನೀಡಿದರು.

ಶುಶ್ರೂಷಕರು ಜ್ಞಾನದ ಜೊತೆಗೆ ಕೌಶಲ್ಯವನ್ನು ರೂಢಿಸಿಕೊಳ್ಳಬೇಕು. ವೈದ್ಯ ಹಾಗೂ ರೋಗಿ ನಡುವೆ ಕೊಂಡಿಯಾಗಿ ಕೆಲಸ ಮಾಡಬೇಕು ಎಂದು ಕಿವಿಮಾತು ಹೇಳಿದರು. ಫ್ಲಾರೆನ್ಸ್ ನೈಟಿಂಗೇಲ್ ಅವರ ಜನ್ಮ ದಿನವಾದ ಇಂದು ವಿಶ್ವದಾದ್ಯಂತ ಶುಶ್ರೂಷಕರ ಸೇವೆಯನ್ನು ಸ್ಮರಿಸುವ ದಿನವಾಗಿದೆ. ಆಧುನಿಕ ನರ್ಸಿಂಗ್ ಶಿಕ್ಷಣಕ್ಕೆ ಬುನಾದಿ ಹಾಕಿದ ನೈಟಿಂಗೇಲ್ ಅವರು ವೈದ್ಯಕೀಯ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಇಂದು ಅರ್ಥಪೂರ್ಣವಾಗಿ ಸ್ಮರಿಸಬೇಕು ಎಂದರು. ಈ ವೇಳೆ ನಿವೃತ್ತ ಹಿರಿಯ ಶುಶ್ರೂಷಕರನ್ನು ಸನ್ಮಾನಿಸಿ, ಇವರ ಸೇವೆಯನ್ನು ಸ್ಮರಿಸಲಾಯಿತು. ಸರ್ಕಾರಿ ಶುಶ್ರೂಷ ಮಹಾ ವಿದ್ಯಾಲಯದ ನಿವೃತ್ತ ಉಪನ್ಯಾಸಕ ಡಾ.ಕೆ.ಆರ್.ಶ್ರೀನಿವಾಸ್, ನಿವೃತ್ತ ಶುಶ್ರೂಷಕಾಧಿಕಾರಿ ಸಂಘದ ಅಧ್ಯಕ್ಷೆ ಶಿವಮ್ಮ, ಸಂಸ್ಥಾಪಕ ಅಧ್ಯಕ್ಷ ಡಾ.ಪಿ.ರಂಗಸ್ವಾಮಿ, ಗೌರವಾಧ್ಯಕ್ಷ ಕುಶಾಲಪ್ಪ ಕೆ.ಕೆ., ಪ್ರಧಾನ ಕಾರ್ಯದರ್ಶಿ ಹೇಮಲತಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೇ 30, ಡಾ॥ ಸಂತೋಷ್ ಚೊಕ್ಕಾಡಿ ಅವರ 'ಎದೆಯ ಹಾಡು ಕನ್ನಡ ಭಾವಗುಚ್ಛ' ಲೋಕಾರ್ಪಣೆ; ಗೀತ ಗಾಯನ

ಮೈಸೂರು, ಮೇ 26– ಉಪಾಸನಾ ಟ್ರಸ್ಟ್ ವತಿಯಿಂದ ಕವಿ ಹಾಗೂ ಸರಗೂರು ತಾಲೂಕು ಬಿ.ಮಟಕೆರೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಡಾ॥ ಸಂತೋಷ್ ಚೊಕ್ಕಾಡಿ ಅವರ 'ಎದೆಯ ಹಾಡು ಕನ್ನಡ ಭಾವಗುಚ್ಛ' ಲೋಕಾರ್ಪಣೆ ಹಾಗೂ ಗೀತ ಗಾಯನ ಕಾರ್ಯಕ್ರಮವನ್ನು ಮೇ 30ರ ಶನಿವಾರ ಸಂಜೆ 6:00 ಗಂಟೆಗೆ ಬೆಂಗಳೂರಿನ ಗಿರಿನಗರ ಶ್ರೀ ಶೃಂಗೇರಿ ಶಾರದಾಂಬಾ ದೇವಾಲಯದ ಶಂಕರ ಕೃಪಾ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಪ್ರಸಿದ್ಧ ಕವಿಗಳಾದ ಬಿ.ಆರ್.ಲಕ್ಷ್ಮಣರಾವ್, ಕವಿ ಡಾ॥ಸಂತೋಷ್ ಚೊಕ್ಕಾಡಿ ಭಾಗವಹಿಸಲಿದ್ದಾರೆ. ಗೀತ ಗಾಯನದಲ್ಲಿ ಉಪಾಸನಾ ಮೋಹನ್, ಮಂಗಳಾರವಿ, ನಾಗಚಂದ್ರಿಕಾಭಟ್, ಅಪರ್ಣಾನರೇಂದ್ರ, ಸುಪ್ರಿಯಾ ಆಚಾರ್ಯ, ನಿತಿನ್ ರಾಜಾರಾಂ ಶಾಸ್ತ್ರಿ, ವಿಶ್ವಾಸ್, ವಸಿಷ್ಠ, ವರ್ಷ ಸುರೇಶ್, ವಿದ್ಯಾಮೂರ್ತಿ, ಚಿನ್ಮಯಿ ಚಂದ್ರಶೇಖರ್, ಕಾವ್ಯಪಾಲ ಚಂದ್ರ, ನಿಶಿತಾ ಪ್ರಸಾದ್, ಮೈತ್ರೇಯಿ.ಎಂ ಹಾಗೂ ಉಪಾಸನಾ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಪಡುವಾರಹಳ್ಳಿಯಲ್ಲಿ ಸಿದ್ದಪ್ಪಾಜಿ ಕಂಡಾಯೋತ್ಸವ...



ಮೈಸೂರಿನ ಪಡುವಾರಹಳ್ಳಿಯಲ್ಲಿ ಸಿದ್ದಪ್ಪಾಜಿ ಕಂಡಾಯೋತ್ಸವ ಏರ್ಪಡಿಸಲಾಗಿತ್ತು. ಈ ವೇಳೆ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಎನ್.ಯೋಗಾನಂದ, ಮುಖಂಡರಾದ ರಾಜಣ್ಣ, ಕೆ.ಗಿರೀಶ್, ವಿಜಿ, ಕುಮಾರ್, ರೋಹಿತ್, ರಾಮು, ರಕ್ಷಿತ್, ಗೋಕುಲಂ ನಾಗ, ಕಿರಣ್ ಉಪಸ್ಥಿತರಿದ್ದರು.

ಪಿಯುಸಿ, ಸಿ.ಇ.ಟಿ ಮುಗಿಸಿದ ವಿದ್ಯಾರ್ಥಿಗಳಿಗೆ ಒಂದು ತಿಂಗಳ ತಾಂತ್ರಿಕ ತರಬೇತಿ

ಮೈಸೂರು ಮೇ.26 – ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ವತಿಯಿಂದ ಪಿ.ಯು.ಸಿಯಲ್ಲಿ ಪಾಸಾಗಿ ಸಿ.ಇ.ಟಿ ಪರೀಕ್ಷೆಯನ್ನು ಮುಗಿಸಿದ ವಿದ್ಯಾರ್ಥಿಗಳಿಗೆ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ (G.T & T.C) ಒಂದು ತಿಂಗಳ ತಾಂತ್ರಿಕ ತರಬೇತಿಯನ್ನು ನೀಡಲಾಗುತ್ತದೆ.

ಈ ತರಬೇತಿಯಿಂದ ಬಿ.ಇ ಗೆ ಸೇರ ಬಯಸುವ ವಿದ್ಯಾರ್ಥಿಗಳಿಗೆ ಮುಂದಿನ ಬಿ.ಇ ವ್ಯಾಸಂಗಕ್ಕೆ ಅನುಕೂಲವಾಗುತ್ತದೆ. ಈ ಒಂದು ತಿಂಗಳ ತರಬೇತಿಯ ಅವದಿಯಲ್ಲಿ ಮ್ಯಾಕ್ಯಾನಿಕಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್ ಹಾಗೂ ಕಂಪ್ಯೂಟರ್ ವಿಷಯಗಳಲ್ಲಿ ಪ್ರಾಕ್ಟಿಕಲ್ ತರಬೇತಿಯನ್ನು ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, #93,94 ಬೆಳಗೊಳ ಕೈಗಾರಿಕ ವಸಾಹತು ಕೆ.ಆರ್.ಎಸ್ ರಸ್ತೆ ಮೈಸೂರು ಇಲ್ಲಿನ ದೂ ಸಂ: 8088415824, 9980615384, 9980557220 ನ್ನು ಸಂಪರ್ಕಿಸಬಹುದೆಂದು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಸಿ.ಇ.ಓ ಮುಖ್ಯಸ್ಥರಾದ ಶ್ರೀನಿವಾಸ್ ಎಸ್. ಭಟ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಂಗಾರು ಮಳೆ–ಗಾಳಿ ಮುನ್ನೆಚ್ಚರಿಕೆ: ಮೈಸೂರಲ್ಲಿ ಅಪಾಯಕಾರಿ ಮರ–ರೆಂಬೆಗಳ ತೆರವು



ಮೈಸೂರು, ಮೇ 26(ಎಂಕೆ)– ಮುಂಗಾರು ಮಳೆಯ ಮುನ್ನೆಚ್ಚರಿಕಾ ಕ್ರಮವಾಗಿ ಮೈಸೂರು ನಗರದಾದ್ಯಂತ ಒಣಗಿರುವ ಮರಗಳು ಮತ್ತು ದುರ್ಬಲ ಮರಗಳ ರೆಂಬೆ–ಕೊಂಬೆಗಳ ತೆರವು ಕಾರ್ಯಾಚರಣೆ ಚುರುಕುಗೊಳಿಸಲಾಗಿದೆ.

ಮೈಸೂರು ನಗರಪಾಲಿಕೆ ತೋಟಗಾರಿಕೆ ವಿಭಾಗದ ವತಿಯಿಂದ ಶಕ್ತಿಮಾನ್ ವಾಹನ, ಏಣಿಯುಳ್ಳ ಮೂರು ವಾಹನಗಳು, ಒಂದು ಕ್ರೇನ್, ಅಭಯ ತಂಡದ ಜೊತೆಗೆ ಪ್ರತ್ಯೇಕವಾಗಿ ಐದು ತಂಡಗಳನ್ನು ನಿಯೋಜಿಸಿಕೊಂಡು ಒಣಗಿದ ಮರಗಳ ತೆರವು ಕಾರ್ಯಾಚರಣೆ ನಡೆಸಲಾಗುತ್ತಿದೆ.

ಜೋರು ಮಳೆ–ಗಾಳಿಯ ಸಂದರ್ಭದಲ್ಲಿ ಒಣಗಿದ ಮತ್ತು ದುರ್ಬಲ ಮರಗಳು ಮುರಿದು ಬಿದ್ದು ಹಾನಿಯಾಗುವ ಮುನ್ನವೇ ಮುಂಜಾಗ್ರತಾ ಕ್ರಮವಾಗಿ ಸಾರ್ವಜನಿಕರಿಂದ ಸ್ವೀಕೃತವಾಗುವ ಅರ್ಜಿಗಳಿಗೆ ಅರಣ್ಯ ಇಲಾಖೆಯಿಂದ ಅನುಮತಿ ಪಡೆದು ತೆರವುಗೊಳಿಸಲು ಕ್ರಮ ವಹಿಸಲಾಗುತ್ತಿದೆ ಎಂದು ನಗರಪಾಲಿಕೆ ತೋಟಗಾರಿಕೆ ವಿಭಾಗದ ಎಇಇ ಪಿ.ಕೆ. ಮೋಹನ್ ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಪಾಲಿಕೆಯ ಪ್ರತೀ ವಾರ್ಡ್ ವ್ಯಾಪ್ತಿಯೂ ಒಣಗಿರುವ, ರೋಗಗ್ರಸ್ತ ಮತ್ತು ಬೀಳುವ ಹಂತದಲ್ಲಿರುವ ಮರಗಳ ಕೊಂಬೆಗಳನ್ನು ಪಾಲಿಕೆಯ ಪ್ರತೀ ಮೂರು ವಲಯಗಳಿಗೊಂದರಂತೆ ವಾಹನಗಳನ್ನು ನಿಯೋಜಿಸಿ ತುರ್ತಾಗಿ ತೆರವುಗೊಳಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

50ಕ್ಕೂ ಹೆಚ್ಚು ಮರ: ಕಳೆದ ಎರಡು ತಿಂಗಳಿಂದ ಪಾಲಿಕೆ ವ್ಯಾಪ್ತಿಯಲ್ಲಿದ್ದ 50ಕ್ಕೂ ಹೆಚ್ಚು ಒಣಗಿದ ಮರಗಳನ್ನು ತೆರವುಗೊಳಿಸಲಾಗಿದೆ. ಗಾಳಿ–ಮಳೆಗೆ ಬಿದ್ದು, ಅಕ್ಕ–ಪಕ್ಕದ ಮನೆಗಳಿಗೆ ಹಾನಿಯಾಗುವ ಮುನ್ನವೇ ತೆರವು ಮಾಡುವುದು ಸೂಕ್ತ. ಈ ನಿಟ್ಟಿನಲ್ಲಿ ಕ್ರಮವಹಿಸಲಾಗುತ್ತಿದ್ದು, ಪ್ರತಿ ದಿನ 10–15 ದುರ್ಬಲ ಮತ್ತು ವಿದ್ಯುತ್ ತಂತಿ ನಡುವೆ ಹಾದುಹೋಗಿ ಅಪಾಯ ಸ್ಥಿತಿಯಲ್ಲಿರುವ ರೆಂಬೆ–ಕೊಂಬೆಗಳನ್ನು ಕಟ್ ಮಾಡಲಾಗುತ್ತಿದೆ ಎಂದರು.

ಡಾ.ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ಅನುಮತಿ ನೀಡದ ಪಾಲಿಕೆ ನಿಲುವು ಖಂಡಿಸಿ ಇಂದಿನಿಂದ ಅನಿರ್ದಿಷ್ಟಾವಧಿ ಧರಣಿ



ಪುರುಷೋತ್ತಮ್

ಮೈಸೂರು,ಮೇ 26(ಎಂಟಿವೈ)– ಮೈಸೂರಿನ ಬಸವನಗುಡಿ ಉದ್ಯಾನವನದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿ ಸ್ಥಾಪನೆಗೆ ಅನುಮತಿ ನೀಡಲು ವಿಳಂಬ ಧೋರಣೆ ಅನುಸರಿಸುತ್ತಿರುವ ಪಾಲಿಕೆ ಕ್ರಮ ಖಂಡಿಸಿ ನಾಳೆ (ಮೇ 27) ಬೆಳಗ್ಗೆ 11 ಗಂಟೆಯಿಂದ ಮೈಸೂರು ಪಾಲಿಕೆ ಕಚೇರಿ ಮುಂದೆ ಅನಿರ್ದಿಷ್ಟಾವಧಿ ಧರಣಿ ಆರಂಭಿಸುತ್ತಿರುವುದಾಗಿ ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಭೀಮ್ ಸೇನೆ ವತಿಯಿಂದ ಬಸವನಗುಡಿಯಲ್ಲಿರುವ ಪಾರ್ಕಿನಲ್ಲಿ ವಿಶ್ವರತ್ನ ಡಾ.ಅಂಬೇಡ್ಕರ್ ಅವರ ಪುತ್ಥಳಿ ಸ್ಥಾಪನೆಗೆ ಅನುಮತಿ ಕೋರಿ ಮೈಸೂರು ಮಹಾನಗರ ಪಾಲಿಕೆಗೆ ಪತ್ರ ಬರೆದಿದ್ದರೂ, ಇದುವರೆಗೂ ಪಾಲಿಕೆ ಅಧಿಕಾರಿಗಳು ಅನುಮತಿ ನೀಡಿಲ್ಲ. ಆ ಉದ್ಯಾನವನದಲ್ಲಿ ಕುವೆಂಪು ಪುತ್ಥಳಿ ಹಾಗೂ ಬಾಲಗಂಗಾಧರನಾಥ ಸ್ವಾಮೀಜಿಯವರ ಪುತ್ಥಳಿ ಸ್ಥಾಪನೆಗೆ ಅನುಮತಿ ನೀಡಿರುವ ಪಾಲಿಕೆ ಅಂಬೇಡ್ಕರ್ ಪುತ್ಥಳಿ ಸ್ಥಾಪನೆ ಕುರಿತು ತಾರತಮ್ಯ ಅನುಸರಿಸುತ್ತಿದೆ. ಹೀಗಾಗಿ ಈ ಪ್ರತಿಭಟನೆ ನಡೆಸಲಾಗುತ್ತಿದೆ. ಮೈಸೂರಿನ ವಿವಿಧೆಡೆ ಅನುಮತಿ ರಹಿತವಾಗಿ ಹಲವರ ಪ್ರತಿಮೆ ಸ್ಥಾಪಿಸಿದ್ದರೂ ಕ್ರಮ ಕೈಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಅನುಮತಿ ಪಡೆಯದೇ ಸ್ಥಾಪಿಸಿರುವ ಪ್ರತಿಮೆಗಳನ್ನು ತೆರವುಗೊಳಿಸಬೇಕು ಎಂದು ಪುರುಷೋತ್ತಮ್ ಆಗ್ರಹಿಸಿದರು.

ಜನಪ್ರತಿನಿಧಿಗಳು ಇಲ್ಲದ ಕಾರಣ ಪಾಲಿಕೆಯಲ್ಲಿ ಜನಸಾಮಾನ್ಯರ ಕೆಲಸ ಕಾರ್ಯಕ್ಕೆ ಜಡತ್ವ ಹಿಡಿದಿದೆ. ಎಲ್ಲ ವಲಯಗಳಲ್ಲೂ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಇದಲ್ಲದೆ, ಕೇಂದ್ರ ಸರ್ಕಾರ ಇಂಧನ ದರ ಹೆಚ್ಚಿಸಿ ಜನಸಾಮಾನ್ಯರ ಮೇಲೆ ದೊಡ್ಡ ಪ್ರಹಾರ ಮಾಡಿದೆ. ಇದರ ವಿರುದ್ಧವೂ ಹೋರಾಟ ನಡೆಸಲಾಗುತ್ತದೆ ಎಂದರು. ಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಭೀಮ್ ಸೇನೆ ಮುಖಂಡರಾದ ಧರ್ಮರಾಜ, ಸರ್ವೇಶ್, ಕಿರಣ್, ಸಿದ್ದರಾಜು, ಮಲ್ಲೇಶ್ ಇದ್ದರು.

ಮೇ 28, 29ರಂದು ಶತ ಚಂಡಿಕಾ ಯಾಗ

ಮೈಸೂರು, ಮೇ26(ಎಂಕೆ)–ಮೈಸೂರಿನ ಉತ್ತನಹಳ್ಳಿಯ ಜ್ವಾಲಾಮುಖಿ ತ್ರಿಪುರ ಸುಂದರಿ ದೇವಸ್ಥಾನದ ಆವರಣದಲ್ಲಿ ಶ್ರೀ ಸರ್ವ ಮಂಗಳಾದೇವಿ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ಮೇ 28 ಮತ್ತು 29ರಂದು ಎರಡು ದಿನಗಳ ಕಾಲ 'ಶತ ಚಂಡಿಕಾಯಾಗ' ಏರ್ಪಡಿಸಲಾಗಿದೆ.

ಮೇ 28ರಂದು ಬೆಳಗ್ಗೆ 7 ಗಂಟೆಯಿಂದ ಪುಣ್ಯಾಹ, ಗಣಪತಿ ಪೂಜೆ, ಕಲಶ ಸ್ಥಾಪನೆ, ಚಂಡಿ ಪಾರಾಯಣ, ಮೂಲ ಮಂತ್ರ ಜಪ, ಸಂಜೆ 7 ಗಂಟೆಗೆ ಲಲಿತ ಸಹಸ್ರನಾಮ ಅರ್ಚನೆ, ಅಷ್ಟಾವಧಾನ ಸೇವೆ ನಡೆಯಲಿದ್ದು, ಮೇ 29ರಂದು ಬೆಳಗ್ಗೆ 8 ಗಂಟೆಯಿಂದ ಶತ ಚಂಡಿಕಾಯಾಗ, ಮಧ್ಯಾಹ್ನ 12.15ಕ್ಕೆ ಪೂರ್ಣಾಹುತಿ. ಸನಾತನ ಧರ್ಮದಲ್ಲಿ ಯಾಗ–ಯಜ್ಞಗಳಿಗೆ ಅತ್ಯಂತ ಪವಿತ್ರವಾದ ಸ್ಥಾನವಿದ್ದು, ಮಾನವನ ಆತ್ಮಿಕ ಉನ್ನತಿ, ಮನಃಶಾಂತಿ, ದೈವಾನುಗ್ರಹ ಮತ್ತು ಲೋಕ ಕ್ಷೇಮಕ್ಕೆ ದಾರಿಯಾಗುವ ಮಹತ್ವದ ವೇದೋಕ್ತ ಕರ್ಮಗಳಾಗಿವೆ. ಅದರಂತೆ ಶತಚಂಡಿಕಾ ಯಾಗ ಅತ್ಯಂತ ಶ್ರೇಷ್ಠವಾದದ್ದು. ಪರಾಶಕ್ತಿ ಸ್ವರೂಪಿಯಾದ ಶ್ರೀ ಚಂಡಿಕಾ ಪರಮೇಶ್ವರಿಯ ಆರಾಧನೆಗಾಗಿ ನೆರವೇರಿಸುವ ಈ ಮಹಾಯಾಗವು ಭಕ್ತಿ, ಶಕ್ತಿ ಮತ್ತು ಸಮರ್ಪಣೆಯ ಪರಮ ಪ್ರತೀಕವಾಗಿದೆ ಎಂದು ಟ್ರಸ್ಟ್‌ನ ಅರುಣ್ ಗುರೂಜಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 26–ಮೈಸೂರಿನ ರಾಮಾನುಜಾ ರಸ್ತೆ 15ನೇ ಕ್ರಾಸ್‌ನಲ್ಲಿರುವ ಜ್ಯೋತಿರ್ಗಮಯ ಸೇವಾ ಟ್ರಸ್ಟ್ ಹೆಣ್ಣು ಮಕ್ಕಳ ಉಚಿತ ವಿದ್ಯಾರ್ಥಿನಿಲಯದಲ್ಲಿ ಮೇ 25ರಿಂದ 2026–27ನೇ ಸಾಲಿನ ಪ್ರಥಮ ಪದವಿ ವಿದ್ಯಾರ್ಥಿನಿಯರ ಪ್ರವೇಶಾತಿಗೆ ಅರ್ಜಿಗಳನ್ನು ವಿತರಿಸಲಾಗುವುದು. ಲಿಂಗಾಯಿತ ಸಮುದಾಯಕ್ಕೆ ಸೇರಿದ ತಂದೆ–ತಾಯಿ ಇಲ್ಲದ (Without parent), ತಂದೆ ಅಥವಾ ತಾಯಿ ಇಲ್ಲದ (Single parent) ಮತ್ತು ಬಡಕುಟುಂಬಕ್ಕೆ ಸೇರಿದ ಪ್ರಥಮ ಪದವಿ ತರಗತಿ (ಬಿ.ಎ, ಬಿ.ಎಸ್ಸಿ, ಬಿ.ಕಾಂ, ಬಿ.ಸಿ.ಎ)ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಮಾತ್ರ ಅವಕಾಶ. ಹೆಚ್ಚಿನ ಮಾಹಿತಿಗಾಗಿ ಮೊ. 7795151316 ಸಂಪರ್ಕಿಸಬಹುದು.

ದೇಶ - ವಿದೇಶ

ಕಾಡಾನೆ ದಾಳಿಗೆ ಮಹಿಳೆ ಬಲಿ, ಆಕೆ ಪತಿಗೆ ಗಂಭೀರ ಗಾಯ



ಕೇರಳ: ಆನೆ ದಾಳಿಯಿಂದ ಮಹಿಳೆಯೊಬ್ಬರು ಸಾವನ್ನಪ್ಪಿ, ಆಕೆಯ ಪತಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ಕೇರಳದ ವಯನಾಡ್‌ನ ಮೆಪ್ಪಾಡಿಯ ಕಲ್ಲಡಿ ಎಂಬಲ್ಲಿ ಮಂಗಳವಾರ ಬೆಳಗ್ಗೆ ಸಂಭವಿಸಿದೆ. ಮೆಪ್ಪಾಡಿಯ ಪುತುಮಲಾದ ನಿವಾಸಿ ಜೆಸ್ಸಿ(45) ಮೃತಪಟ್ಟವರು. ಗಂಭೀರವಾಗಿ ಗಾಯಗೊಂಡಿರುವ ಈಕೆಯ ಪತಿ ಶಾಜಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಇಂದು ಮುಂಜಾನೆ ದಂಪತಿ ಸ್ಕೂಟರ್‌ನಲ್ಲಿ ತೆರಳುತ್ತಿದ್ದಾಗ ಕಲ್ಲಡಿಯ ಚೂಂಡಿಯಲ್ಲಿ ಕಾಡಾನೆ ದಿಢೀರ್ ಅಡ್ಡಬಂದು, ದಾಳಿ ಮಾಡಿದೆ ಎಂದು ತಿಳಿದುಬಂದಿದೆ. ಕೇರಳದಲ್ಲಿ ವನ್ಯಜೀವಿ ಮತ್ತು ಮಾನವ ಸಂಘರ್ಷ ಹೆಚ್ಚುತ್ತಿದ್ದು, ಅನೇಕ ಜಿಲ್ಲೆಗಳಲ್ಲಿ ಇಂಥ ಘಟನೆಗಳು ಬೆಳಕಿಗೆ ಬರುತ್ತಿವೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಅರಣ್ಯ ಸಚಿವ ಶಿಬು ಬೇಬಿ ಜಾನ್, ಸೂಕ್ತ ಕ್ರಮದ ಭರವಸೆ ನೀಡಿದ್ದಾರೆ. ಇದೇ ವೇಳೆ ಸಂತ್ರಸ್ತ ಕುಟುಂಬಕ್ಕೆ ಪರಿಹಾರ ನೀಡುವುದಾಗಿ ತಿಳಿಸಿದ್ದಾರೆ.

ವಯನಾಡ್ ಅರಣ್ಯಾಧಿಕಾರಿ ಅಶೀಕ್, ಸಂತ್ರಸ್ತ ಕುಟುಂಬಕ್ಕೆ ತುರ್ತು ಹಣಕಾಸಿನ ಸೌಲಭ್ಯದಿಂದ 5 ಲಕ್ಷ ರೂ ಪರಿಹಾರ ಧನ ನೀಡಿ, ಕುಟುಂಬದ ಒಬ್ಬರಿಗೆ ತಾತ್ಕಾಲಿಕ ಉದ್ಯೋಗ ನೀಡಲಾಗುವುದು ಎಂದು ಹೇಳಿದ್ದಾರೆ.

ಜಾಗತಿಕ ಷೇರು ಮಾರುಕಟ್ಟೆ ಮೌಲ್ಯದಲ್ಲಿ ಭಾರತ ಹಿಂದಿಕ್ಕಿದ ತೈವಾನ್



ತೈವಾನ್: ಜಾಗತಿಕ ಷೇರು ಮಾರುಕಟ್ಟೆ ಮೌಲ್ಯದಲ್ಲಿ ಮೊದಲ ಬಾರಿಗೆ ಭಾರತವನ್ನು ಹಿಂದಿಕ್ಕಿರುವ ತೈವಾನ್, ವಿಶ್ವದ ಟಾಪ್–5 ಮಾರುಕಟ್ಟೆಗಳಲ್ಲಿ ಸ್ಥಾನ ಪಡೆದಿದೆ. ಕೃತಕ ಬುದ್ಧಿಮತ್ತೆ(ಎಐ) ತಂತ್ರಜ್ಞಾನ ಕ್ಷೇತ್ರದ ವೇಗವಾದ ಬೆಳವಣಿಗೆಯೇ ಇದಕ್ಕೆ ಪ್ರಮುಖ ಕಾರಣ ಎನ್ನಲಾಗಿದೆ.

ಪ್ರಸ್ತುತ ತೈವಾನ್‌ನ ಒಟ್ಟು ಮಾರುಕಟ್ಟೆ ಮೌಲ್ಯ 4.95 ಟ್ರಿಲಿಯನ್ ಡಾಲರ್‌ಗೆ ಏರಿಕೆಯಾಗಿದ್ದು, ಭಾರತದ 4.92 ಟ್ರಿಲಿಯನ್ ಡಾಲರ್ ಮೌಲ್ಯದೊಂದಿಗೆ ಆರನೇ ಸ್ಥಾನಕ್ಕೆ ಕುಸಿದಿದೆ. ಅಮೆರಿಕ 77.96 ಟ್ರಿಲಿಯನ್ ಡಾಲರ್ ಮಾರುಕಟ್ಟೆ ಮೌಲ್ಯದೊಂದಿಗೆ ಮೊದಲ ಸ್ಥಾನದಲ್ಲಿದೆ. ನಂತರ ಚೀನಾ 15.57 ಟ್ರಿಲಿಯನ್ ಡಾಲರ್ ಮತ್ತು ಜಪಾನ್ 8.67 ಟ್ರಿಲಿಯನ್ ಡಾಲರ್ ಮೌಲ್ಯದೊಂದಿಗೆ ಕ್ರಮವಾಗಿ ಎರಡು ಮತ್ತು 3ನೇ ಸ್ಥಾನದಲ್ಲಿವೆ. ಹಾಂಗ್‌ಕಾಂಗ್ 7.26 ಟ್ರಿಲಿಯನ್ ಡಾಲರ್ ಮೌಲ್ಯದೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ. ತೈವಾನ್‌ನ ಈ ವೇಗದ ಏರಿಕೆಗೆ ಅಲ್ಲಿನ ಚಿಪ್ ತಯಾರಿಕಾ ದೈತ್ಯ ಕಂಪನಿ ತೈವಾನ್ ಸೆಮಿಕಂಡಕ್ಟರ್ ತಯಾರಿಕಾ ಸಂಸ್ಥೆಯೇ ಕಾರಣ ಎನ್ನಲಾಗಿದೆ. ಭಾರತೀಯ ಷೇರು ಮಾರುಕಟ್ಟೆ ಕಳೆದ ಕೆಲವು ತಿಂಗಳಿಂದ ನಿರೀಕ್ಷಿತ ಮಟ್ಟದಲ್ಲಿ ಪ್ರದರ್ಶನ ನೀಡಲು ವಿಫಲವಾಗಿದೆ. ಭಾರತೀಯ ಮಾರುಕಟ್ಟೆಯಲ್ಲಿ ಎಐ ತಂತ್ರಜ್ಞಾನ ಆಧಾರಿತ ದೊಡ್ಡ ಕಂಪನಿಗಳ ಕೊರತೆಯೂ ಹಿನ್ನಡೆಗೆ ಕಾರಣ ಎಂದಿದ್ದಾರೆ ತಜ್ಞರು.

ಸೆಪ್ಟಿಕ್ ಟ್ಯಾಂಕ್‌ನಲ್ಲಿ ಉಸಿರುಗಟ್ಟಿ 6 ಮಂದಿ ಸಾವು



ಒಡಿಶಾ: ನಿರ್ಮಾಣ ಹಂತದ ಸೆಪ್ಟಿಕ್ ಟ್ಯಾಂಕ್‌ನಲ್ಲಿ ಉಸಿರುಗಟ್ಟಿ ಆರು ಜನ ಮೃತಪಟ್ಟ ದಾರುಣ ಘಟನೆ ಕಲಾಹಂಡಿ ಜಿಲ್ಲೆಯ ಗೌಡಾ ಕಾರ್ಲಖುಂಟದಲ್ಲಿ ನಡೆದಿದೆ. ಮನೆ ಮಾಲೀಕ ನಿಮೈನ್ ಪಾಲ್, ಅವರ ಮಗ ಆಕಾಶ್‌ಪಾಲ್, ಕಾರ್ಮಿಕರಾದ ಇದೇ ಗ್ರಾಮದ ಅದಾಲ್ ಮಾಝಿ, ಮಾತೋಗಂಡ ಗ್ರಾಮದ ಮನೋರಂಜನ್ ಹಟಿ, ದೂತ ಗ್ರಾಮದ ಭಂದ ಜಲ್ ಮತ್ತು ಬಿಪುಲ್‌ಜಲ್ ಮೃತ ದುರ್ದೈವಿಗಳು. ತೀವ್ರ ಅಸ್ವಸ್ಥಗೊಂಡಿದ್ದ ಮತ್ತೊಬ್ಬ ಕಾರ್ಮಿಕನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಹೊಸದಾಗಿ ನಿರ್ಮಿಸಲಾದ ಶೌಚಾಲಯದ ಟ್ಯಾಂಕ್‌ನಿಂದ ಸೆಂಟ್ರಿಂಗ್ ವಸ್ತುಗಳನ್ನು ತೆಗೆದು ಹಾಕುವುದಕ್ಕಾಗಿ ಕಾರ್ಮಿಕರು ಒಳಪ್ರವೇಶಿಸಿದಾಗ ಈ ದುರಂತ ಸಂಭವಿಸಿದೆ. ಮೊದಲು ಟ್ಯಾಂಕ್ ಒಳಗೆ ಇಳಿದ ಕಾರ್ಮಿಕರು, ಕೆಲವು ಹೊತ್ತಿನ ಬಳಿಕ ಇದ್ದಕ್ಕಿದ್ದಂತೆ ಪ್ರಜ್ಞೆ ಕಳೆದುಕೊಂಡಿದ್ದಾರೆ. ಕೂಗಿದರೂ ಯಾವುದೇ ಪ್ರತಿಕ್ರಿಯೆಬಾರದ ಹಿನ್ನೆಲೆಯಲ್ಲಿ ಅನುಮಾನ ಬಂದು ಅಲ್ಲಿದ್ದವರು ಒಬ್ಬೊಬ್ಬರಾಗಿ ಟ್ಯಾಂಕ್ ಒಳಗೆ ಇಳಿದಿದ್ದು, ಅವರೂ ಪ್ರಜ್ಞೆ ಕಳೆದುಕೊಂಡಿದ್ದಾರೆ. ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಮದನ್‌ಪುರ ರಾಂಪುರ್ ಪೊಲೀಸರು ತಿಳಿಸಿದ್ದಾರೆ. ಘಟನೆ ಬಗ್ಗೆ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ದುಃಖ ವ್ಯಕ್ತಪಡಿಸಿದ್ದಾರೆ.

ಫ್ರಾನ್ಸ್‌ನಲ್ಲಿ ಹೆಚ್ಚಿದ ಬಿಸಿಲ ತಾಪ; ರೈಲು ಪ್ರಯಾಣಿಕರು ಹೈರಾಣು



ಫ್ರಾನ್ಸ್: ಕಳೆದ ಕೆಲವು ದಿನಗಳಿಂದ ಬಿಸಿಲ ತಾಪ, ಬಿಸಿ ಗಾಳಿ ಹೆಚ್ಚಾಗಿರುವುದರಿಂದ ಫ್ರಾನ್ಸ್ ಜನತೆ ಕಂಗಾಲಾಗಿದ್ದಾರೆ. ಈ ನಡುವೆ ಪ್ಯಾರಿಸ್‌ನಿಂದ ನೈಸ್ ನಗರಕ್ಕೆ ಸಂಚರಿಸುತ್ತಿದ್ದ ರೈಲು ತಾಂತ್ರಿಕ ದೋಷದಿಂದ ನಿಂತ ವೇಳೆ ನೂರಾರು ಪ್ರಯಾಣಿಕರು ರೈಲಿನಿಂದ ಕೆಳಗಿಳಿದು, ನೆರಳಿನಲ್ಲಿ ಆಶ್ರಯ ಪಡೆಯಲು ಪರದಾಡಿದ ವಿಡಿಯೋ ವೈರಲ್ ಆಗಿದೆ. ಆ ರೈಲಿನ ಬೋಗಿಗಳಲ್ಲಿ ಹವಾನಿಯಂತ್ರಣ ವ್ಯವಸ್ಥೆ ಇರಲಿಲ್ಲ. ಧಗಧಗಿಸುವ ಸೂರ್ಯನ ತಾಪಕ್ಕೆ ರೈಲಿನ ಒಳಗಿನ ತಾಪ ಅಪಾಯಕಾರಿ ಮಟ್ಟಕ್ಕೆ ಏರ ತೊಡಗಿದ್ದರಿಂದ ಉಸಿರಾಡುವುದಕ್ಕೂ ಕಷ್ಟವಾಗಿದೆ. ಪುಟ್ಟ ಮಕ್ಕಳು ಮತ್ತು ವೃದ್ಧರು ಸೇರಿದಂತೆ ಎಲ್ಲಾ ಪ್ರಯಾಣಿಕರೂ ನರಕಯಾತನೆ ಅನುಭವಿಸಿದ್ದಾರೆ.

ಉಸಿರುಗಟ್ಟುವ ವಾತಾವರಣ ನಿರ್ಮಾಣವಾದಾಗ ಶುದ್ಧ ಗಾಳಿ ಹಾಗೂ ನೆರಳಿಗಾಗಿ ಕೆಳಗಿಳಿದು, ಹಳಿಗಳ ಪಕ್ಕದಲ್ಲಿ ಆಶ್ರಯ ಪಡೆದಿದ್ದಾರೆ. ರೈಲ್ವೆ ಇಲಾಖೆಯ ನಿರ್ಲಕ್ಷ್ಯಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ದೇವಿ ನೆಲೆಯಲ್ಲಿ ತೃತೀಯ ಲಿಂಗಿಗಳೇ ಅರ್ಚಕರು, ಉಸ್ತುವಾರಿಗಳು!



ಆಂಧ್ರ ಪ್ರದೇಶ: ರಾಜ್ಯದ ವಿಜಯನಗರಂನ ಪೆದ್ದ ಚೆರುವಿನ ದಡದಲ್ಲಿರುವ ಶ್ರೀ ವಿಜಯ ಸಾಗರ ದುರ್ಗಾ ಮಲ್ಲೇಶ್ವರ ದೇವಸ್ಥಾನದಲ್ಲಿ ತೃತೀಯ ಲಿಂಗಿಗಳೇ ಪುರೋಹಿತರು ಮತ್ತು ಉಸ್ತುವಾರಿಗಳಾಗುವ ಮೂಲಕ ಆಧ್ಯಾತ್ಮಿಕತೆ ಜೊತೆಗೆ ಮಾನವೀಯ ಸೇವೆ ಗಳನ್ನೂ ನಡೆಸುತ್ತಿದ್ದಾರೆ. ದೈನಂದಿನ ಆಚರಣೆ ಜೊತೆಗೆ ದೇವಾಲಯವನ್ನು ನಿರ್ಮಿಸುವಲ್ಲೂ ಪ್ರಮುಖ ಪಾತ್ರ ವಹಿಸಿದ್ದಾರೆ. ಸುಮಾರು 20 ತೃತೀಯ ಲಿಂಗಿಗಳು ತಮ್ಮ ದೈನಂದಿನ ಗಳಿಕೆಯ ಶೇ.90ರಷ್ಟು ಹಣವನ್ನು ದೇವಾಲಯದ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಕೊಡುಗೆ ನೀಡುತ್ತಿದ್ದಾರೆ.

ಅವರು 2008ರಿಂದ ದೇವಾಲಯದ ಸಂಪ್ರದಾಯಗಳು ಮತ್ತು ದೇವಿಯ ಆರಾಧನೆಯಲ್ಲಿ ಪರಿಣತಿ ಹೊಂದಿರುವ ವಿದ್ವಾಂಸರಿಂದ ಔಪಚಾರಿಕ ತರಬೇತಿ ಪಡೆದ ನಂತರ ಪೂಜಾ ವಿಧಿ–ವಿಧಾನಗಳು ಮತ್ತು ಧಾರ್ಮಿಕ ವಿಧಿ–ವಿಧಾನಗಳನ್ನೂ ನಿರ್ವಹಿಸುತ್ತಿದ್ದಾರೆ. ನಿತ್ಯ ನೂರಾರು, ಶುಕ್ರವಾರ ಸೇರಿದಂತೆ ವಿಶೇಷ ದಿನಗಳಲ್ಲಿ ಸಾವಿರಾರು ಭಕ್ತರು ದೇವಾಲಯಕ್ಕೆ ಭೇಟಿ ನೀಡುತ್ತಾರೆ. ಪ್ರತಿದಿನ ಸಂಜೆ ಸುಮಾರು 200ರಿಂದ 300 ಅನಾಥ ಮತ್ತು ನಿರ್ಗತಿಕ ಮಕ್ಕಳಿಗೆ ಅನ್ನದಾಸೋಹ ನಡೆಸಲಾಗುತ್ತಿದೆ. ದೇವಾಲಯವು ನಮಗೆ ಮನ್ನಣೆ ಮತ್ತು ಗೌರವವನ್ನು ಮರಳಿ ನೀಡಿದೆ. ಭಕ್ತರು ನಮ್ಮೊಂದಿಗೆ ಘನತೆ ಮತ್ತು ಪ್ರೀತಿಯಿಂದ ನಡೆದುಕೊಳ್ಳುತ್ತಾರೆ ಎಂದು ಅರ್ಚಕರಾದ ಶ್ರವಂತಿ, ಮೀನಾ ಸಂತಸ ವ್ಯಕ್ತಪಡಿಸಿದ್ದಾರೆ.

ಮೈಸೂರು ಮಿತ್ರ ಬುಧವಾರ 27 ಮೇ 2026

ಬಿಜೆಪಿ ಆಡಳಿತ ವೈಫಲ್ಯ ಖಂಡಿಸಿ ನಗರ ಕಾಂಗ್ರೆಸ್ ಪ್ರತಿಭಟನೆ



ನಗರಸಭೆ ವೈಫಲ್ಯ ಖಂಡಿಸಿ ನಗರ ಕಾಂಗ್ರೆಸ್ ನಗರಸಭೆ ಎದುರು ಪ್ರತಿಭಟನೆ ನಡೆಸಿತು.

ಮಡಿಕೇರಿ, ಮೇ 26–ನಗರಸಭೆ ವೈಫಲ್ಯವನ್ನು ಖಂಡಿಸಿ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಶೀಘ್ರ ಆರಂಭಿಸುವಂತೆ ಒತ್ತಾಯಿಸಿ ನಗರ ಕಾಂಗ್ರೆಸ್ ಸಮಿತಿ ನಗರದಲ್ಲಿ ಪ್ರತಿಭಟನೆ ನಡೆಸಿತು.

ನಗರ ಕಾಂಗ್ರೆಸ್ ಅಧ್ಯಕ್ಷ ಪ್ರಕಾಶ್ ಆಚಾರ್ಯ ನೇತೃತ್ವದಲ್ಲಿ ಕಾಂಗ್ರೆಸ್ ಕಚೇರಿಯಿಂದ ನಗರಸಭೆಯವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು, ವಿವಿಧ ಸಂಘ ಸಂಸ್ಥೆಗಳ ಪ್ರಮುಖರು ನಗರಸಭೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನಗರಸಭಾ ಆಡಳಿತ ಕಟ್ಟಡದ ಮುಂದೆ ಸೇರಿದ ಪ್ರತಿಭಟನಾಕಾರರು ನಗರ ಸಭೆಯಲ್ಲಿ ಬಿಜೆಪಿ ಆಡಳಿತ ನಿಷ್ಕ್ರಿಯವಾಗಿದೆ. ಮಳೆಗಾಲ ಪ್ರಾರಂಭಕ್ಕೆ ದಿನ ಗಣನೆ ಆರಂಭವಾಗಿದ್ದರೂ ಸೂಕ್ತ ಕ್ರಮ ಕೈಗೊಳ್ಳಲು ನಗರಸಭೆ ವಿಫಲವಾಗಿದೆ ನಗರದ ರಸ್ತೆಗಳು ಗುಂಡಿ ಬಿದ್ದಿದ್ದು, ಅವುಗಳ ದುರಸ್ತಿ ಕಾರ್ಯ ನಡೆಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೆಪಿಸಿಸಿ ಮುಖಂಡ ಟಿ.ಪಿ.ರಮೇಶ್, ಬೀದಿ ನಾಯಿಗಳ ಹಾವಳಿಗೆ ಕಡಿವಾಣ ಹಾಕಬೇಕಿದೆ. ಈ ನಿಟ್ಟಿನಲ್ಲಿ ನಗರ ಕಾಂಗ್ರೆಸ್ ಸಾಂಕೇತಿಕ ಪ್ರತಿಭಟನೆ ನಡೆಸಿದೆ. ಬೇಡಿಕೆಗಳ ಪತ್ರವನ್ನೂ ಪೌರಾಯುಕ್ತರಿಗೆ ಸಲ್ಲಿಸಲಾಗಿದೆ ಎಂದು ಹೇಳಿದರು. ಈ ಬೇಡಿಕೆಗಳನ್ನು ಶೀಘ್ರದಲ್ಲೇ ಅನುಷ್ಠಾನಕ್ಕೆ ತರಲು ತಪ್ಪಿದಲ್ಲಿ ಮತ್ತೆ ನಗರ ಕಾಂಗ್ರೆಸ್ ಪ್ರತಿಭಟನೆ ನಡೆಸಲಿದೆ. ಮಾತ್ರವಲ್ಲದೇ ನಗರ ಸಭೆಯಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸದಸ್ಯರ ರಾಜೀನಾಮೆಗೂ ಒತ್ತಡ ಹೇರಲಾಗುತ್ತದೆ ಎಂದು ಹೇಳಿದರು.

ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೋಚನ ಚೇತನ್, ಉಪಾಧ್ಯಕ್ಷರುಗಳಾದ ಸದಾ ಮುದ್ದಪ್ಪ, ಮುದ್ದುರಾಜ್, ಜಿ.ಸಿ.ಜಗದೀಶ್, ಮುನೀರ್ ಮಾಚರ್, ಪಕ್ಷ ಪ್ರಮುಖರಾದ ಜಂಬುಂತಿ ಶೆಟ್ಟಿ, ಮಿನಾಜ್ ಪ್ರವೀಣ್, ಹೆಚ್.ಎಸ್.ಗೋಪಿನಾಥ್, ಫ್ಯಾನ್ಸಿ ಸೇರಿದಂತೆ ಮತ್ತಿತ್ತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವದಂತಿ ನಿಯಂತ್ರಣಕ್ಕೆ ಪ್ರವಾಸೋದ್ಯಮಿಗಳು, ಸಂಘ ಸಂಸ್ಥೆಗಳು ಸಹಕರಿಸಿ


ಕುಂಡ್ಯೊಳಂಡ ದಿನೇಶ್ ಕಾರ್ಯಪ್ಪ ಸಭೆಯಲ್ಲಿ ಮಾತನಾಡಿದರು.

ಮಡಿಕೇರಿ, ಮೇ 26–ಕೊಡಗು ಜಿಲ್ಲೆ ಪ್ರವಾಸಿಗರಿಗೆ ಸುರಕ್ಷಿತವಾಗಿದ್ದು, ಆತಿಥ್ಯಕ್ಕೆ ಎಂದಿನಂತೆ ಹೆಸರುವಾಸಿಯಾಗಿದೆ. ವದಂತಿಗಳಿಗೆ ಪ್ರವಾಸಿಗರು ಕಿವಿಗೊಡಬಾರದು ಎಂಬ ಸಂದೇಶವನ್ನು ಪ್ರವಾಸಿಗರಿಗೆ ಮನದಟ್ಟು ಮಾಡುವ ನಿಟ್ಟಿನಲ್ಲಿ ನಾಡಿನ ಪ್ರವಾಸೋದ್ಯಮಿಗಳು, ಸಂಘಸಂಸ್ಥೆಗಳ ಸಹಕಾರ ಅತ್ಯಗತ್ಯವಾಗಿದೆ ಎಂದು ಕೂರ್ಗ್ ಹೋಟೇಲ್, ರೆಸಾರ್ಟ್ ಅಸೋಸಿಯೇಷನ್ ಅಧ್ಯಕ್ಷ ಕುಂಡ್ಯೊಳಂಡ ದಿನೇಶ್ ಕಾರ್ಯಪ್ಪ ತಿಳಿಸಿದ್ದಾರೆ.

ನಗರದ ವ್ಯಾಲಿವ್ಯೂ ಹೊಟೇಲ್ ಸಭಾಂಗಣದಲ್ಲಿ ಕೂರ್ಗ್ ಹೊಟೇಲ್, ರೆಸಾರ್ಟ್ ಅಸೋಸಿಯೇಷನ್ ಏರ್ಪಡಿಸಿದ್ದ ಸಂಘ ಸಂಸ್ಥೆಗಳ ಪ್ರಮುಖರ ಸಭೆಯಲ್ಲಿ ಮಾತನಾಡಿದ ಅವರು, ಪ್ರವಾಸಿ ತಾಣಗಳಲ್ಲಿ ಅಥವಾ ಯಾವುದೇ ಪ್ರವಾಸೋದ್ಯಮದ ಸಂಬಂಧಿತ ಚಟುವಟಿಕೆಗಳಲ್ಲಿ ಅಹಿತಕರ ಘಟನೆ ಸಂಭವಿಸಿದ ಕೂಡಲೇ ಪೂರ್ವಾ ಪರ ತಿಳಿಯದೆ ಪ್ರವಾಸಿ ಚಟುವಟಿಕೆಗಳಿಗೆ ನಿರ್ಬಂಧ ಹೇರುವ ಸರ್ಕಾರದ ಕ್ರಮದಿಂದಾಗಿ ಜಿಲ್ಲೆಯ ಪ್ರವಾಸೋದ್ಯಮಕ್ಕೆ ತೀವ್ರ ಹಿನ್ನಡೆಯಾಗಿದೆ. ಜಿಲ್ಲೆಯ ದುಬಾರೆ, ಮಾಂದಲಪಟ್ಟಿ, ತಡಿಯಂಡ ಮೋಳ್ ನಂತಹ ಪ್ರಮುಖ ಪ್ರವಾಸಿ ತಾಣಗಳಿಗೆ ಪ್ರವಾಸಿಗರು ತೆರಳದಂತೆ ನಿರ್ಬಂಧ ಹೇರಿರುವ ನಿಯಮವನ್ನು ಕೂಡಲೇ ಹಿಂಪಡೆಯುವಂತೆ ಒತ್ತಾಯಿಸಿದರು.

ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಬಿ.ಆರ್. ನಾಗೇಂದ್ರ ಪ್ರಸಾದ್ ಮಾತನಾಡಿ, ವ್ಯಾಪಾರಸ್ಥರು ಇತ್ತೀಚಿನ ವರ್ಷಗಳಲ್ಲಿ ಪ್ರವಾಸಿಗರನ್ನು ನಂಬಿಕೊಂಡು ವಹಿವಾಟು ನಡೆಸುತ್ತಿದ್ದಾರೆ. ಹೀಗಿರುವಾಗ ಜಿಲ್ಲೆಗೆ ಪ್ರವಾಸಿಗರ ಸಂಖ್ಯೆಯಲ್ಲಿ ಇಳಿಮುಖವಾದಲ್ಲಿ ಅದು ವರ್ತಕರ ಮೇಲೂ ವ್ಯತಿರಿಕ್ತ ಪರಿಣಾಮ ಬೀರಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಹೋಂಸ್ಟೇ ಅಸೋಸಿಯೇಷನ್ ಅಧ್ಯಕ್ಷ ಮೋಂತಿ ಗಣೇಶ್ ಮಾತನಾಡಿ, ಜಿಲ್ಲೆಯಲ್ಲಿನ ಅನಧಿಕೃತ ಹೋಂಸ್ಟೇ ಗಳನ್ನು ಮುಚ್ಚಿಸಲು ಸರ್ಕಾರದ ಕೈಗೊಂಡಿರುವ ಕ್ರಮ ಏನೇನೂ ಸಾಲದು. ಹೆಚ್ಚುವರಿ ಸಿಬ್ಬಂದಿಗಳೊಂದಿಗೆ ನಿಯಮಬಾಹಿರ ಹೋಂಸ್ಟೇಗಳಿಗೆ ಕಡಿವಾಣ ಹಾಕಲೇಬೇಕು ಎಂದು ಆಗ್ರಹಿಸಿದರು.

ಕೊಡಗು ಹೋಟೇಲ್, ರೆಸಾರ್ಟ್ ಅಸೋಸಿಯೇಷನ್ ಗೌರವ ಸಲಹೆಗಾರ ಜಿ.ಚಿದ್ವಿಲಾಸ್, ಪತ್ರಕರ್ತ ಹೆಚ್.ಟಿ. ಅನಿಲ್, ದುಬಾರೆಯ ರ್ಯಾಫ್ಟಿಂಗ್ ಸಲಹೆಗಾರ ರತೀಶ್ ಮಾತನಾಡಿದರು. ಅಸೋಸಿಯೇಷನ್ ಪದಾಧಿಕಾರಿ ಮೋಹನ್ ದಾಸ್, ಕೊಡಗು ಚೇಂಬರ್ ಆಫ್ ಕಾಮರ್ಸ್ ಉಪಾಧ್ಯಕ್ಷ ಎ.ಕೆ.ನವೀನ್, ಪಿ.ಟಿ.ಉಣ್ಣಿಕೃಷ್ಣ, ಸಂತೋಷ್, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಜರಿದ್ದರು.

ನೈಜ ಭಾಷೆಯ ಮನೋಭಾವನೆ ಬರುವಂತೆ ಬೋಧಿಸಿ


ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಕುಲಪತಿ ಡಾ.ಅಶೋಕ ಸಂಗಪ್ಪ ಅಲೂರ ಮಾತನಾಡುತ್ತಿರುವುದು.

ವಿರಾಜಪೇಟೆ, ಮೇ 26–ಅನ್ಯ ಭಾಷೆ ಹೊಂದಿರುವ ಮಕ್ಕಳಲ್ಲಿ ಬೋಧಕರು ನೈಜ ಭಾಷೆಯ ಮನೋಭಾವನೆ ಬರುವಂತೆ ನೋಡಿಕೊಂಡು ಬೋಧಿಸಬೇಕಿದೆ ಎಂದು ಕುಲಪತಿ ಡಾ, ಅಶೋಕ ಸಂಗಪ್ಪ ಅಲೂರ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕಾವೇರಿ ಕಾಲೇಜು ಹಾಗೂ ದಲಿತ ಸಾಹಿತ್ಯ ಪರಿಷತ್ ನುಡಿ ಉತ್ಸವ ಮತ್ತು ಕೊಡಗೂ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಗಡಿ ಪ್ರದೇಶಗಳ ಪಠ್ಯ ಕ್ರಮದಲ್ಲಿ ಕನ್ನಡ ಭಾಷಾ ನೀತಿ ಹಾಗೂ ಬಹುಭಾಷಾ ವಾಸ್ತವಿಕತೆಗಳ ಮರುಚಿಂತನೆ ಎಂಬ 'ರಾಷ್ಟ್ರೀಯ ವಿಚಾರ ಸಂಕಿರಣ'ವನ್ನು ಉದ್ಘಾಟಿಸಿ, ನಮ್ಮ ಕನ್ನಡ ಭಾಷೆ ಸಾವಿರಾರು ವರ್ಷದ ಪುರಾತನ ಭಾಷೆಯಲ್ಲಿ ಸಾಹಿತ್ಯ ಪರಂಪರೆ ಸಾಂಸ್ಕೃತಿಕ ಆಚಾರ ವಿಚಾರ ಆಳವಾಗಿದ್ದು ಇದನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಕೆಲಸ ಆಗಬೇಕು.

ನುಡಿ ಎನ್ನುವುದು ನಮ್ಮ ಸಂಕೇತ ಅದು ಸಂಸ್ಕೃತಿ ಪರಂಪರೆ ಮೌಲ್ಯಗಳನ್ನು ತಾರಕಕ್ಕೆ ಕೊಂಡೊಯ್ಯುತ್ತದೆ. ಈ ಸಂಸ್ಕೃತಿಯ ಸಂಧ್ಯಾ ಜಾಗದಲ್ಲಿ ಸಹಬಾಳ್ವೆಯನ್ನು ಅರ್ಥಪೂರ್ಣವಾಗಿ ಕಟ್ಟಿ ಕೊಡುವ ಸಾಮರ್ಥ್ಯ ಕನ್ನಡಕ್ಕೆ ಇದೆ. ಜೊತೆಗೆ ರಾಜ್ಯದಲ್ಲಿ ಕನ್ನಡದಲ್ಲಿ ವೈವಿಧ್ಯಮಯ ಭಾಷೆಗಳಿದ್ದು ಅದನ್ನು ಅರಿತು ಬೊಧಕರು ಬೋಧಿಸಬೇಕು ಎಂದು ಹೇಳಿದರು.

ದಸಾಪ ನುಡಿ ಉತ್ಸವ ಸಮಿತಿ ಅಧ್ಯಕ್ಷ ಅರ್ಜುನ್ ಮೌರ್ಯ ಪ್ರಾಸ್ತಾವಿಕ ನುಡಿಯನ್ನಾಡಿದರು. ಕಾವೇರಿ ವಿದ್ಯಾಸಂಸ್ಥೆ ಗೋಣಿಕೊಪ್ಪ ಕಾರ್ಯದರ್ಶಿ ಕೆ.ಪಿ. ಬೋಪಣ್ಣ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯಲ್ಲಿ ಕಾವೇರಿ ಪದವಿ ಕಾಲೇಜಿನ ಪ್ರಾಂಶುಪಾಲೆ ಡಾ.ಕೆ.ಜಿ.ವೀಣಾ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳ ಭವಿಷ್ಯ ರೂಪಿಸಲು ಕಾರ್ಯಪ್ಪ ಕಾಲೇಜು ವೇದಿಕೆ


ಕುಲಪತಿ ಪ್ರೊ. ಅಶೋಕ್ ಸಂಗಪ್ಪ ಆಲೂರ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ವಾರ್ಷಿಕೋತ್ಸವವನ್ನು ಉದ್ಘಾಟಿಸಿದರು.

ಮಡಿಕೇರಿ, ಮೇ 26–ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ತನ್ನ 77 ವರ್ಷಗಳ ಸುದೀರ್ಘ ಸೇವೆಯಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಭವಿಷ್ಯ ರೂಪಿಸಿದೆ ಎಂದು ಕೊಡಗು ವಿವಿ ಕುಲಪತಿ ಪ್ರೋ.ಅಶೋಕ್ ಸಂಗಪ್ಪ ಆಲೂರ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾಲೇಜಿನ ವಾರ್ಷಿಕೋತ್ಸವ, ಕ್ರೀಡೆ ಮತ್ತು ಪ್ರತಿಭೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂತಹ ಮಹಾನ್ ಕಾಲೇಜನ್ನು ಮತ್ತಷ್ಟು ಉತ್ತುಂಗಕ್ಕೆ ಕೊಂಡೊಯ್ಯುವ ಕೆಲಸವನ್ನು ಬೋಧಕ ವರ್ಗ ಮತ್ತು ವಿದ್ಯಾರ್ಥಿಗಳು ನಿರಂತರವಾಗಿ ಮಾಡಬೇಕು ಎಂದು ಸಲಹೆ ನೀಡಿದರು. ವಿದ್ಯಾರ್ಥಿಗಳ ಅನುಕೂಲಕ್ಕೆ ತಕ್ಕಂತೆ ಕಾಲೇಜಿನ ಅಭಿವೃದ್ಧಿಗೆ ಎಲ್ಲಾ ರೀತಿಯ ಸಹಾಯ, ಸಹಕಾರ ನೀಡಲಾಗುತ್ತದೆ ಎಂದು ಭರವಸೆ ನೀಡಿದರು.

ಹಿರಿಯ ಪತ್ರಕರ್ತ ಜಿ.ವಿ.ರವಿಕುಮಾರ್ ಮಾತನಾಡಿ, ವಿದ್ಯಾರ್ಥಿಗಳಿಗೆ ಗುರಿ ಮತ್ತು ಪರಿಶ್ರಮ ಅತಿ ಮುಖ್ಯ. ಸೋಮಾರಿತನ ಬಿಟ್ಟು ಸಮಾಜದ ತಿಳುವಳಿಕೆ ಹೊಂದಬೇಕು. ವಿದ್ಯಾರ್ಥಿ ಶಕ್ತಿಯೇ ದೇಶದ ಶಕ್ತಿ ಎಂಬುದನ್ನು ಮನಗಾಣಬೇಕು. ಸಮಯ ಬಹಳ ಮುಖ್ಯವಾಗಿದ್ದು ಬದುಕಲ್ಲಿ ಇದನ್ನು ಅಳವಡಿಸಿಕೊಳ್ಳಬೇಕು. ಪ್ರತಿ ವಿಷಯವನ್ನು ಅಧ್ಯಯನ ಮಾಡಬೇಕು. ಯಾವ ವಿಷಯದ ಬಗ್ಗೆಯೂ ಕೀಳರಿಮೆ ಸಲ್ಲದು ಎಂದು ಕಿವಿಮಾತು ಹೇಳಿದರು.

ಕೆನರಾ ಬ್ಯಾಂಕ್‌ನ ಪ್ರಾದೇಶಿಕ ವ್ಯವಸ್ಥಾಪಕ ವಿನಾಯಕ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಜೆ.ರಾಕೇಶ್, ಕಾಲೇಜು ಹಳೇ ವಿದಾರ್ಥಿ ಸಂಘದ ಅಧ್ಯಕ್ಷ ಬೊಳ್ಳಜ್ಜಿರ ಅಯ್ಯಪ್ಪ ಕಾಲೇಜು ಪ್ರಾಂಶುಪಾಲ ಮೇಜರ್ ಪ್ರೊ.ಬಿ.ರಾಘವ ಮಾತನಾಡಿದರು.

ಶೈಕ್ಷಣಿಕ ಸಾಧನೆಗಾಗಿ ವಿದ್ಯಾರ್ಥಿಗಳಿಗೆ ದತ್ತಿ ನಿಧಿ ಪ್ರತಿಭಾ ಪುರಸ್ಕಾರ, ಎನ್‌ಸಿಸಿ, ಎನ್‌ಎಸ್‌ಎಸ್ ಹಾಗೂ ಕ್ರೀಡೆಯಲ್ಲಿ ಕಾಲೇಜನ್ನು ಪ್ರತಿನಿಧಿಸಿ ಗೌರವಕ್ಕೆ ಪಾತ್ರರಾದವರಿಗೆ ಗಣ್ಯರು ಪ್ರೋತ್ಸಾಹ ಧನ, ನೆನಪಿನ ಕಾಣಿಕೆ ಮತ್ತು ಪ್ರಮಾಣ ಪತ್ರಗಳನ್ನು ನೀಡಿದರು. ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಂಡು ವಿಜೇತರಾದ ವಿದ್ಯಾರ್ಥಿಗಳಿಗೆ ಗಣ್ಯರು ಬಹುಮಾನಗಳನ್ನು ವಿತರಿಸಿದರು. ಕಾಲೇಜು ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು, ಪೋಷಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಗೊಲ್ಲ ಸಮಾಜದ ಕ್ರಿಕೆಟ್ ಟೂರ್ನಿ

ಅಯ್ಯಂಗೇರಿ ಬಿದ್ದಿಯಂಡ ತಂಡ ಚಾಂಪಿಯನ್


ಕ್ರಿಕೆಟ್ ಟೂರ್ನಿಯ ಅಯ್ಯಂಗೇರಿಯ ಬಿದ್ದಿಯಂಡ ತಂಡ ಚಾಂಪಿಯನ್.

ನಾಪೋಕ್ಲು: ಜಿಲ್ಲಾ ಗೊಲ್ಲ ಸಮಾಜದ ವತಿಯಿಂದ ಜನಾಂಗ ಬಾಂಧವರಿಗಾಗಿ ಆಯೋಜಿಸಲಾಗಿದ್ದ ಕ್ರಿಕೆಟ್ ಟೂರ್ನಿಯ ಅಂತಿಮ ಪಂದ್ಯದಲ್ಲಿ ಅಯ್ಯಂಗೇರಿಯ ಬಿದ್ದಿಯಂಡ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು. ಮಡಿಕೇರಿ ನಾಡ್ ಅರೆಯಂಡ ತಂಡ ರನ್ನರ್ ಅಪ್ ಪ್ರಶಸ್ತಿ ಗಳಿಸಿತು.

ಪುರುಷರ ವಿಭಾಗದ ಹಗ್ಗ ಜಗ್ಗಾಟ ಸ್ಪರ್ಧೆಯಲ್ಲಿ ಪೇರೂರಿನ ಕೋಡಿಯಂಡ ತಂಡ ಚಾಂಪಿಯನ್ ಆಯಿತು. ಅಯ್ಯಂಗೇರಿಯ ಆಚಿರ ತಂಡ ದ್ವಿತೀಯ ಸ್ಥಾನಕ್ಕೆ ತೃಪ್ತಿ ಪಟ್ಟುಕೊಂಡಿತು. ಮಹಿಳಾ ವಿಭಾಗದ ಹಗ್ಗಜಗ್ಗಾಟ ಸ್ಪರ್ಧೆಯಲ್ಲಿ ಕಕ್ಕಬ್ಬೆಯ ಕೈಬುಲಿರ ತಂಡ ಚಾಂಪಿಯನ್ ಆದರೆ ಅಯ್ಯಂಗೇರಿಯ ಬಿದ್ದಿಯಂಡ ರನ್ನರ್ ಅಪ್ ಪ್ರಶಸ್ತಿ ಗಳಿಸಿತು.

ಇಲ್ಲಿನ ಜನರಲ್ ಕೆ.ಎಸ್.ತಿಮ್ಮಯ್ಯ ಕ್ರೀಡಾಂಗಣದಲ್ಲಿ ಎರಡು ದಿನಗಳ ಕಾಲ ಆಯೋಜಿಸಲಾಗಿದ್ದ ವಾರ್ಷಿಕ ಕ್ರೀಡಾಕೂಟದಲ್ಲಿ ಪುರುಷರಿಗೆ ಕ್ರಿಕೆಟ್ ಟೂರ್ನಿ, ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಹಗ್ಗ ಜಗ್ಗಾಟ ಹಾಗೂ ಶಾಲಾ ಮಕ್ಕಳಿಗೆ ಆಟೋಟ ಸ್ಪರ್ಧೆಗಳು ನಡೆದವು.

ಜಿಲ್ಲಾ ಗೊಲ್ಲ ಸಮಾಜದ ಅಧ್ಯಕ್ಷ ಅರೆಯಂಡ ರಘು ಭೀಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಮೇಚಿರ ಸುಭಾಷ್ ನಾಣಯ್ಯ ಮಾತ ನಾಡಿ, ಸಮುದಾಯದ ಚಟುವಟಿಕೆಗಳಲ್ಲಿ ಎಲ್ಲರೂ ಪಾಲ್ಗೊಂಡಾಗ ಸಂಘಟನೆ ಬಲವಾಗುತ್ತದೆ. ಸಮಾಜದಲ್ಲಿ ಸಾಮರಸ್ಯ ಮೂಡುತ್ತದೆ ಎಂದರು.

ಜಿಲ್ಲಾ ಗೊಲ್ಲ ಸಮಾಜದ, ಉಪಾಧ್ಯಕ್ಷ ಧನರಾಜ ಗಣಪತಿ, ಕಾರ್ಯದರ್ಶಿ ಚೋಕಿರ ವಾಸುದೇವ, ಖಜಾಂಚಿ ಚೋಕಿರ ಬಾಬಿ ಭೀಮಯ್ಯ ಸಹಕಾರ್ಯದರ್ಶಿ ಕೈಬುಲಿರ ಮೀನಾ, ಕ್ರೀಡಾ ಸಮಿತಿಯ ಅಧ್ಯಕ್ಷ ತುತ್ತಿಯಂಡ ಅಜಂತ ನಾಣಯ್ಯ ಸದಸ್ಯರು ಉಪಸ್ಥಿತರಿದ್ದರು.

ಕೊಡವ ಯೋಧರಿಗೆ ಸಿಎನ್‌ಸಿ ಗೌರವ ಅರ್ಪಣೆ



ಮಡಿಕೇರಿ, ಮೇ 26–ದೇವಟ್ ಪರಂಬ್‌ನಲ್ಲಿ ವಂಚನೆಯಿಂದ ಹತ್ಯೆಗೊಳಗಾದ ಕೊಡವ ಯೋಧರಿಗೆ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಗೌರವ ಅರ್ಪಿಸಿತು. ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ದೇವಟ್ ಪರಂಬುವಿಗೆ ಭೇಟಿ ನೀಡಿದ ಪ್ರಮುಖರು ಹಿರಿಯರಿಗೆ ಪುಷ್ಪ ನಮನ ಸಲ್ಲಿಸಿ ಇತಿಹಾಸದ ದುರ್ಘಟನೆಗೆ ವಿಷಾದ ವ್ಯಕ್ತಪಡಿಸಿದರು.

ದೇವಟ್‌ಪರಂಬ್‌ನಲ್ಲಿ ಅಂತರರಾಷ್ಟ್ರೀಯ ದುರಂತ ಸ್ಮಾರಕವನ್ನು ನಿರ್ಮಿಸಬೇಕು. ಕೊಡವ ಜನಾಂಗೀಯ ಹತ್ಯೆಯನ್ನು ಯುಎನ್‌ಒ ಅಂತರರಾಷ್ಟ್ರೀಯ ದುರಂತ ಸ್ಮರಣಾರ್ಥ ಪಟ್ಟಿಯಲ್ಲಿ ಸೇರಿಸಬೇಕು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ಒತ್ತಾಯಿಸಿದರು.

ಕ್ಷೇತ್ರದ ಅಭಿವೃದ್ಧಿಗೆ 500 ಕೋಟಿ ಅನುದಾನ ಬಳಕೆ

ಸಂವಾದದಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ


ಶಾಸಕ ಎ.ಆರ್. ಕೃಷ್ಣಮೂರ್ತಿ ಮಂಗಳವಾರ ಪತ್ರಿಕಾ ಸಂವಾದದಲ್ಲಿ ಮಾತನಾಡಿದರು.

ನಾನು ಸಚಿವ ಸ್ಥಾನದ ಆಕಾಂಕ್ಷಿ

ಶಾಸಕನಾಗಿ ಸಾಕಷ್ಟು ಅನುಭವ ಹೊಂದಿರುವ ನಾನು ಕೂಡ ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದೇನೆ ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ತಿಳಿಸಿದರು.

ಜಿಲ್ಲೆಯುಲ್ಲಿ ಪರಿಶಿಷ್ಟರಿಗೆ ಹೆಚ್ಚಿನ ಅವಧಿಯಲ್ಲಿ ಸಚಿವ ಸ್ಥಾನ ದೊರಕಿಲ್ಲ. ಇದಲ್ಲದೇ ರಾಜ್ಯ 224 ವಿಧಾನಸಭಾ ಕ್ಷೇತ್ರಗಳಲ್ಲಿ ಅತಿ ಹೆಚ್ಚು ಮತ ಪಡೆದ ಶಾಸಕರ ಪೈಕಿ ನಾನು 5ನೇ ಸ್ಥಾನದಲ್ಲಿದ್ದೇನೆ. ಮೀಸಲು ಕ್ಷೇತ್ರದಲ್ಲಿ ನಾನೇ ಮೊದಲಿಗನು. ಮೂರು ಬಾರಿ ಶಾಸಕನಾಗಿ ಸಾಕಷ್ಟು ಅನುಭವ ಹೊಂದಿದ್ದೇನೆ. ಹೀಗಾಗಿ ನಾನು ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದೇನೆ ಎಂದರು.

ಪುಟ್ಟರಂಗಶೆಟ್ಟರಿಗೆ ಸಚಿವ ಸ್ಥಾನ ನೀಡಬೇಡಿ ಎನ್ನುವುದಿಲ್ಲ. ಒಂದೇ ಜಿಲ್ಲೆಗೆ ಎರಡ್ಮೂರು ಮಂದಿಗೆ ಸಚಿವ ಸ್ಥಾನ ನೀಡಿರುವ ಉದಾಹರಣೆಗಳಿವೆ. ಸಚಿವ ಮಹದೇವಪ್ಪ ಅವರನ್ನು ಮುಂದುವರಿಸಲಿ ಈ ಬಗ್ಗೆ ನನ್ನ ಯಾವುದೇ ತಕಾರರು ಇಲ್ಲ. ಆದರೆ, ನನಗೂ ಸಚಿವ ಸ್ಥಾನ ನೀಡಬೇಕು ಎಂದು ಪಕ್ಷದ ವರಿಷ್ಠರಲ್ಲಿ ಮನವಿ ಮಾಡುತ್ತೇನೆ ಎಂದು ಹೇಳಿದರು.

ಚಾಮರಾಜನಗರ, ಮೇ 26–ಶಾಸಕನಾಗಿ ಆಯ್ಕೆಯಾದ ನಂತರ ಕೊಳ್ಳೇಗಾಲ ಕ್ಷೇತ್ರದಲ್ಲಿ ಸುಮಾರು 500 ಕೋಟಿ ಅನುದಾನದಡಿ ಹಲವು ಅಭಿವೃದ್ಧಿ ಕೆಲಸಗಳನ್ನು ಮಾಡಿರುವುದಾಗಿ ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದ್ದಾರೆ.

ರಾಜ್ಯ ಸರ್ಕಾರ ಚುನಾವಣಾ ಪೂರ್ವದಲ್ಲಿ ತನ್ನ ಪ್ರಣಾಳಿಕೆಯುಲ್ಲಿ ತಿಳಿಸಿದ 5 ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸುವ ಮೂಲಕ ವಿರೋಧ ಪಕ್ಷಗಳ ಟೀಕೆಗೆ ತಕ್ಕ ಉತ್ತರ ನೀಡಿದೆ. ಈ ಯೋಜನೆಗಳನ್ನು ದೇಶ ಬಹುತೇಕ ಎಲ್ಲಾ ರಾಜ್ಯಗಳಲ್ಲಿಯೂ ಜಾರಿಗೊಳಿಸಲಾಗಿದೆ. ಕೊಳ್ಳೇಗಾಲ ಕ್ಷೇತ್ರದಲ್ಲಿಯೂ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಲಾಗಿದ್ದು, ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಜಿಲ್ಲೆಗೆ ವಿಶೇಷ ಅನುದಾನ ನೀಡಲಾಗಿದೆ. ಹನೂರು ಕ್ಷೇತ್ರದಲ್ಲಿ ವಿರೋಧ ಪಕ್ಷದ ಶಾಸಕರು ಆಯ್ಕೆಯಾಗಿದ್ದರು. ಆ ಭಾಗದ ಕುಡಿಯುವ ನೀರಿನ ಯೋಜನೆಗಾಗಿ 490 ಕೋಟಿ ಅನುದಾನ ನೀಡಿದೆ ಎಂದು ಪತ್ರಿಕಾ ಸಂವಾದದಲ್ಲಿ ತಿಳಿಸಿದರು.

ಜಾರಿಗೊಂಡ ಅಭಿವೃದ್ಧಿ ಯೋಜನೆಗಳು: ಯಳಂದೂರಿನಲ್ಲಿ ಸುಮಾರು 33 ಕೋಟಿ ವೆಚ್ಚದಡಿ 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ನಿರ್ಮಾಣ ಮಾಡಲಾಗಿದ್ದು, ಇನ್ನೂ ಎರಡ್ಮೂರು ತಿಂಗಳಲ್ಲಿ ಉದ್ಘಾಟಿಸಲು ಸಿದ್ಧತೆ ನಡೆಸಲಾಗಿದೆ. ಕೊಳ್ಳೇಗಾಲದಲ್ಲಿ 250 ಹಾಸಿಗೆ ಸಾಮರ್ಥ್ಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ಅನುಮೋದನೆ ದೊರಕಿದ್ದು, ಮೊದಲ ಹಂತದಲ್ಲಿ ಹೊರ ವಲಯದ ಮುಡಿಗುಂಡ ಬಳಿ ಸುಮಾರು 48 ಕೋಟಿ ವೆಚ್ಚದಡಿ 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ನಿರ್ಮಾಣ ಮಾಡಲಾಗುತ್ತಿದೆ. ಸಂತೇಮರಹಳ್ಳಿ ಮಾರುಕಟ್ಟೆಯಲ್ಲಿ 5 ಕೋಟಿ ವೆಚ್ಚದಡಿ ಎಳನೀರು ಮಾರುಕಟ್ಟೆ, ಕುದೇರು, ಗೌಡಹಳ್ಳಿ, ಗೂಳಿಪುರ ಗ್ರಾಮದಲ್ಲಿ ನೂತನ ಪಶು ಆಸ್ಪತ್ರೆ ನಿರ್ಮಾಣ, ಯಳಂದೂರು ಪ್ರಥಮ ದರ್ಜೆ ಕಾಲೇಜಿನ ಹೆಚ್ಚುವರಿ ಕಟ್ಟಡ ನಿರ್ಮಾಣಕ್ಕೆ 2.5 ಕೋಟಿ, ಸಂತೇಮರಹಳ್ಳಿ ಆರ್ಚರಿ ಶಾಲೆ ಅಭಿವೃದ್ಧಿಗೆ 2 ಕೋಟಿ ಅನುದಾನ, ಮದ್ದೂರು ಗ್ರಾಮದ ಸುವರ್ಣಾವತಿ ಜಲಾಶಯದ ಮೇಲ್ಭಾಗದ ಸೇತುವೆ ನಿರ್ಮಾಣಕ್ಕೆ 4 ಕೋಟಿ, ಮಹದೇಶ್ವರ ಕಾಲೇಜಿನಲ್ಲಿ 40ಲಕ್ಷ ವೆಚ್ಚದಡಿ ಸಿಂಥೆಟಿಕ್ ಬ್ಯಾಸ್ಕೆಟ್ ಬಾಲ್ ಕ್ರೀಡಾಂಗಣ, 50 ಶಾಲೆಗಳಿಗೆ ತಲಾ 1 ಲಕ್ಷ ವೆಚ್ಚದಡಿ ಶುದ್ಧ ಕುಡಿಯುವ ನೀರಿನ ಆರ್‌ಓ ಪ್ಲಾನೆಟ್ ಸ್ಥಾಪಿಸಲು ಕ್ರಮವಹಿಸಲಾಗಿದೆ ಎಂದರು.

ಮುಂದಿನ ಎರಡು ವರ್ಷದ ಯೋಜನೆ: ಸಣ್ಣ ನೀರಾವರಿ ಯೋಜನೆಗೆ 250ಕೋಟಿ, ಸಿಲ್ಕ್ ಪಾರ್ಕ್ ನಿರ್ಮಾಣ, ಕಾರ್ಮಿಕರ ಮಕ್ಕಳಿಗಾಗಿ ತಾಲೂಕಿನ ಟಗರಪುರ ಗ್ರಾಪಂ ವ್ಯಾಪ್ತಿಯಲ್ಲಿ ಶ್ರಮಿಕರ ವಸತಿ ಶಾಲೆ ನಿರ್ಮಾಣ, ಬಿಳಿಗಿರಿರಂಗನ ಬೆಟ್ಟದಲ್ಲಿ ಬಸ್ ನಿಲ್ದಾಣ ಸೇರಿದಂತೆ ಹಲವು ಅಭಿವೃದ್ಧಿ ಯೋಜನೆಗೆ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಸಂಘದ ಅಧ್ಯಕ್ಷ ಆರ್. ಎನ್.ಸಿದ್ಧಲಿಂಗ ಸ್ವಾಮಿ, ಪ್ರಧಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್ ಸಂವಾದದಲ್ಲಿ ಉಪಸ್ಥಿತರಿದ್ದರು.

2 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಹದ್ದು ರಕ್ಷಿಸಿದ ಅಗ್ನಿಶಾಮಕ ಸಿಬ್ಬಂದಿ


ರಕ್ಷಿಸಿದ ಹದ್ದನ್ನು ಚಿಕಿತ್ಸೆಗಾಗಿ ಅರಣ್ಯಾಧಿಕಾರಿಗಳಿಗೆ ಹಸ್ತಾಂತರಿಸುತ್ತಿರುವುದು.

ಕೊಳ್ಳೇಗಾಲ, ಮೇ 26(ನಾಗೇಂದ್ರ)–ಅರಳಿ ಮರದಲ್ಲಿ ಗಾಳಿಪಟದ ದಾರಕ್ಕೆ ಸಿಲುಕಿ ಜೀವ ಉಳಿಸಿಕೊಳ್ಳಲು ಹೆಣಗಾಡುತ್ತಿದ್ದ ವನ್ಯಜೀವಿ ಹದ್ದನ್ನು ಸುರಕ್ಷಿತವಾಗಿ ರಕ್ಷಿಸುವಲ್ಲಿ ಅಗ್ನಿಶಾಮಕ ಠಾಣಾಧಿಕಾರಿಗಳು ಯಶಸ್ವಿಯಾಗಿದ್ದಾರೆ.

ಪಟ್ಟಣದ ಶ್ರೀ ದೇವಾಂಗಪೇಟೆಯ ರಾಜರಾಜೇಶ್ವರಿ ಕಲ್ಯಾಣ ಮಂಟಪ ರಸ್ತೆಯಲ್ಲಿನ ಅರಳಿ ಮರವೊಂದರಲ್ಲಿ ತೂಗಾಡುತ್ತಿದ್ದ ಗಾಳಿಪಟದ ದಾರಕ್ಕೆ ಸಿಲುಕಿದ್ದ ಹದ್ದು ಜೀವ ಉಳಿಸಿಕೊಳ್ಳಲು ಒದ್ದಾಡುತ್ತಿತ್ತು. ಆ ಹದ್ದಿನ ರೋಧನೆ ಹಾಗೂ ದಾರವು ಅದರ ಕಾಲಿಗೆ ಸಿಕ್ಕಿಕೊಂಡಿರುವುದನ್ನು ಕಂಡ ಇತರೆ ಹದ್ದುಗಳು ಹಾಗೂ ಕೆಲ ಪಕ್ಷಿಗಳ ಅರಚಾಟ ಕೇಳಿ ಸಾರ್ವಜನಿಕರು ಕೂಡಲೇ ಅಗ್ನಿಶಾಮಕದಳದ ಗಮನಕ್ಕೆ ತಂದರು.

ತಕ್ಷಣವೇ ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ಸಿಬ್ಬಂದಿ ಸಮೀಪದಲ್ಲಿ ವಿದ್ಯುತ್ ಕಂಬ ಮರಕ್ಕೆ ಹೊಂದಿಕೊಂಡಿರುವುದನ್ನ ಕಂಡು ಚೆಸ್ಕಾಂ ಅಧಿಕಾರಿಗಳಿಗೆ ವಿಚಾರ ಮುಟ್ಟಿಸಿ, ಕೆಲಕಾಲ ವಿದ್ಯುತ್ ಸಂಪರ್ಕ ಕಡಿತಗೊಳಿಸುವಂತೆ ಮಾಡಿದರು. ಬಳಿಕ ಹದ್ದಿನ ಕಾಲಿಗೆ ಸುತ್ತಿಕೊಂಡಿದ್ದ ದಾರ ಕತ್ತರಿಸಿ ತೆಗೆದರು. ಬಳಿಕ ನಿತ್ರಾಣಗೊಂಡು ಗಾಯಗೊಂಡಿದ್ದ ಹದ್ದಿಗೆ ನೀರು ಕುಡಿಸಿ, ಮುಂದಿನ ಚಿಕಿತ್ಸೆಗಾಗಿ ಅರಣ್ಯಾಧಿಕಾರಿಗಳಿಗೆ ಹಸ್ತಾಂತರಿಸಿದ್ದಾರೆ.

ಹದ್ದಿನ ರಕ್ಷಣಾ ಕಾರ್ಯದಲ್ಲಿ ಚಾಮರಾಜನಗರ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಹರೀಶ್ ಕುಮಾರ್, ಕೊಳ್ಳೇಗಾಲ ಸಹಾಯಕ ಅಗ್ನಿಶಾಮಕ ಅಧಿಕಾರಿ ಸಿದ್ದಾರ್ಥ್, ಕೊಳ್ಳೇಗಾಲ ಅಗ್ನಿಶಾಮಕ ಠಾಣೆ ಪ್ರಮುಖರು ಚನ್ನಪ್ಪಶೆಟ್ಟಿ, ನಿಜಲಿಂಗ, ಚಂದ್ರಶೇಖರ ಆರಾಧ್ಯ, ಪ್ರದೀಪ್, ಶಾರೂಖ್ ಖಾನ್ ಹಾಗೂ ಸ್ಥಳೀಯ ನವೀನ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು. ಅಗ್ನಿಶಾಮಕ ಸಿಬ್ಬಂದಿ ಕಾರ್ಯವನ್ನು ವನ್ಯಜೀವಿ ಪರಿಪಾಲಕರು ಶ್ಲಾಘಿಸಿದರು

ಇಂದು ವಿವಿಧ ಹುದ್ದೆಗಳಿಗಾಗಿ ನೇರ ಸಂದರ್ಶನ

ಚಾಮರಾಜನಗರ: ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಹಾಗೂ ಮೈಸೂರಿನ ವಿ.ಜೆ.ಬಿ ಎಂಟರ್ ಪ್ರೈಸಸ್ ಸಹಯೋಗದೊಂದಿಗೆ ವಿವಿಧ ಹುದ್ದೆಗಳ ನೇಮಕಕ್ಕಾಗಿ ನೇರ ಸಂದರ್ಶನವನ್ನು ಮೇ 27ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಏರ್ಪಡಿಸಲಾಗಿದೆ.

ಆಸಕ್ತಿಯುಳ್ಳ ಅಭ್ಯರ್ಥಿಗಳು ತಮ್ಮ ಸ್ವ–ವಿವರ (ಬಯೋಡೇಟಾ) ಮತ್ತು ಅಂಕಪಟ್ಟಿಗಳ ಮೂಲ ಹಾಗೂ ಜೆರಾಕ್ಸ್ ಪ್ರತಿಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು.

ಹೆಚ್ಚಿನ ಮಾಹಿತಿಗಾಗಿ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಜಿಲ್ಲಾ ಉದ್ಯೋಗಾಧಿಕಾರಿಗಳ ಕಚೇರಿಯನ್ನು ಸಂಪರ್ಕಿಸಬಹುದು.

ಸಿಎಂ ಸ್ಥಾನ: ದಲಿತರಿಗೆ ಹೈಕಮಾಂಡ್ ವಂಚನೆ


ಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿಯವರನ್ನು ಬಿಜೆಪಿ ನಾಯಕರು ಸ್ವಾಗತಿಸಿದರು.

ಕೊಳ್ಳೇಗಾಲ, ಮೇ 26–ಕಾಂಗ್ರೆಸ್ ಪಕ್ಷ ಕಳೆದ ಐವತ್ತು ಅರವತ್ತು ವರ್ಷ ದುಡಿಸಿಕೊಂಡ ದಲಿತ ನಾಯಕರಿಗೆ ಮುಖ್ಯಮಂತ್ರಿ ಸ್ಥಾನ ನೀಡದೆ ವಂಚಿಸುತ್ತಿದೆ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಮೂದಲಿಸಿದ್ದಾರೆ.

50ವರ್ಷದಿಂದ ಪಕ್ಷಕ್ಕಾಗಿ ದುಡಿದು ದಣಿದಿದ್ದೇನೆ ಅನ್ನುವ ದಲಿತ ನಾಯಕರು ಈ ಬಗ್ಗೆ ಪ್ರಶ್ನಿಸುತ್ತಿಲ್ಲ, ಇದನ್ನೆ ಬಂಡವಾಳ ಮಾಡಿಕೊಂಡಿರುವ ಕಾಂಗ್ರೆಸ್ ಹೈಕಮಾಂಡ್ ದಲಿತರ ಹೆಸರೇಳಿಕೊಂಡು ಓಟ್ ಪಡೆದು ವಂಚಿಸುವ ಕೆಲಸ ಮಾಡುತ್ತಿದೆ ಎಂದು ಸುದ್ದಿಗೋಷ್ಠಿಯಲ್ಲಿ ವಿಡಂಬಿಸಿದರು.

ಕಾಂಗ್ರೆಸ್ ಹೈಕಮಾಂಡ್ ಎಂಬುದು ಡೆಡ್‌ಬಾಡಿ ಇದ್ದಂತಾಗಿದೆ. ಇದಕ್ಕೆ ಉದಾಹರಣೆ ಕೇರಳದಲ್ಲಿ ವೇಣುಗೋಪಾಲ್ ಸಿಎಂ ಮಾಡಲಾಗದ್ದು, ಇನ್ನು ಸಿದ್ದರಾಮಯ್ಯ ಅವರನ್ನು ಕುರ್ಚಿಯಿಂದ ಕೆಳಗಿಳಿಸುವ ತಾಕತ್ತು ಇಲ್ಲ, ಒಂದು ವೇಳೆ ಹೈಕಮಾಂಡ್‌ಗೆ ತಾಕತ್ತು ಇದೆ ಯೆಂದಾದರೆ ಸಿದ್ದರಾಮಯ್ಯ ಭವಿಷ್ಯ ಕೊನೆಗಾಣಲಿದೆ. ಆದರೆ ಅವರನ್ನು ಕೆಳಗಿಳಿಸುವ ತಾಕತ್ತು ಕಾಂಗ್ರೆಸ್ ಹೈಕಮಾಂಡಿಗೆ ಇಲ್ಲ ಅನಿಸುತ್ತಿದೆ ಎಂದು ವ್ಯಂಗ್ಯವಾಡಿದರು

ದಲಿತರ ಮತದಿಂದ 60ವರ್ಷಗಳ ಕಾಲ ಆಳ್ವಿಕೆ ನಡೆಸಿದ ಕಾಂಗ್ರೆಸ್ ಇನ್ನಾದರೂ ಮುಖ್ಯಮಂತ್ರಿ ಸ್ಥಾನ ನೀಡಿ, ದಲಿತರಿಗೆ ಕೊಟ್ಟ ಮಾತು ಉಳಿಸಿಕೊಳ್ಳಲಿ ಎಂದು ಆಗ್ರಹಿಸಿದರು

ಮಾಜಿ ಶಾಸಕ ಎಸ್.ಬಾಲರಾಜು, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಡಾ.ದತ್ತೇಶ್ ಕುಮಾರ್, ಬಿಜೆಪಿ ನಗರಮಂಡಲ ಅಧ್ಯಕ್ಷ ಬೂದಿತಿಟ್ಟು ಶಿವ ಕುಮಾರ್, ಕೆ.ಕೆ.ಮೂರ್ತಿ, ಚಂದು, ಮಧುಚಂದ್ರ ಸೋಮಣ್ಣ ಉಪ್ಪಾರ್, ಬೂದಿತಿಟ್ಟು ರಾಜೇಂದ್ರ ಇನ್ನಿತರರಿದ್ದರು.

ಕೇಂದ್ರ ಸರ್ಕಾರ ವಿರುದ್ಧ ಯುವ ಕಾಂಗ್ರೆಸ್ ಪ್ರತಿಭಟನೆ



ಯುವ ಕಾಂಗ್ರೆಸ್ ಕಾರ್ಯಕರ್ತರು ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು.

ಚಾಮರಾಜನಗರ, ಮೇ 26–ಕೇಂದ್ರ ಸರ್ಕಾರ ಪದೇ ಪದೇ ಇಂಧನದ ಬೆಲೆ ಏರಿಸುತ್ತಿರುವುದು, ನೀಟ್ ಪರೀಕ್ಷೆಯಲ್ಲಿ ಅಕ್ರಮ ನಡೆಸಿ, ವಿದ್ಯಾರ್ಥಿಗಳ ಜೀವನದಲ್ಲಿ ಚೆಲ್ಲಾಟವಾಡಿರುವ ಬಿಜೆಪಿ ಸರ್ಕಾರದ ವಿರುದ್ದ ನಗರದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.


ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಯುವ ಕಾಂಗ್ರೆಸ್ ಅಧ್ಯಕ್ಷ ಅಕ್ಷಯ್ ಹಾಗೂ ಗ್ರಾಮಾಂತರ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸಶೆಟ್ಟಿ ನೇತೃತ್ವದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಸಮಾವೇಶಗೊಂಡು ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತದಲ್ಲಿ ಕೆಲ ಕಾಲ ರಸ್ತೆತಡೆ ನಡೆಸಿ, ಕೇಂದ್ರ ಸರ್ಕಾರ ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಷಾ, ಉನ್ನತ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ವಿರುದ್ದ ಘೋಷಣೆ ಕೂಗಿದರು.

ಬಿಜೆಪಿ ಪಕ್ಷ ಬೆಲೆ ಏರಿಕೆಯನ್ನು ತಡೆಯುತ್ತೇವೆ. ಇಂಧನ ದರ ಇಳಿಕೆ ಮಾಡುತ್ತೇವೆ ಎಂದು ಸುಳ್ಳು ಹೇಳಿಕೊಂಡು ದೇಶದಲ್ಲಿ ಅಧಿಕಾರಕ್ಕೆ ಬಂತು. ಅಲ್ಲಿಂದ ಬಡವರು, ಮಧ್ಯ ವರ್ಗದವರನ್ನು ಸುಲಿಗೆ ಮಾಡುತ್ತಿವೆ. ಮಧ್ಯ ಪ್ರಾಚ್ಯ ದೇಶದಲ್ಲಿ ಯುದ್ದ ನಡೆಯುತ್ತಿದೆ ಎಂಬ ನೆಪ ಮಾಡಿಕೊಂಡು ದೇಶದಲ್ಲಿ ಪದೇ ಪದೇ ಇಂಧನ ದರವನ್ನು ಏರಿಕೆ ಮಾಡಿರುವುದು ಸರಿಯಲ್ಲ. ಈ ಕೂಡಲೇ ಕೇಂದ್ರ ಸರ್ಕಾರ ಬೆಲೆ ಏರಿಕೆಯನ್ನು ನಿಯಂತ್ರಿಸಬೇಕು ಎಂದು ಅಧ್ಯಕ್ಷ ಅಕ್ಷಯ್ ಒತ್ತಾಯಿಸಿದರು.

ಗ್ರಾಮಾಂತರ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸಶೆಟ್ಟಿ ಮಾತನಾಡಿ, ಕೇಂದ್ರ ಸರ್ಕಾರ ನೀಟ್ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆಯನ್ನು ಸೋರಿಕೆ ಮಾಡಿ, ಭಾರಿ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಸಿದೆ. ಇದರಿಂದ ಲಕ್ಷಾಂತರ ಮಂದಿ ವಿದ್ಯಾರ್ಥಿಗಳ ಬದುಕು ಬೀದಿಗೆ ಬಂದು ಅನೇಕ ವಿದ್ಯಾರ್ಥಿಗಳು ಅತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರ ನೈತಿಕ ಹೊಣೆ ಹೊತ್ತು ಉನ್ನತ ಶಿಕ್ಷಣ ಸಚಿವರು ರಾಜೀನಾಮೆ ನೀಡುವಂತೆ ಒತ್ತಾಯಿಸಿದರು.

ಮಹಿಳಾ ಅಧ್ಯಕ್ಷೆ ನಾಗರತ್ನ ಕೆಂಗಾಕಿ, ಕಿರಣ್ ಗಿಡ್ಡಯ್ಯ, ಸೈಯದ್ ಇಸ್ಮಾಯಿಲ್, ಸಂಜಯ್, ಅನಂತ್ ಕುಮಾರ್, ನಲ್ಲೂರು ಮನು, ನಲ್ಲೂರು ಮೋಳೆ ಚಂದ್ರು ಶಶಾಂಕ್, ಮುತ್ತು ರಾಮು ಮೊದಲಾದವರಿದ್ದರು.

ಶಾಸಕರಿಂದ ಗೋಪುರ ಕಾಮಗಾರಿ ವೀಕ್ಷಣೆ



ಚಾಮರಾಜನಗರ, ಮೇ 26–ಹರದನಹಳ್ಳಿ ಗ್ರಾಮದಲ್ಲಿರುವ ದಿವ್ಯಲಿಂಗೇಶ್ವರ ದೇವಸ್ಥಾನದಲ್ಲಿ 3.62ಕೋಟಿ ವೆಚ್ಚದಲ್ಲಿ ನಡೆಯುತ್ತಿರುವ ಗೋಪುರ ನಿರ್ಮಾಣ ಕಾಮಗಾರಿಯನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ವೀಕ್ಷಿಸಿದರು.

ಪುರಾತನ ದೇವಾಲಯವಾಗಿರುವ ಹರದನಹಳ್ಳಿಯಲ್ಲಿರುವ ದಿವ್ಯಲಿಂಗೇಶ್ವರ ದೇವಸ್ಥಾನದ ಗೋಪುರ ಮುರಿದು ಬಿದ್ದಿದ್ದು, ಇದರ ಪುನರ್ ನಿರ್ಮಾಣಕ್ಕೆ ಮುಖ್ಯಮಂತ್ರಿಗಳ ಸಿಎಸ್ ಅನುದಾನದಡಿಯಲ್ಲಿ 3.62 ಕೋಟಿ ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲಾಗಿದೆ. ಕಾಮಗಾರಿಗೆ ಪೂರ್ಣಗೊಳಿಸಲು ಮತ್ತಷ್ಟು ಹಣದ ಅವಶ್ಯಕತೆ ಇದೆ. ಇದಕ್ಕಾಗಿ ಹಲವಾರು ದಾನಿಗಳು, ಭಕ್ತಾದಿಗಳೂ ಕೂಡ ಹಣದ ನೆರವು ನೀಡಲಿದ್ದಾರೆ ಎಂದರು.

ಹರದನಹಳ್ಳಿ ಗಡಿ ಯಜಮಾನರಾದ ಜಯಸ್ವಾಮಿ, ಗ್ರಾ. ಪಂ. ಮಾಜಿ ಅಧ್ಯಕ್ಷ ಮಂಜುನಾಥ್ ಮೊದಲಾದವರು ಶಾಸಕರೊಂದಿಗಿದ್ದರು.

ದಯಾನಂದ ನಿಧನ



ಕೊಳ್ಳೇಗಾಲ, ಮೇ 26–ಪಟ್ಟಣದ ಭೀಮ ನಗರದ ನಿವಾಸಿ ದಯಾನಂದ (57) ಹೃದಯಾಘಾತದಿಂದ ಮಂಗಳವಾರ ತಲಕಾಡಿನಲ್ಲಿ ನಿಧನರಾದರು.

ತಲಕಾಡಿನಲ್ಲಿ ನೀರಿನ ಟ್ಯಾಂಕ್ ಕೆಲಸದಲ್ಲಿ ನಿರತರಾಗಿದ್ದ ವೇಳೆ ತೀವ್ರ ಹೃದಯಾಘಾತಕ್ಕೊಳಗಾಗಿದ್ದಾರೆ. ಮೃತರು ಪತ್ನಿ ಕೋಮಲ ಮತ್ತು ಓರ್ವ ಪುತ್ರಿ, ಪುತ್ರ ಮತ್ತು ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಸಂಸ್ಕಾರವು ನಗರದ ಮಹದೇಶ್ವರ ಕಾಲೇಜು ಬಳಿ ಇರುವ ಕ್ರೈಸ್ತರ ಸಮಾಧಿಯಲ್ಲಿ ನಾಳೆ(ಬುಧವಾರ) ಕ್ರಿಶ್ಚಿಯನ್ ಸಂಪ್ರದಾಯದಂತೆ ಮಧ್ಯಾಹ್ನ 12 ಗಂಟೆಗೆ ನೆರವೇರಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ ಬುಧವಾರ 27 ಮೇ 2026

ವೃತ್ತಿಪರ ಕೋರ್ಸ್ ದಾಖಲಾತಿ ವೇಳೆ ಹೆಚ್ಚು ಶುಲ್ಕಕ್ಕೆ ಬೇಡಿಕೆ ಇಟ್ಟರೆ ದೂರು ಸಲ್ಲಿಸಿ: ನ್ಯಾ.ಬಿ.ಶ್ರೀನಿವಾಸಗೌಡ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳಿಗೆ ಸರ್ಕಾರಿ ಕೋಟಾದ ಸೀಟುಗಳ ಪ್ರವೇಶ ಸಂದರ್ಭದಲ್ಲಿ ಸರ್ಕಾರ ನಿಗದಿಪಡಿಸಿರುವ ಶುಲ್ಕ ಮತ್ತು ಇತರೇ ಶುಲ್ಕವನ್ನು ಹೊರತುಪಡಿಸಿ, ಹೆಚ್ಚಿನ ಶುಲ್ಕಕ್ಕೆ ಬೇಡಿಕೆ ಇಟ್ಟ ಪಕ್ಷದಲ್ಲಿ ಅಂತಹ ಸಂಸ್ಥೆಗಳ ವಿರುದ್ಧ ನೊಂದ ವಿದ್ಯಾರ್ಥಿಗಳು ಶುಲ್ಕ ನಿಯಂತ್ರಣ ಸಮಿತಿಗೆ ದೂರು ನೀಡಬಹುದು ಎಂದು ಸಮಿತಿಯ ಅಧ್ಯಕ್ಷ ನ್ಯಾಯಮೂರ್ತಿ ಬಿ.ಶ್ರೀನಿವಾಸಗೌಡ ಅವರು ತಿಳಿಸಿದ್ದಾರೆ.

ಬೆಂಗಳೂರಿನ ಮಲ್ಲೇಶ್ವರದ 18ನೇ ಅಡ್ಡರಸ್ತೆಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರ(ಕೆಇಎ) ನೆಲಮಹಡಿಯಲ್ಲಿ ಸಮಿತಿಯ ಕಚೇರಿ ಇದೆ ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಮುಂದೆ ಪ್ರವೇಶ ಬಯಸುವ ಹಾಗೂ ಈಗಾಗಲೇ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಕೂಡ ಈ ರೀತಿಯ ಸಮಸ್ಯೆ ಎದುರಿಸುತ್ತಿದ್ದರೆ ದೂರು ಸಲ್ಲಿಸಬಹುದು ಎಂದು ಅವರು ಸಲಹೆ ನೀಡಿದ್ದಾರೆ.

ಸತತ 4ನೇ ಬಾರಿ ಸಿಎನ್‌ಜಿ ದರ ಏರಿಕೆ: ಕೆಜಿಗೆ 2 ರೂ. ಹೆಚ್ಚಳ

ನವದೆಹಲಿ: ಸಿಎನ್‌ಜಿ ಬಳಕೆದಾರರಿಗೆ ಮತ್ತೊಮ್ಮೆ ಬೆಲೆ ಏರಿಕೆಯ ಹೊರೆ ಬಿದ್ದಿದೆ. ಮೇ 26ರ ಬೆಳಗ್ಗೆ 6 ಗಂಟೆಯಿಂದ ಜಾರಿಗೆ ಬರುವಂತೆ ದೆಹಲಿಯಲ್ಲಿ ಸಂಕುಚಿತ ನೈಸರ್ಗಿಕ ಅನಿಲ ದರವನ್ನು ಕೆಜಿಗೆ 2 ರೂ. ಹೆಚ್ಚಿಸಲಾಗಿದೆ.

ಈ ಪರಿಷ್ಕರಣೆಯೊಂದಿಗೆ ರಾಜಧಾನಿ ದೆಹಲಿಯಲ್ಲಿ ಸಿಎನ್‌ಜಿ ದರವು ಕೆಜಿಗೆ 83.09 ರೂ.ಗೆ ಏರಿಕೆಯಾಗಿದೆ. ಇದು ಕಳೆದ ಎರಡು ವಾರಗಳೊಳಗೆ ನಾಲ್ಕನೇ ಬಾರಿ ಬೆಲೆ ಏರಿಕೆಯಾಗಿದೆ. ಮೇ 15ರಿಂದ ಇಲ್ಲಿಯವರೆಗೆ ಒಟ್ಟು 5 ರೂ. ಪ್ರತಿ ಕೆಜಿಗೆ ಹೆಚ್ಚಳವಾಗಿದೆ. ಸಿಎನ್‌ಜಿ ಪೂರೈಕೆ ಸಂಸ್ಥೆಯಾದ ಇಂದ್ರಪ್ರಸ್ಥ ಗ್ಯಾಸ್ ಲಿಮಿಟೆಡ್ ಜಾಗತಿಕ ಇಂಧನ ವೆಚ್ಚದ ಏರಿಕೆಯ ಒತ್ತಡವನ್ನು ಗ್ರಾಹಕರಿಗೆ ವರ್ಗಾಯಿಸುತ್ತಿರುವ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ. ಮೇ 15ರಂದು 2 ರೂ., ಮೇ 17ರಂದು 1, ಮೇ 23ರಂದು 1 ಹಾಗೂ ಇದೀಗ ಮೇ 26ರಂದು ಮತ್ತೊಮ್ಮೆ 2 ರೂ. ಹೆಚ್ಚಳ ಮಾಡಲಾಗಿದೆ. ಕೇವಲ 11 ದಿನಗಳ ಅವಧಿಯಲ್ಲಿ ನಾಲ್ಕು ಬಾರಿ ದರ ಪರಿಷ್ಕರಣೆ ನಡೆದಿರುವುದು ಗ್ರಾಹಕರಿಗೆ ಶಾಕ್ ನೀಡಿದೆ.

ಕರ್ನಾಟಕ ವಿದ್ಯುತ್ ವಿತರಣೆ ಖಾಸಗೀಕರಣ?

15 ಜಿಲ್ಲೆಗಳ ವಿತರಣೆಗೆ ಅನುಮತಿ ಕೋರಿ ಕೆಇಆರ್‌ಸಿಗೆ ಟಾಟಾ ಅರ್ಜಿ; ಖಾಸಗೀಕರಣಕ್ಕೆ ನೌಕರರ ವಿರೋಧ

ಬೆಂಗಳೂರು, ಮೇ 26: ಖಾಸಗಿ ವಿದ್ಯುತ್ ಉತ್ಪಾದನೆ ಹಾಗೂ ವಿತರಣಾ ಕಂಪನಿಯಾದ 'ದಿ ಟಾಟಾ ಪವರ್ ಕಂಪೆನಿ ಲಿಮಿಟೆಡ್' ರಾಜ್ಯದ ಪ್ರಮುಖ 15ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ವಿದ್ಯುತ್ ವಿತರಣೆಗೆ ಪರವಾನಗಿ ಕೋರಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ)ಕ್ಕೆ ಅರ್ಜಿ ಸಲ್ಲಿಸಿದೆ.

ಇದನ್ನು ರಾಜ್ಯದಲ್ಲಿ ವಿದ್ಯುತ್ ವಿತರಣೆ ಖಾಸಗೀಕರಣದ ಪ್ರಥಮ ಹೆಜ್ಜೆ ಎಂದೇ ವ್ಯಾಖ್ಯಾನಿಸಲಾಗುತ್ತಿದ್ದು, ಸಾರ್ವಜನಿಕ ವಲಯದಲ್ಲಿ ತೀವ್ರ ಆತಂಕ ಸೃಷ್ಟಿಯಾಗಿದೆ.

2003ರ ವಿದ್ಯುತ್ ಕಾಯ್ದೆ ಸೆಕ್ಷನ್ 14 ಹಾಗೂ 15ರ ಅಡಿ ವಿದ್ಯುತ್ ವಿತರಣೆಗೆ ಪರವಾನಗಿ ಕೋರಿ ಕೆಇಆರ್‌ಸಿಗೆ ದಿ ಟಾಟಾ ಪವರ್ ಕಂಪನಿಯಿಂದ ಅರ್ಜಿ ಸಲ್ಲಿಕೆಯಾಗಿದೆ. ಈ ಸಂಬಂಧ ಸಾರ್ವಜನಿಕರಿಂದ ಆಕ್ಷೇಪಣೆ ಕೋರಿ ಪ್ರಕಟಣೆ ಹೊರಡಿಸಿದ್ದು, ಇದು ಖಾಸಗೀಕರಣದ ಷಡ್ಯಂತ್ರ ಎಂದು ಆರೋಪಿಸಲಾಗುತ್ತಿದೆ.

ಮೈಸೂರು ಸೇರಿ ಹಲವು ಜಿಲ್ಲೆಗಳ ಪಟ್ಟಿ: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು ಮತ್ತು ಚಿತ್ರದುರ್ಗ ಸೇರಿ ಆರು ಜಿಲ್ಲೆ, ಮೆಸ್ಕಾಂನ(ಮಂಗಳೂರು) ಕಂದಾಯ ಜಿಲ್ಲೆಗಳಾದ ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಉಡುಪಿ ವ್ಯಾಪ್ತಿಯ ಪ್ರದೇಶ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ(ಸೆಸ್ಕ್) ವ್ಯಾಪ್ತಿಯ ಮೈಸೂರು, ಚಾಮರಾಜನಗರ, ಹಾಸನ ಹಾಗೂ ಹೆಸ್ಕಾಂನ ಮೂರು ಕಂದಾಯ ಜಿಲ್ಲೆಗಳಾದ ಬೆಳಗಾವಿ, ಉತ್ತರ ಕನ್ನಡ ಮತ್ತು ಧಾರವಾಡ ವ್ಯಾಪ್ತಿಯಲ್ಲಿ ವಿದ್ಯುತ್ ವಿತರಣೆಗೆ ಪರವಾನಗಿ ಕೋರಲಾಗಿದೆ.

ಈಗಾಗಲೇ ಟಾಟಾ ಪವರ್ ಕಂಪನಿ ಮುಂಬೈ, ಅಜ್ಮೇರ್ ನಗರಗಳು ಹಾಗೂ ದೆಹಲಿ, ಒಡಿಶಾ ರಾಜ್ಯಗಳ ಗ್ರಾಹಕರಿಗೆ ವಿದ್ಯುತ್ ಪೂರೈಸುತ್ತಿದೆ. ಟಾಟಾ ಪವರ್ ಡಿಸ್ಟ್ರಿಬ್ಯೂಷನ್–ಮುಂಬೈ ಸಂಸ್ಥೆಯು 485 ಚ.ಕಿ.ಮೀ. ವ್ಯಾಪ್ತಿಯಲ್ಲಿ 8 ಲಕ್ಷದಷ್ಟು ಗ್ರಾಹಕರನ್ನು ಹೊಂದಿದೆ. ಈ ಅನುಭವದ ಆಧಾರದ ಮೇಲೆ ರಾಜ್ಯದಲ್ಲೂ ವಿದ್ಯುತ್ ವಿತರಣೆಗೆ ಮುಂದಾಗಿದ್ದು, ಆಕ್ಷೇಪಣೆ ವ್ಯಕ್ತವಾಗದಿದ್ದರೆ ಪರವಾನಗಿಯೂ ಸಿಗುವ ಸಾಧ್ಯತೆಯಿದೆ ಎನ್ನಲಾಗಿದೆ. ಇಂಧನ ಇಲಾಖೆಯೂ ವಿದ್ಯುತ್ ವಿತರಣಾ ಕಂಪನಿಗಳಲ್ಲಿನ ಪ್ರಸರಣ ನಷ್ಟ ಮತ್ತು ಆರ್ಥಿಕ ನಷ್ಟ ತಗ್ಗಿಸಲು ಖಾಸಗೀಕರಣದತ್ತ ಆಸಕ್ತಿ ತೋರುತ್ತಿದೆ ಎಂಬ ಆರೋಪವೂ ವ್ಯಕ್ತವಾಗಿದೆ.

ಹೋರಾಟದ ಎಚ್ಚರಿಕೆ: ಟಾಟಾ ಪವರ್ ಕಂಪನಿ ಅರ್ಜಿ ಸಲ್ಲಿಸಿದ ಬೆನ್ನಲ್ಲೇ ಕೆಇಬಿ ನೌಕರರ ವಿವಿಧ ಸಂಘಗಳ ಒಕ್ಕೂಟವು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಉಗ್ರ ಹೋರಾಟದ ಎಚ್ಚರಿಕೆ ನೀಡಿದೆ. ಕರ್ನಾಟಕ ವಿದ್ಯುತ್ ನೌಕರರ ಸಂಘಗಳ ಒಕ್ಕೂಟದ ಅಧ್ಯಕ್ಷ ಕೆ. ಬಲರಾಮ್ ಅವರು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದು, ವಿತರಣಾ ಜಾಲದ ಪರವಾನಗಿ ಕೇಳಿರುವುದನ್ನು ಖಂಡಿಸುತ್ತೇವೆ. ರಾಜ್ಯದ ಜನತೆಯ ಆಸ್ತಿಯಾಗಿರುವ ವಿದ್ಯುತ್ ವಲಯವನ್ನು ಖಾಸಗೀಕರಣಗೊಳಿಸುವ ಹಿಂಬಾಗಿಲ ಯತ್ನವಿದು ಎಂದಿದ್ದಾರೆ.

ನೂತನ ಡಿಜಿಟಲ್ ವ್ಯವಸ್ಥೆಯಲ್ಲಿ ಅನೇಕ ನ್ಯೂನತೆ

ಮೈಸೂರು ಮಹಾನಗರ ಪಾಲಿಕೆಯಲ್ಲಿ ಕಟ್ಟಡ ನಿರ್ಮಾಣ ನಕ್ಷೆ ಅನುಮೋದನೆಗೆ ಗ್ರಹಣ

- ಸರ್ವರ್ ಡೌನ್, ಸಾಫ್ಟ್‌ವೇರ್‌ನಲ್ಲಿ ಕಂಡು ಬರುವ ದೋಷಗಳಿಂದ ಪ್ರಕ್ರಿಯೆಯಲ್ಲಿ ನಿಧಾನಗತಿ
- ಸುಧಾರಣೆಗೊಳ್ಳಬೇಕಿದೆ ಯುಎಲ್‌ಎಂಎಸ್ ಆನ್‌ಲೈನ್ ವ್ಯವಸ್ಥೆ



ಮೈಸೂರು,ಮೇ 26(ಪಿಎಂ)– ಸುಲಭ–ಸರಳಗೊಳಿಸುವ ಉದ್ದೇಶದಿಂದ ಜಾರಿಗೊಂಡಿರುವ ಆನ್‌ಲೈನ್ ವ್ಯವಸ್ಥೆಯ ನ್ಯೂನತೆಯಿಂದಾಗಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ನಕ್ಷೆ ಅನುಮೋದನೆಗೆ ಗ್ರಹಣ ಹಿಡಿದಿದೆ.

ಸಾರ್ವಜನಿಕ ವಲಯದಿಂದ ಈ ಆರೋಪ ಕೇಳಿಬರುತ್ತಿದ್ದರೆ, ಪಾಲಿಕೆ ಮೂಲಗಳು ಮಾತ್ರ ಸ್ವಲ್ಪ ನಿಧಾನಗತಿ ಇದೆ. ಆದರೆ ಅನುಮೋದನೆ ದೊರೆಯುತ್ತಿದೆ ಎನ್ನುತ್ತವೆ. ರಾಜ್ಯ ಸರ್ಕಾರದಿಂದ ಇತ್ತೀಚೆಗೆ ಅನುಷ್ಠಾನಗೊಂಡ ಆನ್‌ಲೈನ್ ವ್ಯವಸ್ಥೆಯ ಆಮೆ ವೇಗದ ಪರಿಣಾಮದಿಂದ ಬೇಸತ್ತಿರುವುದಾಗಿ ಸಾರ್ವಜನಿಕರು ದೂರುತ್ತಿದ್ದಾರೆ.

ಮಧ್ಯವರ್ತಿಗಳ ಹಾವಳಿ ತಪ್ಪಿಸಿ, ಭ್ರಷ್ಟಾಚಾರ ಮುಕ್ತಗೊಳಿಸಿ ಕಾಲಮಿತಿಯಲ್ಲಿ ಅನುಮೋದಿಸುವ ಉದ್ದೇಶದಿಂದ ಏಕೀಕೃತ ಭೂ ನಿರ್ವಹಣಾ ವ್ಯವಸ್ಥೆ (ಯುನಿಫೈಡ್ ಲ್ಯಾಂಡ್ ಮ್ಯಾನೇಜ್‌ಮೆಂಟ್ ಸಿಸ್ಟಮ್–ಯುಎಲ್‌ಎಂಎಸ್) ಎಂಬ ಡಿಜಿಟಲ್ (ಆನ್‌ಲೈನ್) ವ್ಯವಸ್ಥೆಯನ್ನು ರಾಜ್ಯ ಸರ್ಕಾರ ಅನುಷ್ಠಾನಗೊಳಿಸಿದೆ. ಆದರೆ ಸರ್ವರ್ ಡೌನ್, ಸಾಫ್ಟ್‌ವೇರ್‌ನಲ್ಲಿ ಕಂಡು ಬರುತ್ತಿರುವ ಅನೇಕ ನ್ಯೂನತೆಗಳಿಂದ ಕಟ್ಟಡ ನಿರ್ಮಾಣ ನಕ್ಷೆ ಅನುಮೋದನೆ ಪ್ರಕ್ರಿಯೆಗೆ ಹಿನ್ನಡೆಯಾಗುತ್ತಿದೆ.

ಈ ಡಿಜಿಟಲ್ ವ್ಯವಸ್ಥೆಯಲ್ಲಿ ಅರ್ಜಿ ಸಲ್ಲಿಸಲು ವೃತ್ತಿಪರರೇ ಆಗಬೇಕು. ಆದರೆ ಈ ಮೊದಲು ಜನಸಾಮಾನ್ಯರು ಕಚೇರಿಗೆ ಖುದ್ದು ಹೋಗಿ ಅರ್ಜಿ



> ಈ ಆನ್‌ಲೈನ್ ವ್ಯವಸ್ಥೆ ಜನಸ್ನೇಹಿ ಆಗದ ಕಾರಣ ಜನಸಾಮಾನ್ಯರು ತೊಂದರೆ ಅನುಭವಿಸುವಂತಾಗಿದೆ. ಪರಿಣಾಮ, ಈಗ ಕಟ್ಟಡ ನಿರ್ಮಾಣ ಕ್ಷೇತ್ರದ ವಹಿವಾಟು ಸ್ತಬ್ಧಗೊಂಡಂತೆಯೇ ಆಗಿದೆ. ಶೀಘ್ರದಲ್ಲಿ ಸದರಿ ಆನ್‌ಲೈನ್ ವ್ಯವಸ್ಥೆಯಲ್ಲಿ ಉಂಟಾಗಿರುವ ಸಮಸ್ಯೆಗಳನ್ನು ಸರಿಪಡಿಸಿ ತ್ವರಿತಗತಿಯಲ್ಲಿ ಕಟ್ಟಡ ನಕ್ಷೆ ಅನುಮೋದನೆ ಪ್ರಕ್ರಿಯೆ ಪೂರ್ಣಗೊಳ್ಳುವಂತೆ ಕ್ರಮ ವಹಿಸಬೇಕು.
>
> -ಎ.ಪಿ.ನಾಗೇಶ್, ಉಪಾಧ್ಯಕ್ಷರು, ನರೆಡ್ಕೊ ಮೈಸೂರು ಘಟಕ.

ಸಲ್ಲಿಸುತ್ತಿದ್ದರು. ಆಗ ಸಂಬಂಧಿಸಿದ ಇಂಜಿನಿಯರ್ ಗಳು ಪರಿಶೀಲಿಸಿ ಅನುಮೋದನೆಗೆ ಕ್ರಮ ವಹಿಸುತ್ತಿದ್ದರು. ಸೇಲ್ ಡೀಡ್, ಖಾತೆ, ತೆರಿಗೆ ಪಾವತಿ ರಶೀದಿ, ಇಸಿ, ಸಿವಿಲ್ ಇಂಜಿನಿಯರ್ ರೂಪಿಸಿದ ಕರಡು ನಕ್ಷೆ ಪ್ರತಿಗಳೊಂದಿಗೆ ಅರ್ಜಿ ಸಲ್ಲಿಸಬೇಕಿತ್ತು. ಇದು ಸಾಮಾನ್ಯ ಜನರಿಗೆ ಸುಲಭ ವಿಧಾನವಾಗಿತ್ತು. ಆದರೆ ಈಗಿನ ಆನ್‌ಲೈನ್ ವಿಧಾನದಲ್ಲಿ ಸೂಕ್ತ ವ್ಯವಸ್ಥೆ ಹಾಗೂ ಮಾರ್ಗದರ್ಶನ ಇಲ್ಲದ ಕಾರಣ ಮೊದಲಿನಂತೆ ಕಚೇರಿಗೆ ಅರ್ಜಿಯನ್ನು ಖುದ್ದಾಗಿ ಸಲ್ಲಿಸುವುದೇ ಸರಿ ಇತ್ತು ಎನ್ನುವಂತಾಗಿದೆ ಎಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸಿದ್ದಾರೆ.

ಅರ್ಜಿಗಳು ಸರಿಯಾಗಿ ಅಪ್‌ಲೋಡ್ ಆಗುತ್ತಿಲ್ಲ. ಆನ್‌ಲೈನ್ ವ್ಯವಸ್ಥೆಯಾದ ಯುಎಲ್‌ಎಂಎಸ್ ಜಾರಿಯಾದ ನಂತರದಲ್ಲಿ ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 2026ರ ಮಾರ್ಚ್‌ನಿಂದ ಈವರೆಗೆ ಒಂದೇ ಒಂದು ಕಟ್ಟಡ ನಕ್ಷೆಯೂ ಅನುಮೋದನೆಗೊಂಡಿಲ್ಲ ಎಂದು ಸಾರ್ವಜನಿಕರೊಬ್ಬರು ಗಂಭೀರ ಆರೋಪ ಮಾಡಿದರು.

ಇದರ ಪರಿಣಾಮ 20X30 ಮನೆ ನಿರ್ಮಾಣ ಮಾಡುವವರಿಗೂ ತೊಂದರೆ ಆಗುತ್ತಿದೆ. ಯೋಜನೆ ಹಾಕಿಕೊಂಡಂತೆ ಮನೆ ನಿರ್ಮಾಣ ಮಾಡಿ ಮುಗಿಸಲ್ಲವೆಂದರೆ ಮಳೆಗಾಲ ಆರಂಭವಾಗಿ ಸಮಸ್ಯೆ ಎದುರಿಸಬೇಕಾಗುತ್ತದೆ. ಅರ್ಜಿಗಳು ವಿಲೇವಾರಿ ಆಗಿಲ್ಲವೆಂದರೆ ಪಾಲಿಕೆ ಆದಾಯಕ್ಕೂ ಖೋತ ಅಲ್ಲವೇ. ಜೊತೆಗೆ ಕಾರ್ಮಿಕರು ಸೇರಿದಂತೆ ಕಟ್ಟಡ ನಿರ್ಮಾಣದ ಕೆಲಸಗಾರರಿಗೆ ಕೆಲಸವೂ ದೊರೆಯುವುದಿಲ್ಲ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಮಹಾನಗರ ಪಾಲಿಕೆಯ ಅಧಿಕಾರಿಯೊಬ್ಬರು, ಕಟ್ಟಡ ನಿರ್ಮಾಣ ನಕ್ಷೆ ಅನುಮೋದನೆ ಪ್ರಕ್ರಿಯೆ ಸಂಪೂರ್ಣವಾಗಿ ನಿಂತಿಲ್ಲ. ಆದರೆ ಯುಎಲ್‌ಎಂಎಸ್ ಎಂಬ ಹೊಸ ಆನ್‌ಲೈನ್ ವ್ಯವಸ್ಥೆ ಆದ ಕಾರಣ ನಿಧಾನ ಆಗುತ್ತಿದೆ. ಸರ್ವರ್ ಡೌನ್, ಸಾಫ್ಟ್‌ವೇರ್ ಸಮಸ್ಯೆ ಉಂಟಾಗುತ್ತಿದ್ದು, ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳಿಗೆ ಎದುರಾಗುತ್ತಿರುವ ಸಮಸ್ಯೆಗಳನ್ನು ಮನವರಿಕೆ ಮಾಡಿಕೊಡಲಾಗುತ್ತಿದೆ. ಶೀಘ್ರದಲ್ಲಿ ಈ ಆನ್‌ಲೈನ್ ವ್ಯವಸ್ಥೆ ಸುಧಾರಣೆ ಆಗಲಿದೆ ಎಂದು ತಿಳಿಸಿದರು.

ಈ ಆನ್‌ಲೈನ್ ವ್ಯವಸ್ಥೆಯಲ್ಲಿ ಸದ್ಯಕ್ಕೆ ಕಟ್ಟಡ ನಕ್ಷೆ ಅನುಮೋದನೆ ಮಾತ್ರ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಭೂ ಸಮೀಕ್ಷೆ, ಸರ್ವೆ, ಭೂ ಪರಿವರ್ತನೆ, ವಿನ್ಯಾಸ ನಕ್ಷೆ ಅನುಮೋದನೆ, ಭೂ ಉಪಯೋಗ ಬದಲಾವಣೆ ಸೇರಿದಂತೆ ಮೊದಲಾದವನ್ನು ಇದೇ ವ್ಯವಸ್ಥೆಯಡಿ ಮಾಡಬೇಕೆಂಬ ಉದ್ದೇಶವನ್ನು ಸರ್ಕಾರ ಹೊಂದಿದೆ ಎಂದರು.

ಕಟ್ಟಡ ನಕ್ಷೆ ಅನುಮೋದನೆಗೆ ಸಾರ್ವಜನಿಕರು ಇದೇ ಯುಎಲ್‌ಎಂಎಸ್ ಡಿಜಿಟಲ್ ವ್ಯವಸ್ಥೆಯಲ್ಲಿಯೇ ಅರ್ಜಿ ಸಲ್ಲಿಸಬೇಕು. ಆನ್‌ಲೈನ್ ವ್ಯವಸ್ಥೆ ಜಾರಿಗೂ ಮುನ್ನ ಈ ಹಿಂದಿನ ವ್ಯವಸ್ಥೆಯಲ್ಲಿ ನಿಗದಿತ ಅರ್ಜಿ ನಮೂನೆಯನ್ನು ಸಾರ್ವಜನಿಕರು ಪಾಲಿಕೆಗೆ ಸಲಿಸಬೇಕಿತ್ತು. 2020ರಲ್ಲಿ ನಿರ್ಮಾಣ್ ಶೀರ್ಷಿಕೆಯ ಡಿಜಿಟಲ್ ವ್ಯವಸ್ಥೆ ಜಾರಿಗೊಂಡಿತು. ಯುಎಲ್‌ಎಂಎಸ್ ಡಿಜಿಟಲ್ ವ್ಯವಸ್ಥೆಯು 2026ರ ಏಪ್ರಿಲ್ 1ರಿಂದ ಅನುಷ್ಠಾನಕ್ಕೆ ಬಂದಿದೆ. ಸರ್ಕಾರದ ಆದೇಶದಂತೆ ಕಡ್ಡಾಯವಾಗಿ ಈ ಡಿಜಿಟಲ್ ವ್ಯವಸ್ಥೆಯಲ್ಲಿ ಕಟ್ಟಡ ನಕ್ಷೆ ಅನುಮೋದನೆ ಮಾಡಬೇಕಿದೆ. ನಿಧಾನಗತಿಯಾದರೂ ಪೂರ್ಣವಾಗಿ ನಿಂತಿಲ್ಲ. ಇಂಜಿನಿಯರ್‌ಗಳಿಗೂ ಈ ಹೊಸ ಡಿಜಿಟಲ್ ವ್ಯವಸ್ಥೆಗೆ ಬಗ್ಗೆ ಹೆಚ್ಚಿನ ತರಬೇತಿ ಅಗತ್ಯವಾಗಿದೆ. ಸುಧಾರಣೆ ಬಳಿಕ ತ್ವರಿಗತಿಯಲ್ಲಿ ಆಗಲಿದೆ ಎಂದು ತಿಳಿಸಿದರು.

ಮೇಕೆದಾಟು ಸಂಬಂಧ ತಮಿಳುನಾಡಿನ ಮರು ಪರಿಶೀಲನಾ ಅರ್ಜಿ ವಜಾಗೊಳಿಸಿದ ಸುಪ್ರೀಂ

ನವದೆಹಲಿ: ಕರ್ನಾಟಕದ ಪ್ರಸ್ತಾವಿತ ಮೇಕೆದಾಟು ಯೋಜನೆ ವಿರುದ್ಧದ ಅರ್ಜಿಯನ್ನು ಪರಿಗಣಿಸಲು ನಿರಾಕರಿಸಿದ 2025 ನವೆಂಬರ್ ತೀರ್ಪನ್ನು ಮರುಪರಿಶೀಲಿಸಬೇಕು ಎಂದು ಕೋರಿ ತಮಿಳುನಾಡು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ವಜಾಗೊಳಿಸಿದೆ.

ತೆರೆದ ನ್ಯಾಯಾಲಯದಲ್ಲಿ ವಿಚಾರಣೆಗೆ ಕೋರಿ ತಮಿಳುನಾಡು ಸಲ್ಲಿಸಿದ್ದ ಈ ಅರ್ಜಿಯನ್ನು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರ ಪೀಠವು ತಿರಸ್ಕರಿಸಿತು.

ವಕೀಲರ ಮೌಖಿಕ ವಾದಗಳಿಲ್ಲದೆ ದಾಖಲೆಗಳ ಮೂಲಕ ನ್ಯಾಯಮೂರ್ತಿಗಳ ಕೊಠಡಿಗಳಲ್ಲಿ ಪರಿಶೀಲನಾ ಅರ್ಜಿಯ ವಿಚಾರಣೆ ನಡೆಸಲಾಗುತ್ತದೆ.

ಮರು ಪರಿಶೀಲನಾ ಅರ್ಜಿಯ ವಿಷಯಗಳು ಮತ್ತು ಅದರೊಂದಿಗೆ ಲಗತ್ತಿಸಲಾದ ದಾಖಲೆಗಳನ್ನು ನಾವು ಎಚ್ಚರಿಕೆಯಿಂದ ಪರಿಶೀಲಿಸಿದ್ದೇವೆ. ತೀರ್ಪಿನ ಪುನರ್ ಪರಿಶೀಲನೆ ಅಗತ್ಯ ಇಲ್ಲ ಎಂದು ಪೀಠವು ಇತ್ತೀಚೆಗೆ ಬಿಡುಗಡೆ ಮಾಡಿದ ತನ್ನ ಆದೇಶದಲ್ಲಿ ತಿಳಿಸಿದೆ

ಮೇಕೆದಾಟು ಯೋಜನೆ ವಿರುದ್ಧ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಅರ್ಜಿಗಳನ್ನು ಸುಪ್ರೀಂಕೋರ್ಟ್ 2025ರ ನವೆಂಬರ್‌ನಲ್ಲಿ ವಜಾಗೊಳಿಸಿತ್ತು.

ಪ್ರಕರಣದ ವಿಚಾರಣೆ ನಡೆಸಿದ್ದ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ, ನ್ಯಾಯಮೂರ್ತಿಗಳಾದ ಕೆ. ವಿನೋದ್ ಚಂದ್ರನ್ ಹಾಗೂ ಎನ್.ವಿ. ಅಂಜಾರಿಯಾ ಪೀಠವು, ಮೇಕೆದಾಟು ಅಣೆಕಟ್ಟೆ ನಿರ್ಮಾಣಕ್ಕೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಮಾತ್ರ ಕೇಂದ್ರ ಜಲ ಆಯೋಗ (ಸಿಡಬ್ಲ್ಯುಸಿ) ಅನುಮತಿ ನೀಡಿದೆ. ತಮಿಳುನಾಡಿನ ಆಕ್ಷೇಪಣೆಗಳನ್ನು ತಜ್ಞರು ಪರಿಶೀಲಿಸಿದ ಬಳಿಕವೇ ಈ ಪ್ರಕ್ರಿಯೆ ನಡೆದಿದೆ. ಈ ಹಂತದಲ್ಲಿ ಇದನ್ನು ಪ್ರಶ್ನಿಸಿ ತಮಿಳುನಾಡು ಅರ್ಜಿ ಸಲ್ಲಿಸಿರುವುದು ಅವಧಿ ಪೂರ್ವ' ಎಂದು ಅಭಿಪ್ರಾಯಪಟ್ಟಿತ್ತು.

ತಮಿಳುನಾಡಿನ ಆಕ್ಷೇಪಣೆಗಳನ್ನು ಹಾಗೂ ತಜ್ಞ ಸಂಸ್ಥೆಗಳು, ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯುಆರ್‌ಸಿ) ಮತ್ತು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಗಳ (ಸಿಡಬ್ಲ್ಯುಎಂಎ) ಅಭಿಪ್ರಾಯಗಳನ್ನು ಪರಿಗಣಿಸಿದ ನಂತರವೇ ಆಯೋಗವು ಯೋಜನೆಗೆ ಅನುಮೋದನೆ ನೀಡಲಿದೆ ಎಂದು ಪೀಠ ತಿಳಿಸಿತ್ತು.

ಡಿಪಿಆರ್ ತಿರಸ್ಕರಿಸುವಂತೆ ಪ್ರಧಾನಿಗೆ ಸಿಎಂ ವಿಜಯ್ ಪತ್ರ




ಚೆನ್ನೈ: ಕಾವೇರಿ ನದಿಗೆ ಅಡ್ಡಲಾಗಿ ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಮೇಕೆದಾಟು ಜಲಾಶಯ ಯೋಜನೆಯ ಭೂಮಿ ಪೂಜೆ ಘೋಷಣೆಗೆ ತಮಿಳುನಾಡು ಸರ್ಕಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಈ ಯೋಜನೆಗೆ ಯಾವುದೇ ಕಾರಣಕ್ಕೂ ಅನುಮತಿ ನೀಡಬಾರದು ಎಂದು ಒತ್ತಾಯಿಸಿ ತಮಿಳುನಾಡಿನ ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸುದೀರ್ಘ ಪತ್ರ ಬರೆದಿದ್ದಾರೆ.

ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಾರ್ವಜನಿಕ ಹೇಳಿಕೆಗಳು ಹಾಗೂ ಭೂಮಿ ಪೂಜೆಯ ಘೋಷಣೆಯು, ಜೀವನೋಪಾಯಕ್ಕಾಗಿ ಕಾವೇರಿ ನದಿಯನ್ನೇ ನಂಬಿಕೊಂಡಿರುವ ತಮಿಳುನಾಡಿನ ಲಕ್ಷಾಂತರ ರೈತರಲ್ಲಿ ಭಾರೀ ಆತಂಕ ಮೂಡಿಸಿದೆ ಎಂದು ವಿಜಯ್ ಪತ್ರದಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ.

ತಮಿಳುನಾಡು ಒಪ್ಪಿಗೆಯನ್ನು ಪಡೆಯದೆ ಯಾವುದೇ ಹೊಸ ಯೋಜನೆಯನ್ನು ಕೈಗೆತ್ತಿಕೊಳ್ಳದಂತೆ ಕರ್ನಾಟಕ ಸರ್ಕಾರಕ್ಕೆ ಸೂಕ್ತ ಸಲಹೆ ನೀಡಬೇಕು ಎಂದು ವಿಜಯ್ ಅವರು ಪ್ರಧಾನಿಗಳಿಗೆ ಮನವಿ ಮಾಡಿದ್ದಾರೆ. ಇದರೊಂದಿಗೆ ಮೇಕೆದಾಟು ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು ತಕ್ಷಣವೇ ತಿರಸ್ಕರಿಸುವಂತೆ ಕೇಂದ್ರ ಜಲಶಕ್ತಿ ಸಚಿವಾಲಯ ಮತ್ತು ಕೇಂದ್ರ ಜಲ ಆಯೋಗದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಬೇಕೆಂದು ಪತ್ರದ ಮೂಲಕ ಒತ್ತಾಯಿಸಿದ್ದಾರೆ.

'ಸುಪ್ರೀಂ' ತೀರ್ಪು ಸ್ವಾಗತಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್



ಬೆಂಗಳೂರು: ಕಾವೇರಿ ನದಿಯ ಮೇಲಿನ ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಮರುಪರಿಶೀಲನಾ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿರುವ ತೀರ್ಪನ್ನು ಕರ್ನಾಟಕ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಮಂಗಳವಾರ ಸ್ವಾಗತಿಸಿದರು.

ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಡಿಸಿಎಂ ಡಿಕೆ ಶಿವಕುಮಾರ್, ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ತಮಿಳುನಾಡು ಸಲ್ಲಿಸಿದ್ದ ಮರುಪರಿಶೀಲನಾ ಅರ್ಜಿಯನ್ನು ಸುಪ್ರೀಂ ಕೋರ್ಟ್‌ನ ಮೂವರು ಸದಸ್ಯರ ಪೀಠ ತಿರಸ್ಕರಿಸಿದೆ. ಇದು ಕರ್ನಾಟಕಕ್ಕೆ ಒಳ್ಳೆಯ ಸುದ್ದಿ. ಕರ್ನಾಟಕದ ಜನರ ಪರವಾಗಿ ನಾವು ಸುಪ್ರೀಂ ಕೋರ್ಟ್‌ಗೆ ಕೃತಜ್ಞತೆ ಸಲ್ಲಿಸುತ್ತೇವೆ ಎಂದರು.

ತಮಿಳುನಾಡಿಗೆ ಸೇರಿದ 177 ಟಿಎಂಸಿ ನೀರನ್ನು ಬಿಡುಗಡೆ ಮಾಡಬೇಕು ಎಂಬ ಷರತ್ತಿನೊಂದಿಗೆ ಸುಪ್ರೀಂಕೋರ್ಟ್ ತನ್ನ ಹಿಂದಿನ ಆದೇಶದಲ್ಲೇ ನಮಗೆ ಸ್ಪಷ್ಟ ಸೂಚನೆ ನೀಡಿತ್ತು. ಈಗ ಈ ಯೋಜನೆಗೆ ಸಂಬಂಧಿಸಿದ ಅಂತಿಮ ನಿರ್ಧಾರ ಕೈಗೊಳ್ಳುವುದು ಕೇಂದ್ರ ಸರ್ಕಾರದ ಹೊಣೆ. ನಾವು ಪರಿಷ್ಕೃತ ಡಿಪಿಆರ್ ಸಲ್ಲಿಸುವ ಪ್ರಕ್ರಿಯೆಯಲ್ಲಿದ್ದೇವೆ. ಯೋಜನೆಗೆ ಸಂಬಂಧಿಸಿದ ಪರಿಷ್ಕೃತ ವಿವರವಾದ ಯೋಜನಾ ವರದಿ ಸಲ್ಲಿಸುವ ಪ್ರಕ್ರಿಯೆಯಲ್ಲಿ ರಾಜ್ಯ ಈಗಾಗಲೇ ತೊಡಗಿದೆ ಜಲಸಂಪನ್ಮೂಲ ಸಚಿವರೂ ಆಗಿರುವ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ ಎಂದು ಅವರ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

2025ರ ನವೆಂಬರ್ ತೀರ್ಪಿನ ವಿರುದ್ಧ ತಮಿಳುನಾಡು ಸಲ್ಲಿಸಿದ್ದ ಮರುಪರಿಶೀಲನಾ ಅರ್ಜಿಯನ್ನು ಸುಪ್ರೀಂಕೋರ್ಟ್ ತಿರಸ್ಕರಿಸಿದೆ. ಆ ತೀರ್ಪಿನಲ್ಲಿ ಕರ್ನಾಟಕದ ಪ್ರಸ್ತಾವಿತ ಮೇಕೆದಾಟು ಯೋಜನೆ ವಿರುದ್ಧದ ಅರ್ಜಿಯನ್ನು ಪರಿಗಣಿಸಲು ನ್ಯಾಯಾಲಯ ನಿರಾಕರಿಸಿತ್ತು.

ಖಾಸಗಿ ವ್ಯಕ್ತಿಗಳಿಗೆ ಸರ್ಕಾರಿ ಆಸ್ತಿ ಖಾತೆ ಮಾಡಿಕೊಟ್ಟ ರಮ್ಮನಹಳ್ಳಿ ರೆವಿನ್ಯೂ ಇನ್ಸ್‌ಪೆಕ್ಟರ್ ಅಮಾನತು

ಮೈಸೂರು, ಮೇ 26(ಎಸ್‌ಪಿಎನ್)– ಸರ್ಕಾರಿ ಆಸ್ತಿಯನ್ನು ಖಾಸಗಿ ವ್ಯಕ್ತಿಗಳಿಗೆ ಅಕ್ರಮವಾಗಿ ಖಾತೆ ತೆರೆದು ನಮೂನೆ–3 ಅನ್ನು ವಿತರಿಸಿ ಕರ್ತವ್ಯ ಲೋಪವೆಸಗಿದ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಕಂದಾಯ ನಿರೀಕ್ಷಕ(ರೆವಿನ್ಯೂ ಇನ್ಸ್‌ಪೆಕ್ಟರ್)ಅನ್ನು ಅಮಾನತು ಮಾಡಿ ಬೆಂಗಳೂರು ಪೌರಾಡಳಿತ ನಿರ್ದೇಶನಾಲಯ ಸೋಮವಾರ ಆದೇಶ ಹೊರಡಿಸಿದೆ.

ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಕಂದಾಯ ನಿರೀಕ್ಷಕ ಎನ್.ಮಂಜುನಾಥ್ ಅಮಾನತುಗೊಂಡವರು. ಇವರ ಇಲಾಖಾ ವಿಚಾರಣೆ ಕಾಯ್ದಿರಿಸಿ ಸೇವೆಯಿಂದ ಅಮಾನತುಗೊಳಿಸಿ ನಿರ್ದೇಶಕ ಪಿ.ಎನ್. ರವೀಂದ್ರ ಸೋಮವಾರ ಆದೇಶಿಸಿದ್ದಾರೆ.

ಕರ್ನಾಟಕ ರಾಜ್ಯ ನಾಗರಿಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 9(2)(ಸಿ)ರಂತೆ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯಲ್ಲಿ ಪ್ರಥಮ ದರ್ಜೆ ಕಂದಾಯ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಎನ್.ಮಂಜುನಾಥ್(ಮೂಲತಃ ಮಹಾನಗರ ಪಾಲಿಕೆ ಪ್ರಥಮ ದರ್ಜೆ ಸಹಾಯಕ ವೃಂದ) ಅವರನ್ನು ಇಲಾಖಾ ವಿಚಾರಣೆ ಕಾಯ್ದಿರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತುಗೊಳಿಸಿ ಆದೇಶಿಸಿದ್ದು, ಸದರಿ ನೌಕರರ ಲೀನ್(ಸ್ಥಾನ) ಅನ್ನು ಹಾಸನ ಮಹಾನಗರ ಪಾಲಿಕೆಯಲ್ಲಿ ಖಾಲಿಯಿರುವ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ಬದಲಿಸಿದೆ.

ಅಮಾನತಿನ ಅವಧಿಯಲ್ಲಿ ಸರ್ಕಾರದ ಪೂರ್ವಾನುಮತಿ ಇಲ್ಲದೆ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ ಮತ್ತು ಕರ್ನಾಟಕ ನಾಗರಿಕ ಸೇವಾ ನಿಯಮಗಳು 1958 ನಿಯಮ 98ರನ್ವಯ ಜೀವನಾಧಾರ ಭತ್ಯೆಗೆ ಅರ್ಹರಿರುತ್ತಾರೆ.

ಮುಖ್ಯಾಧಿಕಾರಿ ವಿರುದ್ಧ ಕ್ರಮಕ್ಕೆ ಸರ್ಕಾರಕ್ಕೆ ಶಿಫಾರಸ್ಸು

ಘಟನೆ ಕುರಿತು ತನಿಖಾ ವರದಿ: ಈ ಪ್ರಕರಣ ಕುರಿತು ತನಿಖೆ ನಡೆಸಿ ರಾಜ್ಯ ಸರ್ಕಾರಕ್ಕೆ ವರದಿ ನೀಡಿರುವ ಮೈಸೂರು ನಗರ ಪಾಲಿಕೆ ಉಪ ಆಯುಕ್ತ (ಕಂದಾಯ) ಸೋಮಶೇಖರ್, ಮೇ 16ರಂದು ಜಿಲ್ಲಾಧಿಕಾರಿಗಳಿಗೆ ಬರೆದಿರುವ ಪತ್ರದಲ್ಲಿ ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಹಲವು ಸರ್ವೆ ನಂಬರ್‌ಗಳ ಖಾತಾ ದಾಖಲಾತಿಗಳ ಬಗ್ಗೆ ಸ್ವೀಕೃತವಾಗಿರುವ ದೂರರ್ಜಿಗಳ ಪೂರ್ಣ ಪ್ರಮಾಣದಲ್ಲಿ ತನಿಖೆ ಕೈಗೊಂಡು ಸವಿಸ್ತರವಾದ ವರದಿ ನೀಡಲು ಕಾಲಾವಕಾಶ ಅವಶ್ಯವಿದೆ ಹಾಗೂ ತನಿಖೆ ಪೂರ್ಣಗೊಳ್ಳುವವರೆಗೆ ಸಂಬಂಧಪಟ್ಟ ರಮ್ಮನಹಳ್ಳಿ ಪಪಂಯ ಕರ ವಸೂಲಿಗಾರ, ಕಂದಾಯ ನಿರೀಕ್ಷಕ, ಮುಖ್ಯಾಧಿಕಾರಿಗಳನ್ನು ಬೇರೆಡೆ ನಿಯೋಜನೆ ಮಾಡಲು ಸರ್ಕಾರ ನಿರ್ಧಾರ ತೆಗೆದುಕೊಳ್ಳಬಹುದು ಎಂದು ಅಭಿಪ್ರಾಯಪಟ್ಟಿದ್ದರು.



ಮಂಜುನಾಥ್

ಸದರಿಯವರ ವಿರುದ್ಧ ಸಾರ್ವಜನಿಕರಿಂದ ಸ್ವೀಕೃತವಾದ ಎಲ್ಲಾ ದೂರರ್ಜಿಗಳ ಸಾರಾಂಶಗಳ ಕುರಿತು ಜಿಲ್ಲಾಧಿಕಾರಿಗಳಿಗೆ ಬರೆದಿರುವ ಪತ್ರದಲ್ಲಿ ವಿವರಿಸಿದ್ದು, ರಮ್ಮನಹಳ್ಳಿ ಪ.ಪಂ ಇ–ಆಸ್ತಿ ತಂತ್ರಾಂಶದ ಪೋರ್ಟಲ್‌ನಲ್ಲಿ 06.03.2026ರ ಅಂತ್ಯಕ್ಕೆ ಮುಖ್ಯಾಧಿಕಾರಿ ಲಾಗಿನ್‌ನಲ್ಲಿ 858 ಅರ್ಜಿಗಳು ಮತ್ತು ಕಂದಾಯ ನಿರೀಕ್ಷಕ ಲಾಗಿನ್‌ನಲ್ಲಿ 207 ಅರ್ಜಿಗಳು ಅವಧಿ ಮೀರಿ ವಿಲೇ ಆಗದೇ ಬಾಕಿ ಉಳಿಸಿಕೊಂಡಿದ್ದರು. ಸರ್ಕಾರದ ಸುತ್ತೋಲೆ ಹಾಗೂ ಮಾರ್ಗಸೂಚಿಯನ್ನು ಅನುಸರಿಸದೆ ಮೇಲಾಧಿಕಾರಿಗಳ ಆದೇಶ ಪಾಲನೆ ಮಾಡದೇ ಸಾರ್ವಜನಿಕರಿಗೆ ನಿಗಧಿತ ಅವಧಿಯೊಳಗೆ ಜನರಿಗೆ ಸೇವೆಯನ್ನು ನೀಡುವಲ್ಲಿ ಮುಖ್ಯಾಧಿಕಾರಿ ಕೆ.ಎಸ್.ಮಹೇಶ್ ಮತ್ತು ಕಂದಾಯ ನಿರೀಕ್ಷಕ ಎನ್.ಮಂಜುನಾಥ್ ವಿಫಲರಾಗಿದ್ದಾರೆ.

ಅರ್ಜಿ ವಿಲೇಗೆ ಅನಗತ್ಯ ವಿಳಂಬ: ಇವರಿಬ್ಬರ ವಿರುದ್ಧ ದಾಖಲಾಗಿರುವ ದೂರರ್ಜಿಗಳನ್ನು ತುಲನೆ ಮಾಡಿದಾಗ ಇವರಿಬ್ಬರಿಂದ ಪಪಂ.ಯಲ್ಲಿ ಸಾರ್ವಜನಿಕ ಕೆಲಸ–ಕಾರ್ಯಗಳು ವಿಳಂಬವಾಗುತ್ತಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಮುಖ್ಯಾಧಿಕಾರಿ ಕೆ.ಎಸ್. ಮಹೇಶ್ ಮತ್ತು ಕಂದಾಯ ನಿರೀಕ್ಷಕ ಎನ್.ಮಂಜುನಾಥ್ ಅವರು ಲಂಚ ಹಣಕ್ಕೆ ಬೇಡಿಕೆಯಿಟ್ಟು ಸಾರ್ವಜನಿಕರಿಗೆ ತಪ್ಪು ದಾಖಲಾತಿ, ಮಾಹಿತಿಗಳನ್ನು ನೀಡಿ, ಅರ್ಜಿ ವಿಲೇವಾರಿಯಲ್ಲಿ ಸಾರ್ವಜನಿಕರಿಗೆ ಅನಗತ್ಯ ವಿಳಂಬ ಮಾಡುತ್ತಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

ಸರ್ಕಾರಿ ಆಸ್ತಿ ಖಾಸಗಿ ವ್ಯಕ್ತಿಗೆ: ಅಂತೆಯೇ ಸರ್ಕಾರದ ಆಸ್ತಿ ಸರ್ವೆ ನಂ 259/5 ರಲ್ಲಿನ ಮೂಲ ದಾಖಲಾತಿಗಳನ್ನು ಪರಿಶೀಲಿಸಿಕೊಳ್ಳದೇ ಸರ್ಕಾರದ ಆಸ್ತಿ ಎಂದು ಗೊತ್ತಿದ್ದರೂ ಸಹ ಖಾಸಗಿ ವ್ಯಕ್ತಿಗಳಿಗೆ ಇ–ಆಸ್ತಿ ಸೃಜಿಸಿ ನಂತರ ಏಕಾಏಕಿ ಖಾತೆಗಳನ್ನು ಇವರ ಅಧಿಕಾರ ವ್ಯಾಪ್ತಿ ಮೀರಿ, ಇವರ ಹಂತದಲ್ಲೇ ರದ್ದುಪಡಿಸಿರುವುದಾಗಿ ಮೈಸೂರು ತಾಲೂಕು ತಹಸೀಲ್ದಾರ್ ಅವರಿಗೆ ವರದಿ ಸಲ್ಲಿಸಿ ಕರ್ತವ್ಯ ಲೋಪವೆಸಗಿದ್ದಾರೆ. ಆದ್ದರಿಂದ ಇವರುಗಳ ವಿರುದ್ಧ ಕರ್ನಾಟಕ ಸಿವಿಲ್ ಸೇವಾ ವರ್ಗೀಕರಣ ನಿಯಂತ್ರಣ ಮತ್ತು ಅಪೀಲು ನಿಯಮಗಳು 1957ರ ನಿಯಮ 10(ಡಿ)ರನ್ವಯ ಅಮಾನತಿನಲ್ಲಿಟ್ಟು ಇಲಾಖಾ ವಿಚಾರಣೆಯನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು ಸಲ್ಲಿಸಿರುವ ವರದಿಯಲ್ಲಿ ಶಿಫಾರಸ್ಸು ಮಾಡಿದ್ದಾರೆ.

ಈ ಪ್ರಕರಣದಲ್ಲಿನ ಆರೋಪಿತರಾದ ಮುಖ್ಯಾಧಿಕಾರಿ ಕೆ.ಎಸ್.ಮಹೇಶ್ ಅವರು ಕೆಎಂಎಎಸ್ ಶ್ರೇಣಿ–1 ರವರಾಗಿದ್ದು, ಇವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ನಿರ್ಧಾರ ರಾಜ್ಯ ಸರ್ಕಾರದ್ದು. ಜೊತೆಗೆ ಇವರ ವಿರುದ್ಧವೂ ಶಿಸ್ತುಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಕಂದಾಯ ನಿರೀಕ್ಷಕ ಎನ್.ಮಂಜುನಾಥ್ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಅಧಿಕಾರ ಪೌರಾಡಳಿತ ನಿರ್ದೇಶನಾಲಯ ವ್ಯಾಪ್ತಿಯದ್ದು, ಹಾಗಾಗಿ ಎನ್.ಮಂಜುನಾಥ್ ವಿರುದ್ಧ ಇಲಾಖಾ ವಿಚಾರಣೆ ಕಾಯ್ದಿರಿಸಿ ಲೀನ್ (ಸ್ಥಾನ) ಅನ್ನು ಪ್ರಸ್ತುತ ಕಾರ್ಯ ನಿರ್ವಹಣೆ ಮಾಡುತ್ತಿರುವ ಸ್ಥಳದಿಂದ ಬೇರೆಡೆಗೆ ಬದಲಾವಣೆ ಮಾಡಿ ಆದೇಶಿಸಿದ್ದಾರೆ.

ಅಮಾನತು ಮಾತ್ರವಲ್ಲ ಕ್ರಿಮಿನಲ್ ಕೇಸ್ ದಾಖಲಿಸಬೇಕು: ಸ್ನೇಹಮಯಿ ಕೃಷ್ಣ ಆಗ್ರಹ



ಮೈಸೂರು, ಮೇ 26(ಎಸ್‌ಪಿಎನ್)– ಭ್ರಷ್ಟ ಅಧಿಕಾರಿಗಳನ್ನು ಅಮಾನತುಗೊಳಿಸಿದರಷ್ಟೇ ಸಾಲದು, ಅವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿ ಶಿಕ್ಷೆ ಕೊಡಿಸಬೇಕು ಎಂದು ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಹೇಳಿದ್ದಾರೆ.

ಮೈಸೂರು ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ಕಂದಾಯ ನಿರೀಕ್ಷಕ ಮಂಜುನಾಥ್ ಅಮಾನತು ಸಂಬಂಧ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳು ಪ್ರಶ್ನಿಸಿದರೆ ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆ ಸಾಧ್ಯ ಎಂಬುದಕ್ಕೆ ಈ ಪ್ರಕರಣ ಸಾಕ್ಷಿಯಾಗಿದೆ ಎಂದರು.

ಮುಖ್ಯಾಧಿಕಾರಿ ಮಹೇಶ್, ಕಂದಾಯಾಧಿಕಾರಿ ಮಂಜುನಾಥ್, ಹಲವು ಭ್ರಷ್ಟಾಚಾರಗಳಲ್ಲಿ ತೊಡಗಿಸಿಕೊಂಡು ಜನಸಾಮಾನ್ಯರಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ಅಲ್ಲಿನ ಜನ ನನ್ನ ಗಮನಕ್ಕೆ ತಂದರು. ಬಳಿಕ ನನ್ನ ಮೂಲಕ ದೂರರ್ಜಿ ನೀಡಿ, ಸಂಘಟಿತ ಕಾನೂನು ಹೋರಾಟ ಮಾಡಿದ್ದರಿಂದ ಇಂದು ಕಂದಾಯ ನಿರೀಕ್ಷಕ ಮಂಜುನಾಥ್ ಅವರನ್ನು ಅಮಾನತುಗೊಳಿಸಿ, ಮಹೇಶ್ ಅವರ ಅಮಾನತಿಗಾಗಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಲಾಗಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳಿಗಿರುವ ಶಕ್ತಿಯನ್ನು ತೋರಿಸುತ್ತದೆ. ಎಲ್ಲರೂ ಹೀಗೆ ಪ್ರಶ್ನಿಸಿದರೆ ಭ್ರಷ್ಟಾಚಾರ, ಅನ್ಯಾಯ–ಅಕ್ರಮಗಳು ಕಡಿಮೆಯಾಗುತ್ತದೆ ಎಂದು ಆಶಿಸಿದರು.

ಇವರು ಸರ್ಕಾರಿ ಆಸ್ತಿ ಕಬಳಿಸುವುದಕ್ಕಾಗಿ ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡು, ಸುಳ್ಳು ದಾಖಲೆ ಸೃಷ್ಟಿ ಮಾಡಿಕೊಂಡಿರುವುದರಿಂದ ಅಮಾನತು, ಇಲಾಖಾ ವಿಚಾರಣೆಗಷ್ಟೇ ಸೀಮಿತಗೊಳಿಸದೆ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ಶಿಕ್ಷೆ ಕೊಡಿಸಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮ ವಹಿಸದಿದ್ದರೆ ನಾನೇ ದೂರು ದಾಖಲಿಸುತ್ತೇನೆ ಎಂದು ಎಚ್ಚರಿಸಿದರು.

ಚೀನಾ ಏಕಪಕ್ಷೀಯ ನೀತಿಗೆ ಬ್ರೇಕ್

ಕ್ವಾಡ್ ಸಭೆ ನಡುವೆ ಮಹತ್ವದ ಖನಿಜ ಒಪ್ಪಂದಕ್ಕೆ ಭಾರತ–ಅಮೆರಿಕ ಸಹಿ



ನವದೆಹಲಿ: ಜಾಗತಿಕ ರಾಜತಾಂತ್ರಿಕ ವಲಯದಲ್ಲಿ ಮಹತ್ವದ ಬೆಳವಣಿಗೆಯೊಂದರಲ್ಲಿ, ಭಾರತ ಮತ್ತು ಅಮೆರಿಕ ದೇಶಗಳು ಅತ್ಯಗತ್ಯ ಖನಿಜಗಳು ಮತ್ತು ಅಪರೂಪದ ಖನಿಜ ಪೂರೈಕೆ ಹಾಗೂ ಸಂಸ್ಕರಣೆಗೆ ಸಂಬಂಧಿಸಿದಂತೆ ಐತಿಹಾಸಿಕ ಕಾರ್ಯತಂತ್ರದ ಒಪ್ಪಂದಕ್ಕೆ ಸಹಿ ಹಾಕಿವೆ.

ನವದೆಹಲಿಯಲ್ಲಿ ಮಂಗಳವಾರ ನಡೆದ ಕ್ವಾಡ್ ವಿದೇಶಾಂಗ ಸಚಿವರ ಸಭೆಯ ನೇಪಥ್ಯದಲ್ಲಿ ಈ ದ್ವಿಪಕ್ಷೀಯ ಒಪ್ಪಂದಕ್ಕೆ ಉಭಯ ರಾಷ್ಟ್ರಗಳು ಸಹಿ ಹಾಕಿವೆ.

ಭಾರತದ ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಮತ್ತು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೋ ಅವರು ಈ ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

ಒಪ್ಪಂದದ ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಸ್.ಜೈಶಂಕರ್, ಈ ಒಪ್ಪಂದವು ಅತ್ಯಗತ್ಯವಾಗಿದ್ದು, ಗಣಿಗಾರಿಕೆ, ಸಂಸ್ಕರಣೆ, ಮರುಬಳಕೆ ಮತ್ತು ಸಂಬಂಧಿತ ಹೂಡಿಕೆ ಸೇರಿದಂತೆ ಸಮಗ್ರ ಖನಿಜ ಪೂರೈಕೆ ಸರಪಳಿಯಲ್ಲಿ ಉಭಯ ದೇಶಗಳ ಸಹಕಾರವನ್ನು ಮತ್ತಷ್ಟು ಬಲಪಡಿಸಲಿದೆ ಎಂದು ಹೇಳಿದ್ದಾರೆ.

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೋ ಮಾತನಾಡಿ, ಭಾರತ ಮತ್ತು ಅಮೆರಿಕಾ ಎರಡೂ ದೇಶಗಳಿಗೆ ದೀರ್ಘಾವಧಿಯ ವಿಶ್ವಾಸಾರ್ಹ ಖನಿಜ ಸರಬರಾಜು ಅತ್ಯಂತ ಅಗತ್ಯ. ನಮ್ಮ ನವೀನ ಆರ್ಥಿಕ ವ್ಯವಸ್ಥೆಗಳಿಗೆ ಅವು ಬೆನ್ನೆಲುಬಿನಂತಿವೆ ಎಂದು ತಿಳಿಸಿದ್ದಾರೆ.

ಇದೇ ವೇಳೆ 'ಪ್ಯಾಕ್ಸ್ ಸಿಲಿಕಾ' ಯೋಜನೆಯನ್ನೂ ಉಲ್ಲೇಖಿಸಿದ ಅವರು, 'ಫೆಬ್ರವರಿ 4ರಂದು ವಾಷಿಂಗ್ಟನ್‌ನಲ್ಲಿ ನಡೆದ ಕ್ರಿಟಿಕಲ್ ಮಿನರಲ್ಸ್ ಫೋರಂನಲ್ಲಿ ಭಾರತ ಭಾಗವಹಿಸಿದ ಬಳಿಕ ಈ ಸಹಕಾರಕ್ಕೆ ಅಡಿಪಾಯ ಹಾಕಲಾಯಿತು. ನಂತರ ಭಾರತ ಪ್ಯಾಕ್ಸ್ ಸಿಲಿಕಾ ಯೋಜನೆಗೆ ಸೇರ್ಪಡೆಯಾದ ಬಳಿಕ ಇದಕ್ಕೆ ಮತ್ತಷ್ಟು ವೇಗ ಸಿಕ್ಕಿತು' ಎಂದು ತಿಳಿಸಿದರು.

ನಮ್ಮಂತಹ ತಂತ್ರಜ್ಞಾನ ಆಧಾರಿತ ಆರ್ಥಿಕ ವ್ಯವಸ್ಥೆಗಳು ಪ್ರಮುಖ ಕೈಗಾರಿಕೆಗಳಿಗೆ ಅಗತ್ಯವಿರುವ ಮೂಲ ಸಂಪನ್ಮೂಲಗಳನ್ನು ಒಂದೇ ದೇಶದ ಏಕಸ್ವಾಮ್ಯಕ್ಕೆ ಬಿಟ್ಟುಕೊಡಲು ಸಾಧ್ಯವಿಲ್ಲ. ಯುದ್ಧದ ಸಮಯದಲ್ಲಷ್ಟೇ ಅಲ್ಲ, ರಾಜಕೀಯ ಒತ್ತಡದ ಸಾಧನವಾಗಿಯೂ ಅವು ಬಳಸಲ್ಪಡುವ ಅಪಾಯವಿದೆ ಎಂದು ಹೇಳಿದರು.

ಈ ಒಪ್ಪಂದವನ್ನು ಭಾರತ–ಅಮೆರಿಕ ತಂತ್ರಾತ್ಮಕ ಪಾಲುದಾರಿಕೆಯಲ್ಲಿ ಮತ್ತೊಂದು ಮಹತ್ವದ ಹೆಜ್ಜೆಯಾಗಿ ಪರಿಗಣಿಸಲಾಗುತ್ತಿದೆ. ಜಾಗತಿಕ ತಂತ್ರಜ್ಞಾನ, ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಿಕ್ ವಾಹನಗಳು, ಬ್ಯಾಟರಿ ಮತ್ತು ಕೃತಕ ಬುದ್ಧಿಮತ್ತೆ ಕ್ಷೇತ್ರಗಳಿಗೆ ಅಗತ್ಯವಿರುವ ಅಪರೂಪದ ಖನಿಜ ಸಂಪನ್ಮೂಲಗಳ ಮೇಲಿನ ಅವಲಂಬನೆ ಹೆಚ್ಚುತ್ತಿರುವ ಸಂದರ್ಭದಲ್ಲಿ, ಚೀನಾದ ಪ್ರಭಾವಕ್ಕೆ ಪರ್ಯಾಯ ವ್ಯವಸ್ಥೆ ನಿರ್ಮಿಸಲು ಈ ಒಪ್ಪಂದ ನೆರವಾಗಲಿದೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ, ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಖಂಡಿಸಿ

ತಿ.ನರಸೀಪುರದಲ್ಲಿ ಯುವ ಕಾಂಗ್ರೆಸ್ ಪ್ರತಿಭಟನೆ

ತಿ.ನರಸೀಪುರ, ಮೇ 26– ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣ ಹಾಗೂ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಖಂಡಿಸಿ ಮೈಸೂರು ಜಿಲ್ಲಾ ಗ್ರಾಮಾಂತರ ಯುವ ಕಾಂಗ್ರೆಸ್ ಸಮಿತಿ ಹಾಗೂ ತಿ.ನರಸೀಪುರ ಬ್ಲಾಕ್ ಯುವ ಕಾಂಗ್ರೆಸ್ ಸಮಿತಿಯಿಂದ ಮಂಗಳವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ವಿದ್ಯೋದಯ ಕಾಲೇಜಿನ ಶಿವಾನಂದ ಶರ್ಮಾ ವೃತ್ತದಲ್ಲಿ ಜಮಾಯಿಸಿದ ಯುವ ಕಾಂಗ್ರೆಸ್ ಕಾರ್ಯಕರ್ತರು ಮಾನವ ಸರಪಳಿ ರಚಿಸಿ ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಚಂದನ್‌ಗೌಡ ಮಾತನಾಡಿ, ವಿದ್ಯಾರ್ಥಿಗಳು ವರ್ಷ ಪೂರ್ತಿ ಕಠಿಣ ಪರಿಶ್ರಮದಿಂದ ಪರೀಕ್ಷೆಗೆ ಸಿದ್ಧತೆ ನಡೆಸಿದರೂ, ಪ್ರಶ್ನೆ ಪತ್ರಿಕೆ ಸೋರಿಕೆ ಯಂತಹ ಅಕ್ರಮಗಳಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಇದರಿಂದ ಪರೀಕ್ಷಾ ವ್ಯವಸ್ಥೆಯ ಮೇಲಿನ ನಂಬಿಕೆ ಕುಸಿಯುವಂತಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ತಾಲೂಕು ಅಧ್ಯಕ್ಷ ನಯಾಜ್ ಖಾನ್ ಮಾತನಾಡಿ, ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಪಾರದರ್ಶಕತೆ ಹಾಗೂ ವಿಶ್ವಾಸ ಉಳಿಯಬೇಕಾದರೆ ಪರೀಕ್ಷಾ ಅಕ್ರಮಗಳನ್ನು ಸಂಪೂರ್ಣವಾಗಿ ತಡೆಗಟ್ಟಬೇಕು. ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣವನ್ನು ಸಿಬಿಐ ಅಥವಾ ನ್ಯಾಯಾಂಗ ತನಿಖೆಗೆ ಒಪ್ಪಿಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ನೀಟ್ ಪರೀಕ್ಷೆ ಬರೆದು ವೈದ್ಯರಾಗುವ ಕನಸು ಹೊತ್ತಿದ್ದ 220535 ವಿದ್ಯಾರ್ಥಿಗಳ ಕನಸು ಕೇಂದ್ರ ಸರ್ಕಾರದ ಬೇಜವಾಬ್ದಾರಿಯಿಂದ ನುಚ್ಚು ನೂರಾಗಿದೆ. ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ 89 ಬಾರಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ದೇಶದ ಇತಿಹಾಸದಲ್ಲೇ ಬಹು ದೊಡ್ಡ ಹಗರಣ ಇದಾಗಿದ್ದರೂ, ಕೇಂದ್ರ ಸರ್ಕಾರ ಈ ಬಗ್ಗೆ ಯಾವುದೇ ಮಾಹಿತಿ ನೀಡಲು ಸಿದ್ಧವಿಲ್ಲ. ಪಂಚರಾಜ್ಯ ಚುನಾವಣೆ ಆಗುವವರೆಗೂ ಸುಮ್ಮನಿದ್ದ ಕೇಂದ್ರ ಸರ್ಕಾರ ಚುನಾವಣೆ ಮುಗಿಯುತ್ತಿದ್ದಂತೆ ಕಮರ್ಷಿಯಲ್ ಗ್ಯಾಸ್ ಸಿಲಿಂಡರ್ ಬೆಲೆಯನ್ನು ಹೆಚ್ಚಿಸುವ ಮೂಲಕ ಜನರ ಜೀವನ ದುಸ್ಥರಗೊಳಿಸುವ ಕೆಲಸ ಮಾಡಿದೆಯಲ್ಲದೇ, 4 ಬಾರಿ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳ ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಂಸದ ಸುನೀಲ್ ಬೋಸ್ ಯುವ ಬ್ರಿಗೇಡ್ ಸಂಘಟನೆ ಅಧ್ಯಕ್ಷ ಕುಮಾರ್ ರಾಮೇಗೌಡ ಮಾತನಾಡಿ, ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಮಾಡಿರುವುದರಿಂದ ಸಾಮಾನ್ಯ ಜನರ ಬದುಕು ದುಸ್ತರವಾಗಿದೆ. ಇಂಧನ ದರ ಏರಿಕೆಯಿಂದ ಸಾರಿಗೆ ವೆಚ್ಚ ಹೆಚ್ಚಾಗಿ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ರೈತರು ಕೃಷಿ ಚಟುವಟಿಕೆಗಳಿಗೆ ಬಳಸುವ ಯಂತ್ರೋಪಕರಣಗಳು, ವಾಹನಗಳ ವೆಚ್ಚ ಹೆಚ್ಚಳದಿಂದ ಆರ್ಥಿಕ ಸಂಕಷ್ಟ ಅನುಭವಿಸುತ್ತಿದ್ದಾರೆ. ಕೂಲಿ ಕಾರ್ಮಿಕರು, ಮಧ್ಯಮ ವರ್ಗದ ಕುಟುಂಬಗಳು ಹಾಗೂ ಸಣ್ಣ ವ್ಯಾಪಾರಿಗಳು ಬೆಲೆ ಏರಿಕೆ ಬಿಸಿಯನ್ನು ಎದುರಿಸುತ್ತಿದ್ದಾರೆ ಎಂದು ದೂರಿದರು.

ಇದೇ ವೇಳೆ ತಾಲೂಕು ಕಚೇರಿಗೆ ತೆರಳಿದ ಪ್ರತಿಭಟನಾಕಾರರು ಶಿರಸ್ತೇದಾರ್ ಮಂಜುಳಾ ಅವರಿಗೆ ಮನವಿ ಸಲ್ಲಿಸಿದರು. ಕರ್ನಾಟಕ ರಾಜ್ಯ ಅಹಿಂದ ಬ್ರಿಗೇಡ್ ರಾಜ್ಯಾಧ್ಯಕ್ಷ ಸೋಸಲೆ ದೇವರಾಜ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಚಂದನ್ ಗೌಡ, ತಿ.ನರಸೀಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನೀಲಸೋಗೆ ಪ್ರದೀಪ್, ಕಾಂಗ್ರೆಸ್ ಮುಖಂಡ ಚೌಹಳ್ಳಿ ಮಲ್ಲೇಶ್, ಯುವ ಬ್ರಿಗೇಡ್ ಸದಸ್ಯರಾದ ಹಸುವಟ್ಟಿ ಸುದರ್ಶನ್, ಕೇತಹಳ್ಳಿ ಹರೀಶ್, ವಾಟಾಳ್ ಚಿನ್ನಸ್ವಾಮಿ, ತಲಕಾಡು ರಘು, ವಜ್ರ, ಹಿರಿಯೂರ್ ಚೆಲುವರಾಜ್, ನೀಲಸೋಗೆ ಹರೀಶ್, ರಾಜೇಶ್, ಮೋಹನ್, ವ್ಯಾಸರಾಜಾಪುರ ಮಧು, ಸೋಸಲೆ ಕಾರ್ತಿಕ್, ತೊಟ್ಟವಾಡಿ ರಾಜೇಂದ್ರ, ಚೌಹಳ್ಳಿ ಗಂಗಾಧರ್, ಕುರುಬೂರು ಶಿವರಾಜ್, ಕಾಂಗ್ರೆಸ್ ಮುಖಂಡರು, ಸುನೀಲ್ ಬೋಸ್ ಯುವ ಬ್ರಿಗೇಡ್ ಸದಸ್ಯರು ಹಾಗೂ ಅಹಿಂದ ಮುಖಂಡರು ಹಾಜರಿದ್ದರು.



ತಿ.ನರಸೀಪುರದಲ್ಲಿ ಯುವ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

> ನೀಟ್ ಪರೀಕ್ಷೆಯಲ್ಲಿ ಬಹು ದೊಡ್ಡ ಹಗರಣ ನಡೆದಿದ್ದರೂ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಈ ಬಗ್ಗೆ ಯಾವುದೇ ಮಾಹಿತಿ ನೀಡುತ್ತಿಲ್ಲ. ಪ್ರಧಾನಿ ನರೇಂದ್ರ ಮೋದಿ ಸಹ ಪತ್ರಿಕಾಗೋಷ್ಠಿ ನಡೆಸಿ ಪ್ರಕರಣದ ಬಗ್ಗೆ ಮಾತನಾಡಲಿಲ್ಲ. ಕೇಂದ್ರ ಸರ್ಕಾರ ಪರೀಕ್ಷೆ ನಡೆಸಲು ಅಸಮರ್ಥವಾಗಿದೆ. ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ನೈತಿಕ ಜವಾಬ್ದಾರಿ ಹೊತ್ತು ಕೇಂದ್ರ ಶಿಕ್ಷಣ ಸಚಿವರು ರಾಜೀನಾಮೆ ನೀಡಬೇಕು.
> – ಚಂದನ್‌ಗೌಡ, ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ.

ಸಾ.ರಾ.ಮಹೇಶ್ ಹುಟ್ಟುಹಬ್ಬ ಹಿನ್ನೆಲೆ

ಮೇ 29, ಜೆಡಿಎಸ್ ಮುಖಂಡರ ಪೂರ್ವಭಾವಿ ಸಭೆ


ಸಾ.ರಾ.ಮಹೇಶ್

ಕೆ.ಆರ್.ನಗರ, ಮೇ 26– ಮಾಜಿ ಸಚಿವ ಸಾ.ರಾ. ಮಹೇಶ್ ಅವರ 60ನೇ ಹುಟ್ಟುಹಬ್ಬ ಹಿನ್ನೆಲೆಯಲ್ಲಿ ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳ ಪೂರ್ವಭಾವಿ ಸಭೆಯನ್ನು ಮೇ 29 ರಂದು ಬೆಳಗ್ಗೆ 11 ಗಂಟೆಗೆ ಪಟ್ಟಣದ ಪಿಎಲ್‌ಡಿ ಬ್ಯಾಂಕ್ ರೈತ ಸಮುದಾಯ ಭವನದಲ್ಲಿ ಆಯೋಜಿಸಲಾಗಿದೆ ಎಂದು ಅವಳಿ ತಾಲೂಕಿನ ಜೆಡಿಎಸ್ ಅಧ್ಯಕ್ಷರಾದ ಹಂಪಾಪುರ ಕುಮಾರ್, ಸಾಲಿಗ್ರಾಮ ಎಸ್.ಪಿ.ರಾಜಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆ.10ಕ್ಕೆ ನಮ್ಮ ನೆಚ್ಚಿನ ನಾಯಕ, ಮಾಜಿ ಶಾಸಕ ಸಾ.ರಾ.ಮಹೇಶ್ ಅವರಿಗೆ 60 ವರ್ಷ ಆಗಲಿದ್ದು, ಅಂದು ವಿಭಿನ್ನ ರೀತಿಯಲ್ಲಿ ಹುಟ್ಟುಹಬ್ಬ ಆಚರಿಸಲು ಪಕ್ಷದ ಮುಖಂಡರು, ಹಿತೈಷಿಗಳು, ಅಭಿಮಾನಿಗಳ ಒತ್ತಾಸೆಯಾಗಿದೆ ಹೀಗಾಗಿ ಪಟ್ಟಣದ ಬಯಲು ರಂಗಮಂದಿರದಲ್ಲಿ (ರೇಡಿಯೋ ಮೈದಾನ) ಬೃಹತ್ ವೇದಿಕೆ ನಿರ್ಮಿಸಿ ಸಾ.ರಾ.ಸ್ನೇಹ ಬಳಗದ ಮೂಲಕ ವಿವಿಧ ಸಮಾಜ ದೇವೋಭವ ಕಾರ್ಯಕ್ರಮ ಹಮ್ಮಿಕೊಂಡು ಬಡವರು, ನೊಂದವರು, ವಿಕಲಚೇತನರು, ದುರ್ಬಲ ವರ್ಗದವರನ್ನು ಗುರುತಿಸಿ ಸವಲತ್ತುಗಳನ್ನು ವಿತರಿಸಲು ಚಿಂತಿಸಲಾಗಿದೆ. ಹಾಗಾಗಿ ಶುಕ್ರವಾರ ನಡೆಯಲಿರುವ ಪೂರ್ವಭಾವಿ ಸಭೆಗೆ ತಪ್ಪದೇ ಕಡ್ಡಾಯವಾಗಿ ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನ ಜೆಡಿಎಸ್ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಿ ಎಂದು ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್ ಕೋರಿದ್ದಾರೆ.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ಎಂ.ಚಂದ್ರಕುಮಾರ್ ಅಧ್ಯಕ್ಷ


ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು.

ಹೆಚ್.ಡಿ.ಕೋಟೆ, ಮೇ 26– ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಹೆಗ್ಗಡಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕ ಎಂ.ಚಂದ್ರಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಳಿದಂತೆ ಉಪಾಧ್ಯಕ್ಷರಾಗಿ ಜೂಲಿಯೆಟ್ ವಿಲ್ಮಾ, ಎಲ್.ರೂಪ. ಪ್ರಧಾನ ಕಾರ್ಯದರ್ಶಿಯಾಗಿ ಎಂ.ಪ್ರಕಾಶ್, ಖಜಾಂಚಿ ಯಶವಂತ್ ಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ರಶೀದ್ ಬೇಗ್ ತಿಳಿಸಿದ್ದಾರೆ. ಈ ವೇಳೆ ನಿರ್ದೇಶಕರಾದ ಲಿಂಗರಾಜು, ರಘುನಾಥ್, ಸ್ವಾಮಿಗೌಡ ಇತರರಿದ್ದರು.

ಕಂಪಲಾಪುರ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ


ಕಂಪಲಾಪುರ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರನ್ನು ಸನ್ಮಾನಿಸಲಾಯಿತು.

ಕಂಪಲಾಪುರ, ಮೇ 26– ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಕೆ.ಎಂ.ಲಕ್ಷ್ಮಣ್ ಹಾಗೂ ಉಪಾಧ್ಯಕ್ಷೆಯಾಗಿ ಭಾಗ್ಯ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದಿನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾದ ಮಾದೇವ ಹಾಗೂ ತಮ್ಮಯ್ಯ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಲಕ್ಷ್ಮಣ ಹಾಗೂ ಭಾಗ್ಯ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಸಿಇಓ ಕೆ.ಎನ್.ಹರ್ಷ ಘೋಷಿಸಿದರು.

ಜಿಪಂ ಮಾಜಿ ಸದಸ್ಯ ಶಿವಣ್ಣ, ತಾಪಂ ಮಾಜಿ ಸದಸ್ಯ ಎ.ಟಿ.ರಂಗಸ್ವಾಮಿ, ಪಿರಿಯಾಪಟ್ಟಣ ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ರಾಮು, ಜಯಣ್ಣ, ಲೋಕೇಶ್, ನಿರ್ದೇಶಕರಾದ ನಾಗೇಗೌಡ, ಮಹದೇವ್, ಕೆ.ಕುಮಾರ್, ಪ್ರಕಾಶ್, ಸಂತೋಷ್, ಗಿರೀಶ್, ರವಿ, ಮಹದೇವ, ಮಣಿ ಮಹೇಶ್, ತಮ್ಮಯ್ಯ ಸೇರಿದಂತೆ ಸಿಬ್ಬಂದಿ ಹಾಜರಿದ್ದರು.

ಹನುಮ ಜಯಂತಿ: ಮಕ್ಕಳ ವೇಷಭೂಷಣ ಸ್ಪರ್ಧೆ


ಹನುಮ ಜಯಂತಿ ಅಂಗವಾಗಿ ಮಕ್ಕಳ ವೇಷಭೂಷಣ ಸ್ಪರ್ಧೆ ನಡೆಯಿತು.

ನಂಜನಗೂಡು, ಮೇ 26– ಹನುಮ ಜಯಂತಿ ಪ್ರಯುಕ್ತ ನಗರದ ಕೆಂಪೇಗೌಡ ಬಡಾವಣೆಯಲ್ಲಿ ಮಕ್ಕಳಿಗಾಗಿ ವೈವಿಧ್ಯಮಯ ವೇಷಭೂಷಣ ಸ್ಪರ್ಧೆ ಆಯೋಜಿಸಲಾಗಿತ್ತು.

ನಂಜನಗೂಡು ನಗರ ಹಾಗೂ ಗ್ರಾಮಾಂತರ ಪ್ರದೇಶಗಳಿಂದ 70ಕ್ಕೂ ಹೆಚ್ಚು ಪುಟಾಣಿ ಮಕ್ಕಳು ಭಾಗವಹಿಸಿ ರಾಮ, ಸೀತಾ, ಹನುಮಂತ, ಜಟಾಯು, ಮಹಾಕಾಳಿ, ಶಿವಾಜಿ, ಭಗತ್ ಸಿಂಗ್, ವಿವೇಕಾನಂದ ಸೇರಿದಂತೆ ದೇವತೆಗಳು ಹಾಗೂ ಸ್ವಾತಂತ್ರ್ಯ ಹೋರಾಟಗಾರರ ವೇಷಧಾರಿಗಳಾಗಿ ಮಹಾಪುರುಷರ ಸಂದೇಶಗಳನ್ನು ತಿಳಿಸಿದರು.

ಕಾರ್ಯಕ್ರಮವನ್ನು ದೇವಿರಮ್ಮನಹಳ್ಳಿ ಶರಣ ಸಂಗಮ ಮಠದ ಶ್ರೀಪಟ್ಟದ ನಾಗರಾಜ ಸ್ವಾಮೀಜಿ ಉದ್ಘಾಟಿಸಿ ಮಕ್ಕಳಿಗೆ ಆಶೀರ್ವಚನ ನೀಡಿದರು. ಸ್ಪರ್ಧೆಯನ್ನು 1 ರಿಂದ 5 ವರ್ಷದ ಮಕ್ಕಳ ವಿಭಾಗ ಹಾಗೂ 5 ರಿಂದ 12 ವರ್ಷದ ಮಕ್ಕಳ ವಿಭಾಗವೆಂದು ಎರಡು ವಿಭಾಗಗಳಲ್ಲಿ ನಡೆಸಲಾಯಿತು.

1 ರಿಂದ 5 ವರ್ಷದ ಮಕ್ಕಳ ವಿಭಾಗದಲ್ಲಿ ಜಟಾಯು ಪಾತ್ರಧಾರಿ ಪೂರ್ವಿ ಪ್ರಥಮ ಸ್ಥಾನ ಪಡೆದರು. ಶಿವಾಜಿ ಪಾತ್ರಧಾರಿ ನೀಲಗ್ರೀವ ದ್ವಿತೀಯ ಸ್ಥಾನ ಹಾಗೂ ಶಿವನ ಪಾತ್ರಧಾರಿ ರಜತ್ ತೃತೀಯ ಸ್ಥಾನ ಗಳಿಸಿದರು.

5 ರಿಂದ 12 ವರ್ಷದ ಮಕ್ಕಳ ವಿಭಾಗದಲ್ಲಿ ಮಹಾಕಾಳಿ ಪಾತ್ರಧಾರಿ ತ್ರಿಷಿಕಾ ಶಾಸ್ತ್ರಿ ಪ್ರಥಮ ಸ್ಥಾನ, ಶಿವಾಜಿ ಪಾತ್ರ ಧಾರಿ ಧರ್ಮಾ. ಆರ್ ದ್ವಿತೀಯ ಹಾಗೂ ಶ್ರೀರಾಮನ ಪಾತ್ರಧಾರಿ ವಿಷ್ಣು ತೃತೀಯ ಸ್ಥಾನ ಪಡೆದರು. ವಿಜೇತರಿಗೆ ಆಕರ್ಷಕ ಬಹುಮಾನ ಹಾಗೂ ನೆನಪಿನ ಕಾಣಿಕೆ ವಿತರಿಸಲಾಯಿತು. ಜೊತೆಗೆ ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ಮಕ್ಕಳಿಗೂ ಸದ್ಗುರು ಆಯುರ್ವೇದ ಸಂಸ್ಥೆಯಿಂದ ಉಡುಗೊರೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಮಕ್ಕಳ ಅಭಿನಯ ಮತ್ತು ವೇಷಭೂಷಣವನ್ನು ನೋಡಿ ನಾಗರಿಕರು ಮನಸಾರೆ ಮೆಚ್ಚಿ ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸಿದರು.

ಮಹಿಳೆ ನಾಪತ್ತೆ



ಮಲ್ಕುಂಡಿ, ಮೇ 26– ಮಹಿಳೆಯೊಬ್ಬರು ನಾಪತ್ತೆಯಾಗಿರುವ ಸಂಬಂಧ ನಂಜನಗೂಡು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಂಜನಗೂಡು ತಾಲೂಕಿನ ಕಸುವಿನಹಳ್ಳಿ ಗ್ರಾಮದ ನಿವಾಸಿ ಶಿವರುದ್ರಮ್ಮ(60) ನಾಪತ್ತೆಯಾದವರು. ಈಕೆ ಮೇ 25ರಂದು ಗ್ರಾಮದ ಹೊರವಲಯದಲ್ಲಿರುವ ತಮ್ಮ ಜಮೀನಿಗೆ ಹೋದವರು ಇದುವರೆಗೂ ಮನೆಗೆ ಆಗಮಿಸಿಲ್ಲ. ಅಲ್ಲದೇ ನಾನು ಅಕ್ಕಪಕ್ಕದ ಮನೆಯವರ ವಿಚಾರಿಸಲಾಗಿ ಯಾವುದೇ ಮಾಹಿತಿ ದೊರೆತಿಲ್ಲ. ಹೀಗಾಗಿ ನನ್ನ ಪತ್ನಿಯನ್ನು ಹುಡುಕಿ ಕೊಡುವಂತೆ ಪತಿ ಗುರುಸ್ವಾಮಪ್ಪ ದೂರು ನೀಡಿದ್ದು, ಈಕೆ ಬಗ್ಗೆ ಮಾಹಿತಿ ಸಿಕ್ಕಲ್ಲಿ ನಂಜನಗೂಡು ಗ್ರಾಮಾಂತರ ಠಾಣೆ ಮೊ:9480805049 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಯೋಗಿಗಳ ಅನುಗ್ರಹದಿಂದ ಮಾತ್ರ ಮೋಕ್ಷ ಸಾಧ್ಯ

ಕೈವಾರ ಕ್ಷೇತ್ರದ ಧರ್ಮಾಧಿಕಾರಿ ಡಾ.ಎಂ.ಆರ್.ಜಯರಾಮ್ ಅಭಿಮತ


ಸುತ್ತೂರು ಶ್ರೀಕ್ಷೇತ್ರದಲ್ಲಿ ಅಧ್ಯಯನ ಶಿಬಿರದ ಸಮಾರೋಪ ಸಮಾರಂಭ ನಡೆಯಿತು.

ನಂಜನಗೂಡು, ಮೇ 26– ತನ್ನನ್ನು ತಾನು ಅರಿಯುವುದೇ ಮುಕ್ತಿ ಎಂದು ಕೈವಾರ ಕ್ಷೇತ್ರದ ಧರ್ಮಾಧಿಕಾರಿ ಡಾ.ಎಂ.ಆರ್.ಜಯರಾಮ್ ತಿಳಿಸಿದರು.

ತಾಲೂಕಿನ ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರು ಶ್ರೀವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠಗಳ ಸಂಯುಕ್ತಾಶ್ರಯ ದಲ್ಲಿ ನಡೆದ ಅಧ್ಯಯನ ಶಿಬಿರದಲ್ಲಿ ಸಮಾರೋಪ ಭಾಷಣ ಮಾಡಿದ ಅವರು, ಶಾಸ್ತ್ರೀಯ ಗ್ರಂಥಗಳ ಅಧ್ಯಯನದಿಂದ ಅನುಭವ ಮತ್ತು ಅರಿವು ಪಡೆಯಬಹುದು. ಯೋಗಿಗಳ ಅನುಗ್ರಹದಿಂದ ಮಾತ್ರ ಮೋಕ್ಷ ಸಾಧ್ಯ. ಇದಕ್ಕೆ ಯೋಗಿಗಳ ಆಶ್ರಯ ಅತೀ ಮುಖ್ಯ. ವ್ಯಕ್ತಿಯು ಯಾವುದೇ ಸ್ವಾರ್ಥವಿಲ್ಲದೇ ಸಾಮಾಜಿಕ ಸೇವೆ ಮಾಡಿದಾಗ ಜೀವನ ಸಾರ್ಥಕವಾಗುತ್ತದೆ ಎಂದು ತಿಳಿಸಿದರು.

ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಮಾತನಾಡಿ, ಶಿಬಿರದಿಂದ ತಮ್ಮೆಲ್ಲರಿಗೆ ಆತ್ಮ ವಿಕಾಸವಾಗಿದೆ. ನಿಜಗುಣ ಶಿವಯೋಗಿಗಳು ರಚಿಸಿದ ವಿವೇಕ ಚಿಂತಾಮಣಿ ಗ್ರಂಥ ಆಧ್ಯಾತ್ಮಿಕ ಮಾಹಿತಿ ಕೃತಿಯಾಗಿದೆ. ಮನಸ್ಸಿನಲ್ಲಿ ಉಂಟಾಗುವ ದ್ವಂದ್ವಗಳಿಗೆ ಇಲ್ಲಿ ಉತ್ತರವಿದೆ. ಅಜ್ಞಾನ ನಿವಾರಣೆಯಾಗಿ ವಿಶಿಷ್ಟ ಅನುಭವ ಮನದಲ್ಲಿ ಉಂಟಾಗುತ್ತದೆ. ಈ ಗ್ರಂಥದ ಅಧ್ಯಯನಕ್ಕೆ ಅವಕಾಶ ಕಲ್ಪಿಸಿದ ಪೂಜ್ಯ ಶ್ರೀಗಳ ಕಾರ್ಯ ಅನನ್ಯ ಎಂದರು.

ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ, ಸಮಾಜ ಬದಲಾವಣೆಗೆ ಕೇವಲ ಶಸ್ತ್ರವನ್ನು ಬಳಸಿದರೆ ಮಾತ್ರ ಸಾಲದು. ಶಾಸ್ತ್ರವು ಬೇಕು. ಸಮಾಜದ ಸುಧಾರಣೆಗೆ ಆಧ್ಯಾತ್ಮಿಕ ಚಿಂತಕರ ಮಾರ್ಗದರ್ಶನ ಅವಶ್ಯಕವಾಗಿದೆ ಎಂದರು.

ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆ ಮಾಜಿ ಅಧ್ಯಕ್ಷ ಹೆಚ್.ವಿ.ವೆಂಕಟೇಶ್ ಮಾತನಾಡಿ, ವಿಜ್ಞಾನ ಹಾಗೂ ತಾಂತ್ರಿಕತೆಯ ಸಹಾಯದಿಂದ ಪ್ರಪಂಚ ಮುಂದುವರೆದಿದೆ. ಆದರೆ ಸಮಾಜದಲ್ಲಿ ಶಾಂತಿಯುತ ಜೀವನ ನಡೆಸಲು ಆಧ್ಯಾತ್ಮಿಕ ಅರಿವು ಬಹು ಮುಖ್ಯ. ಯುವ ಪೀಳಿಗೆ ಮಾದಕ ವ್ಯಸನಗಳಿಗೆ ತುತ್ತಾಗುತ್ತಿದ್ದಾರೆ. ಅವರ ನಡೆನುಡಿಗಳ ಸುಧಾರಣೆಗೆ ಗುರುಹಿರಿಯರ ಕೃಪೆ ಬಹಳ ಮುಖ್ಯ ಎಂದರು.

ನಿವೃತ್ತ ಪ್ರಾಧ್ಯಾಪಕ ಪ್ರೊ.ಕೆ.ಅನಂತರಾಮು ಮಾತನಾಡಿ, ಶಿಬಿರವು ಯಶಸ್ವಿಯಾಗಿ ಸಂಪೂರ್ಣಗೊಂಡಿದೆ. ಸಾಧನೆಯ ಮೂಲ ಬೇರುಗಳು ಸುತ್ತೂರು ಶ್ರೀಕ್ಷೇತ್ರದಲ್ಲಿದ್ದು, ಅದರ ಫಲ ರಾಷ್ಟ್ರಾದ್ಯಂತ ವ್ಯಾಪಿಸಿದೆ. ಮನುಷ್ಯನು ತಾನು ಕಲಿತ ವಿದ್ಯೆಯನ್ನು ಸಮಾಜಕ್ಕೆ ಉಪಯುಕ್ತವಾಗುವಂತೆ ಬಳಸುವುದೇ ನಿಜವಾದ ವಿವೇಕ. 'ವಸುದೈವ ಕುಟುಂಬಕಂ' ಎನ್ನುವಂತೆ ವಿಶ್ವಮಾನವ ಪರಿಕಲ್ಪನೆಯನ್ನು ಈ ಶಿಬಿರಗಳು ನೀಡಿವೆ ಎಂದು ತಿಳಿಸಿದರು.

ಘೋಡಗೇರಿ ಶ್ರೀಶಿವಾನಂದ ಮಠದ ಶ್ರೀಮಲ್ಲಯ್ಯ ಸ್ವಾಮೀಜಿ ಮಾತನಾಡಿದರು. ಹುಲಿಯೂರು ದುರ್ಗದ ಶ್ರೀಸಿದ್ಧಲಿಂಗ ಶಿವಾನಂದ ಸ್ವಾಮೀಜಿ, ಸಾಧ್ವಿ ಉನ್ಮೇಷ ಭಾರತಿ ಮಾತಾಜಿ, ಬಿ.ಎಸ್.ಜನಗೊಂಡ, ಅರುಣ ಶಿರಗುಪ್ಪಿ ಹಾಗೂ ಕು.ಸಿಂಚನಾ ಅನಿಸಿಕೆ ಹಂಚಿಕೊಂಡರು. ಮಾತೆ ಬಸವಾಂಜಲಿ ಪ್ರಾರ್ಥಿಸಿದರು. ಚುಂಚನಹಳ್ಳಿ ಮತ್ತು ನವಿಲೂರು ಮಠಗಳ ಶ್ರೀಚನ್ನಬಸವ ಸ್ವಾಮೀಜಿ ಸ್ವಾಗತಿಸಿದರು. ಕೆ.ಪಿ.ಬಸವರಾಜು ಶಿಬಿರದ ವರದಿ ಮಂಡಿಸಿದರು. ಬಿ. ಮಾದಪ್ಪ ವಂದಿಸಿದರು. ಆಲಮಟ್ಟಿಯ ಡಾ.ರುದ್ರಮುನಿ ಸ್ವಾಮೀಜಿ ನಿರೂಪಿಸಿದರು.

ಬೀದರ್‌ನಲ್ಲಿ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ಪ್ರಕರಣ

ಆರೋಪಿಗಳಿಗೆ ಗಲ್ಲು ಶಿಕ್ಷೆ ವಿಧಿಸಲು ಆಗ್ರಹಿಸಿ ಮನವಿ


ತಹಸೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಹುಣಸೂರು, ಮೇ 26– ಬೀದರ್‌ನಲ್ಲಿ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ವೆಸಗಿದ ಆರೋಪಿಗಳನ್ನು ಕೂಡಲೇ ಬಂಧಿಸಿ, ಗಲ್ಲು ಶಿಕ್ಷೆ ವಿಧಿಸಬೇಕು. ಶಿವಮೊಗ್ಗದಲ್ಲಿ ದಲಿತರಿಗೆ ರಸ್ತೆ ಸಂಚಾರ ನಿರ್ಬಂಧಿಸಿ ದೌರ್ಜನ್ಯವೆಸಗಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ದಲಿತ ಮಹಿಳಾ ಒಕ್ಕೂಟ ಹಾಗೂ ದಸಂಸ ವತಿಯಿಂದ ತಹಸೀಲ್ದಾರ್ ಮಂಜುನಾಥ್ ಅವರಿಗೆ ಮನವಿ ಸಲ್ಲಿಸಲಾಯಿತು.

ದಲಿತ ಮಹಿಳಾ ಒಕ್ಕೂಟದ ಜಿಲ್ಲಾ ಸಂಚಾಲಕಿ ಮಹದೇವಮ್ಮ ಮಾತನಾಡಿ, ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲೂಕಿನ ಅರೆಬೆಳಸಿ ಗ್ರಾಮದಲ್ಲಿ ಪ.ಜನಾಂಗದ ಕಾಲೋನಿಯಲ್ಲಿ ವಾಸಿಸುತ್ತಿರುವ ದಲಿತ ಸಮುದಾಯದವರು ತಿರುಗಾಡುವ ರಸ್ತೆಯನ್ನು ಮತ್ತೊಂದು ಸಮುದಾಯದವರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವುದನ್ನು ತೀವ್ರವಾಗಿ ಖಂಡಿಸುತ್ತೇನೆ. ಸರ್ಕಾರ ದಲಿತರ ಅಭಿವೃದ್ಧಿಗೆ ಹಲವು ಕ್ರಮ ಕೈಗೊಂಡಿದ್ದರೂ, ನಿರಂತರ ದೌರ್ಜನ್ಯ ನಡೆಯುತ್ತಲೇ ಇದೆ ಎಂದ ಅವರು, ಬೀದರ್‌ನಲ್ಲಿ ಪ್ರತಿಭಾವಂತ ಕಬಡ್ಡಿ ಆಟಗಾರ್ತಿ ಶೋಭಾ ರಾಣಡೆ ಎಂಬ ದಲಿತ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ಎಸಗಿ ಹೀನಾಯವಾಗಿ ಕೊಲೆ ಮಾಡಿರುವುದು ಇಡೀ ಸಮಾಜವೇ ತಲೆ ತಗ್ಗಿಸುವ ವಿಚಾರ. ಆ ಮೂಲಕ ಒಬ್ಬ ಉದಯೋನ್ಮುಖ ಕ್ರೀಡಾ ಪಟುವಿನ ಕನಸು, ಭವಿಷ್ಯ ಮತ್ತು ಜೀವನವನ್ನು ಅಮಾನವೀಯವಾಗಿ ಹೊಸಕಿ ಹಾಕಿರುವುದು ಮನಕಲಕುವಂತೆ ಮಾಡಿದೆ ಎಂದರು.

ಹೀಗಾಗಿ ಇಂತಹ ಕ್ರೂರ ಕೃತ್ಯ ಎಸಗಿದ ದುಷ್ಕರ್ಮಿಗಳಿಗೆ ಕಠಿಣ ಶಿಕ್ಷೆಯಾಗಬೇಕು. ಅಲ್ಲದೇ ಇನ್ನು ಮುಂದೆ ಇಂತಹ ಅಪರಾಧ ಮಾಡದಂತೆ ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ತಪ್ಪಿತಸ್ಥರು ಎಷ್ಟೇ ಪ್ರಭಾವಿಗಳಾಗಿದ್ದರೂ ಕಾನೂನಿನ ಮುಂದೆ ಎಲ್ಲರೂ ಒಂದೇ ಎಂಬ ನಿಟ್ಟಿನಲ್ಲಿ ಅವರಿಗೆ ಉಗ್ರ ಶಿಕ್ಷೆ ವಿಧಿಸಬೇಕು. ಆ ಮೂಲಕ ಬಾಲಕಿ ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಎಂದು ತಹಸೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದರು.

ಈ ವೇಳೆ ಅಂಬೇಡ್ಕರ್ ವಾದ ಜಿಲ್ಲಾ ಸಂಘಟನಾ ಸಂಚಾಲಕ ಕೃಷ್ಣ, ಅಹಿಂದ ಜಾಗೃತ ವೇದಿಕೆ ನಗರಾಧ್ಯಕ್ಷ ಸೋಮಣ್ಣ, ತಾಲೂಕು ಸಂಯೋಜಕ ವೇಣು, ರಾಜು, ಹಿರಿಯ ಹೋರಾಟಗಾರ ಜೆ.ಮಾದೇವ್, ಮಹಿಳಾ ಸಂಘಟನಾ ಸಂಚಾಲಕಿ ಗಿರಿಜಮ್ಮ, ವೀಣಾ, ಪ್ರಭಾವತಿ ಇತರರಿದ್ದರು.

ವಿಜೃಂಭಣೆಯ ಶ್ರೀಬಸವೇಶ್ವರ ದೇವರ ಓಕಳಿ ಹಬ್ಬ


ಹೆಬ್ಬಾಳು ಗ್ರಾಮದಲ್ಲಿ ಶ್ರೀಬಸವೇಶ್ವರ ದೇವರ ಓಕಳಿ ಹಬ್ಬ ವಿಜೃಂಭಣೆಯಿಂದ ನಡೆಯಿತು.

ಕೆ.ಆರ್.ನಗರ, ಮೇ 26– ತಾಲೂಕಿನ ಹೆಬ್ಬಾಳು ಗ್ರಾಮದಲ್ಲಿ ಶ್ರೀಬಸವೇಶ್ವರ ದೇವರ ಓಕಳಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಓಕಳಿ ಹಬ್ಬ ಸಾಮರಸ್ಯ ಮೂಡಿಸುವ ಜೊತೆಗೆ ಸಮೃದ್ಧಿಯ ಸಂಕೇತವಾಗಿದೆ. ಊರು ಹಸನಾಗಲು ತಮ್ಮೂರಿನ ದೈವ– ದೇವರಿಗೆ ಹೆಬ್ಬಾಳು ಗ್ರಾಮದ ಜನರು ನೀಡುವ ಸೇವೆಯಾಗಿದೆ. ಈ ಬಾರಿ ಉತ್ತಮ ಮಳೆಯಾಗಿ ಬೆಳೆ ಬರಲು ಗ್ರಾಮದ ಶ್ರೀಬಸವೇಶ್ವರ ದೇವರಿಗೆ ಗ್ರಾಮಸ್ಥರು ಪ್ರಾರ್ಥನೆ ಸಲ್ಲಿಸಿದರು.

ಓಕಳಿ ಹಬ್ಬಕ್ಕೂ ಮುನ್ನ ಭಾನುವಾರ ರಾತ್ರಿ ಗ್ರಾಮದ ಗ್ರಾಮ ದೇವತೆ ಮಾರಮ್ಮ ದೇವಿಗೆ ತಂಬಿಟ್ಟು ಹೊತ್ತ ಬಾಲಕಿಯರು, ಮುತ್ತೈದೆಯರು ಮಂಗಳವಾದ್ಯದೊಂದಿಗೆ ರಾಜ ಬೀದಿಯಲ್ಲಿ ಮೆರವಣಿಗೆಯಲ್ಲಿ ಸಾಗಿ ದೇವಾಲಯಕ್ಕೆ 3 ಬಾರಿ ಪ್ರದಕ್ಷಿಣೆ ಹಾಕಿ ಮಾರಮ್ಮ ದೇವಿಗೆ ತಂಬಿಟ್ಟು ಆರತಿ ಬೆಳಗಿದರು. ಬಳಿಕ ದೇವಸ್ಥಾನದ ಮುಂಭಾಗ ಗ್ರಾಮದ ಮುಖಂಡರು ಹಾಗೂ ಯಜಮಾನರು ಧೂಳ್ ಮರಿಯನ್ನು ಹೊಡೆಯುವ ಮೂಲಕ ದೇವರಿಗೆ ಹರಕೆ ತೀರಿಸಿದರು.

ಸೋಮವಾರ ಬೆಳಗ್ಗೆ ಚಾಮರಾಜ ಬಲದಂಡೆ ನಾಲೆ ನೀರಿಗೆ ಮುತ್ತೈದೆಯರು ಪೂಜೆ ಸಲ್ಲಿಸಿ ಗ್ರಾಮದ ಮಹಿಳೆಯರು, ಬಾಲಕಿಯರು, ಯುವತಿಯರು, ನೀರಿನ ಬಿಂದಿಗೆಯಲ್ಲಿ ನೀರು ತುಂಬಿಕೊಂಡು ತಮಟೆ, ಡೊಳ್ಳು, ನಗಾರಿಯೊಂದಿಗೆ ಗ್ರಾಮದ ಹೃದಯ ಭಾಗದ ಶ್ರೀ ಬಸವೇಶ್ವರ ದೇವಾಲಯದ ಮುಂಭಾಗದಲ್ಲಿರುವ ಓಕಳಿ ಹೊಂಡಕ್ಕೆ ನೀರೆರೆದರು.

ಬಳಿಕ ಶ್ರೀಬಸವೇಶ್ವರ ದೇವರನ್ನು ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ, ಪಲ್ಲಕ್ಕಿ ಹೊತ್ತು ಗ್ರಾಮದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಮಾಡಲಾಯಿತು. ಬಳಿಕ ಗ್ರಾಮೀಣ ಕಲೆಗಳಾದ ಹುಲಿವೇಷ, ಕೀಲು ಕುದುರೆ, ಮಹಿಷಿ ಮರಿ ಹುಲಿಗಳು, ಯಮಕಿಂಕರ, ರಾವಣ ವೇಷ ಸೇರಿದಂತೆ ಅನೇಕ ವಿಭಿನ್ನ ರೀತಿಯ ಜನಪದ ಸೊಗಡನ್ನು ಗ್ರಾಮದಲ್ಲಿ ಪ್ರದರ್ಶಿಸಲಾಯಿತು.

ಹಬ್ಬದ ಅಂಗವಾಗಿ ಗ್ರಾಮದಲ್ಲಿ ಹಸಿರೆಲೆಯ ತೋರಣ, ತೆಂಗಿನ ಗರಿ, ಅಡಕೆ, ಹೊಂಬಾಳೆಗಳಿಂದ ಅಲಂಕರಿಸಿದರೇ, ಗ್ರಾಮದ ಕೆಂಪೇಗೌಡ ಮುಖ್ಯರಸ್ತೆಯಿಂದ ಗ್ರಾಮದ ಹೆಬ್ಬಾಗಿಲುವರೆಗೂ ವಿವಿಧ ದೇವತೆಗಳ ಚಿತ್ರವಿರುವ ಎಲ್‌ಇಡಿ ಲೈಟ್‌ಗಳಿಂದ ಜಗಮಗಿಸುವ ದೀಪಾಲಂಕಾರ ಮಾಡಲಾಗಿತ್ತು.

ಇದೇ ವೇಳೆ ಮಾಜಿ ಸಚಿವ ಸಾ.ರಾ.ಮಹೇಶ್ ದೇವಾಲಯಕ್ಕೆ ಆಗಮಿಸಿ ಪೂಜೆ ಸಲ್ಲಿಸಿದರು. ಬಳಿಕ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಓಕಳಿ ಹಬ್ಬ ಹಾಗೂ ಗ್ರಾಮೀಣ ಸಂಸ್ಕೃತಿಯನ್ನು ಬಿಂಬಿಸುವ ಕಲಾ ಪ್ರದರ್ಶನವನ್ನು ವೀಡಿಯೊ ಕಾಲ್ ಮೂಲಕ ತೋರಿಸಿದರು. ಇದೇ ವೇಳೆ ಕೇಂದ್ರ ಸಚಿವ ಕುಮಾರಸ್ವಾಮಿ ಪ್ರಶಂಸೆ ವ್ಯಕ್ತಪಡಿಸಿದರು.

ಸಾರ್ವಜನಿಕರಿಗಾಗಿ ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರ

ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರಮೂರ್ತಿ


ತಿ.ನರಸೀಪುರದಲ್ಲಿ ಉಚಿತ ಕಣ್ಣಿನ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ ನಡೆಯಿತು.

ತಿ.ನರಸೀಪುರ, ಮೇ 26– ಸಾರ್ವಜನಿಕರಿಗೆ ಆರೋಗ್ಯ ಸೇವೆ ನೀಡುವ ಉದ್ದೇಶದಿಂದ ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ ಎಂದು ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರಮೂರ್ತಿ ತಿಳಿಸಿದರು.

ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಆವರಣದಲ್ಲಿರುವ ಗುರು ಭವನದಲ್ಲಿ ಸರ್ಕಾರಿ ನೌಕರರ ಸಂಘ, ಬೆಂಗಳೂರು ಶಂಕರ ಕಣ್ಣಿನ ಆಸ್ಪತ್ರೆ, ಮೈಸೂರು ಜಿಲ್ಲಾ ಅಂದತ್ವ ನಿಯಂತ್ರಣ ವಿಭಾಗದ ವೈದ್ಯಾಧಿಕಾರಿಗಳು, ನೇತ್ರಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದ ಸಹಭಾಗಿತ್ವದಲ್ಲಿ ಆಯೋಜಿಸಿದ್ದ ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರದಲ್ಲಿ ಮಾತನಾಡಿದ ಅವರು, ಸರ್ಕಾರೇತರ ಸಂಸ್ಥೆಯಾಗಿ ಕ್ರಿಯಾಶೀಲತೆಯಿಂದ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ನೌಕರರ ಸಂಘದಿಂದ ಈ ಆರೋಗ್ಯ ಶಿಬಿರ ಸಣ್ಣದೊಂದು ಅಳಿಲು ಸೇವೆಯಾಗಿದೆ ಎಂದರು.

ಶಂಕರ ಕಣ್ಣಿನ ಆಸ್ಪತ್ರೆ ತಜ್ಞ ವೈದ್ಯ ಡಾ. ಮಂಜುನಾಥ್ ಮಾತನಾಡಿ, ಕಣ್ಣುಗಳು ಅಮೂಲ್ಯವಾಗಿರುವುದರಿಂದ ಕಣ್ಣಿನ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಕಣ್ಣಿನ ದೃಷ್ಟಿಯಲ್ಲಿ ದೋಷವಿದ್ದಲ್ಲಿ ಪ್ರಾಥಮಿಕ ಹಂತದಲ್ಲಿ ಚಿಕಿತ್ಸೆ ಪಡೆಯಬೇಕು. ಸಾಮಾಜಿಕ ಸೇವಾ ಕಾರ್ಯಗಳ ಭಾಗವಾಗಿ ಸಂಘ ಸಂಸ್ಥೆಗಳು ಆಯೋಜಿಸುವ ಆರೋಗ್ಯ ತಪಾಸಣಾ ಹಾಗೂ ಚಿಕಿತ್ಸಾ ಶಿಬಿರಗಳನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಶಿಬಿರದಲ್ಲಿ 800ಕ್ಕೂ ಹೆಚ್ಚು ಸಾರ್ವಜನಿಕರು ಕಣ್ಣಿನ ತಪಾಸಣೆ ಮಾಡಿಸಿಕೊಂಡರು. ಈ ಪೈಕಿ 189 ಮಂದಿಗೆ ಸ್ಥಳೀಯವಾಗಿ ಚಿಕಿತ್ಸೆ ನೀಡಿದರೆ, ವಿವಿಧ ಕಣ್ಣಿನ ಸಮಸ್ಯೆಯಿರುವ 121 ಮಂದಿಯನ್ನು ಶಸ್ತ್ರ ಚಿಕಿತ್ಸೆಗೆ ಆಯ್ಕೆ ಮಾಡಿಕೊಳ್ಳಲಾಯಿತು. ವೈದ್ಯಕೀಯ ಸಿಬ್ಬಂದಿಗಳಾದ ನೂರ್, ಸೆಫ್ರಿ ಆಪ್ಸಮ್, ವೈಷ್ಣವಿ, ದಿವ್ಯ ವಿಕ್ಸ್, ಎನ್. ಶ್ರೀಕಂಠಸ್ವಾಮಿ, ಎಸ್.ಸುನಿಲ್ ಕುಮಾರ್, ಭರತ್ ಕುಮಾರ್ ಹಾಗೂ ಇನ್ನಿತರರು ಕಣ್ಣಿನ ತಪಾಸಣೆ ನಡೆಸಿದರು.

ಈ ವೇಳೆ ಸರ್ಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಸೋಸಲೆ ನಾಗೇಶ್, ಗೌರವಾಧ್ಯಕ್ಷ ಸುಬ್ರಹ್ಮಣ್ಯ, ಖಜಾಂಚಿ ನಾಗರಾಜು, ರಾಜ್ಯ ಪರಿಸರ ಸದಸ್ಯ ನಾರಾಯಣಮೂರ್ತಿ, ಪಶು ಸಂಗೋಪನೆ ಇಲಾಖೆ ಶಿವಸ್ವಾಮಿ, ಬಿಸಿಎಂ ಇಲಾಖೆ ಈಶ್ವರ್, ಆರೋಗ್ಯ ಇಲಾಖೆ ನಾಗು, ಶಂಕರ್, ಸರ್ವೆ ಇಲಾಖೆ ಚಂದ್ರಶೇಖರ್, ಲೋಕೋಪಯೋಗಿ ಇಲಾಖೆ ಮಂಜುನಾಥ್, ಶಿಕ್ಷಕರ ಸಂಘದ ಅಧ್ಯಕ್ಷ ಎ.ಗಜೇಂದ್ರ, ಕಾರ್ಯದರ್ಶಿ ರೇವಣ್ಣ, ಖಜಾಂಚಿ ಸಿದ್ದಮಲ್ಲಪ್ಪ, ಉಪಾಧ್ಯಕ್ಷ ಸಿ.ಮಹದೇವಸ್ವಾಮಿ, ಪಶುಸಂಗೋಪನಾ ಇಲಾಖೆ ಪಾಪಣ್ಣ, ಕಿಕ್ಕೇರಿ ಶೆಟ್ಟಿ, ರಘು, ನಾಗರಾಜು, ನಾಗರಾಜು, ಕುಮಾರ್ ಇನ್ನಿತರರಿದ್ದರು.

ಮೈಸೂರು ಮಿತ್ರ

ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ 'ಪೇರೆಂಟ್ ಕ್ರಾಫ್ಟ್ ಮೀಟ್' ಕಾರ್ಯಕ್ರಮ



ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ನಡೆದ ಪೇರೆಂಟ್ ಕ್ರಾಫ್ಟ್ ಮೀಟ್ ಕಾರ್ಯಕ್ರಮದಲ್ಲಿ ವೈದ್ಯರ ತಂಡವು ಪೋಷಕರಿಗೆ ಅಗತ್ಯ ಮಾಹಿತಿ ನೀಡಿತು.

ಮೈಸೂರು, ಮೇ 26– ಗರ್ಭಧಾರಣೆ, ಹೆರಿಗೆ ಮತ್ತು ನವಜಾತ ಶಿಶುವಿನ ಆರೈಕೆ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ 'ಪೇರೆಂಟ್ ಕ್ರಾಫ್ಟ್ ಮೀಟ್ 2026' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಪೋಷಕರಾಗಲು ಬಯಸಿರುವ ಸುಮಾರು 40 ದಂಪತಿ ಭಾಗವಹಿಸಿ, ತಜ್ಞ ವೈದ್ಯರೊಂದಿಗೆ ಸಂವಾದ ನಡೆಸುವ ಮೂಲಕ ಅಗತ್ಯ ಮಾಹಿತಿ ಪಡೆದುಕೊಂಡರು.

ಈ ವೇಳೆ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ.ಶಾಹೀನ್ ಅಖ್ತರ್ ಮತ್ತು ಡಾ.ಕೆ.ಜಿ.ಅಮೂಲ್ಯ ಅವರು, ಪೋಷಕರಾಗುವುದು ಜೀವನದ ಒಂದು ಮಹತ್ವದ ಘಟ್ಟ. ಈ ಬಗ್ಗೆ ಸರಿಯಾದ ಮಾಹಿತಿ ಹಾಗೂ ಪೂರ್ವಸಿದ್ಧತೆ ಇದ್ದರೆ ತಾಯಿ ಮತ್ತು ಮಗುವಿನ ಆರೋಗ್ಯದಲ್ಲಿ ಉತ್ತಮ ಬದಲಾವಣೆ ಸಾಧ್ಯ. 'ಪೇರೆಂಟ್ ಕ್ರಾಫ್ಟ್' ಮೂಲಕ ಗರ್ಭಿಣಿಯರಿಗೆ ಉತ್ತಮ ಆಹಾರ, ಅಪಾಯದ ಮುನ್ಸೂಚನೆಗಳನ್ನು ಗುರುತಿಸುವುದು ಹಾಗೂ ಹೆರಿಗೆಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಸಿದ್ಧರಾಗಲು ಆತ್ಮವಿಶ್ವಾಸ ಮೂಡಿಸುವುದರ ಜೊತೆಗೆ ಸೂಕ್ತ ಅರಿವು ಮೂಡಿಸುವುದು ನಮ್ಮ ಪ್ರಮುಖ ಉದ್ದೇಶವಾಗಿದೆ ಎಂದು ತಿಳಿಸಿದರು.

ನವಜಾತ ಶಿಶುವಿನ ಆರೈಕೆ ಬಗ್ಗೆ ಮಾಹಿತಿ ನೀಡಿದ ಡಾ.ಯು.ಎಸ್.ಭುವನೇಶ್ವರ್, ನವಜಾತ ಶಿಶುವಿನ ಸರಿಯಾದ ಆರೈಕೆ ಆ ಮಗುವಿನ ಆರೋಗ್ಯಕರ ಭವಿಷ್ಯಕ್ಕೆ ಭದ್ರ ಬುನಾದಿಯಾಗುತ್ತದೆ. ಮೊದಲ ಬಾರಿ ಪೋಷಕರಾಗುವವರಿಗೆ ಆರಂಭದಲ್ಲಿ ಸ್ವಲ್ಪ ಆತಂಕವಾಗುವುದು ಸಹಜ. ಈ ಕಾರ್ಯಕ್ರಮದಲ್ಲಿ ಎದೆಹಾಲಿನ ಮಹತ್ವ, ಮಗುವಿನ ನಿದ್ರೆ, ಬೆಚ್ಚಗಿಡುವುದು, ಲಸಿಕೆ, ನೈರ್ಮಲ್ಯ ಹಾಗೂ ತುರ್ತು ವೈದ್ಯಕೀಯ ನೆರವಿನ ಬಗ್ಗೆ ತಿಳಿಸಿಕೊಡಲಾಗಿದೆ. ಇದರಿಂದ ಹೆಚ್ಚು ವಿಶ್ವಾಸದಿಂದ ಮಗುವನ್ನು ಆರೈಕೆ ಮಾಡಲು ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಆಸ್ಪತ್ರೆಯ ನಿರ್ದೇಶಕ ಬಿ.ಜೆ.ಸಂದೀಪ್ ಪಟೇಲ್ ಮಾತನಾಡಿ, ಕೇವಲ ವೈದ್ಯಕೀಯ ಚಿಕಿತ್ಸೆಗೆ ಸೀಮಿತವಾಗದೆ ಕುಟುಂಬಗಳಿಗೆ ಸರಿಯಾದ ಮಾರ್ಗದರ್ಶನ ಮತ್ತು ಆತ್ಮಸ್ಥೈರ್ಯ ನೀಡುವ ಆಸ್ಪತ್ರೆ ಬದ್ಧತೆಗೆ ಈ ಕಾರ್ಯಕ್ರಮವು ಸಾಕ್ಷಿಯಾಗಿದೆ. ಮಗುವನ್ನು ಸ್ವಾಗತಿಸುವಾಗ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಬಹಳ ಮುಖ್ಯ ಎಂಬುದನ್ನು ಪೋಷಕರಿಗೆ ತಿಳಿಸಿಕೊಡಲಾಗಿದೆ ಎಂದು ಹೇಳಿದರು.

ಇದೇ ವೇಳೆ ಗರ್ಭಿಣಿ ಶ್ರೀಮತಿ ಎನ್.ಪಿ. ಶ್ರೀದೇವಿ ಅವರು ಮೊದಲ ಬಾರಿಗೆ ಪೋಷಕರಾಗುತ್ತಿರುವ ನಮಗೆ ಈ ಕಾರ್ಯಕ್ರಮದಿಂದ ಸಾಕಷ್ಟು ವಿಚಾರಗಳು ತಿಳಿದವು. ಗರ್ಭಧಾರಣೆ, ಹೆರಿಗೆ ಮತ್ತು ಶಿಶುವಿನ ಆರೈಕೆ ಬಗ್ಗೆ ಇದ್ದ ಹಲವು ಅನುಮಾನಗಳು ಪರಿಹಾರ ವಾದವು. ವೈದ್ಯರು ಅತ್ಯಂತ ಸರಳವಾಗಿ ವಿವರಿಸುವ ಮೂಲಕ ಆತ್ಮವಿಶ್ವಾಸ ಹೆಚ್ಚಿಸಿದೆ ಎಂದು ಮಣಿಪಾಲ್ ಆಸ್ಪತ್ರೆಗೆ ಕೃತಜ್ಞತೆ ತಿಳಿಸಿದರು.

ಇದೇ ಸಂದರ್ಭದಲ್ಲಿ ಫಿಸಿಯೋಥೆರಪಿ ತಂಡದವರು ಗರ್ಭಿಣಿಯರಿಗಾಗಿ ಸುರಕ್ಷಿತ ವ್ಯಾಯಾಮಗಳನ್ನು ಹಾಗೂ ಆಹಾರ ತಜ್ಞರು ಆರೋಗ್ಯಕರ ಅಡುಗೆ ಮಾಡುವ ವಿಧಾನವನ್ನು ಪ್ರಾಯೋಗಿಕವಾಗಿ ತಿಳಿಸಿಕೊಟ್ಟರು. ಇದೇ ವೇಳೆ ಆರೋಗ್ಯಕ್ಕೆ ಪೂರಕವಾದ ಮೋಜಿನ ಆಟಗಳನ್ನು ಏರ್ಪಡಿಸಲಾಗಿತ್ತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದೃಶ್ಯಂ–3 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಪೆಟ್ರಿಯೋಟ್ (ಮ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕರುಪ್ಪು (ತ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ದೃಶ್ಯಂ–3 (ಕ)	4 ಪ್ರದರ್ಶನಗಳು
ಲಿಡೋ	
ಕೋಟಿಗೊಬ್ಬ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕುಚುಕು (ಕ)	4 ಪ್ರದರ್ಶನಗಳು

ಮಾಜಿ ಸಿಎಂ ಮಮತಾ ಬ್ಯಾನರ್ಜಿಗೆ ಮತ್ತೊಂದು ಶಾಕ್

12 ಟಿಎಂಸಿ ಸಂಸದರು ಬಿಜೆಪಿ ಸೇರ್ಪಡೆ!



ಕೋಲ್ಕತಾ: ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಹೀನಾಯವಾಗಿ ಸೋತ ಮಾಜಿ ಸಿಎಂ ಮಮತಾ ಬ್ಯಾನರ್ಜಿಗೆ ಮತ್ತೊಂದು ಭಾರಿ ಆಘಾತ ಎದುರಾಗಿದ್ದು, ತೃಣಮೂಲ ಕಾಂಗ್ರೆಸ್ ಪಕ್ಷದ ಬರೊಬ್ಬರಿ 12 ಸಂಸದರು ಬಿಜೆಪಿ ಸೇರ್ಪಡೆಯಾಗುತ್ತಿದ್ದಾರೆ ಎಂದು ಹೇಳಲಾಗಿದೆ.

2026ರ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಭಾರೀ ಸೋಲು ಕಂಡ ನಂತರ, ತೃಣಮೂಲ ಕಾಂಗ್ರೆಸ್ ಪಕ್ಷದೊಳಗಿನ ಆಂತರಿಕ ಸಂಕಷ್ಟ ಮತ್ತಷ್ಟು ಗಂಭೀರವಾಗುತ್ತಿರುವಂತೆ ಕಾಣುತ್ತಿದೆ.

ರಾಜಕೀಯ ವಲಯಗಳಲ್ಲಿ, ಹಲವಾರು ಟಿಎಂಸಿ ಸಂಸದರು ಬಿಜೆಪಿ ಜೊತೆ ಸಂಪರ್ಕದಲ್ಲಿದ್ದು, ಶೀಘ್ರದಲ್ಲೇ ಬಿಜೆಪಿ ಸೇರ್ಪಡೆಯಾಗಲಿದ್ದಾರೆ ಎಂಬ ಚರ್ಚೆಗಳು ಜೋರಾಗಿವೆ.

ವರದಿಗಳ ಪ್ರಕಾರ, ಟಿಎಂಸಿಯ 29 ಲೋಕಸಭಾ ಸಂಸದರ ಪೈಕಿ ಸುಮಾರು 12 ಮಂದಿ ಈಗಾಗಲೇ ಬಿಜೆಪಿ ಸೇರುವ ಅಥವಾ ಬೆಂಬಲಿಸುವ ಯೋಜನೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಇದಲ್ಲದೆ ಇನ್ನೂ ಐದು ಅಥವಾ ಆರು ಸಂಸದರೊಂದಿಗೆ ಕೂಡ ಮಾತುಕತೆ ನಡೆಯುತ್ತಿದೆ ಎಂದು ವರದಿಯಾಗಿದೆ.

ದೈನಿಕ್ ಜಾಗರಣ್ ವರದಿ ಪ್ರಕಾರ, ಪಕ್ಷತ್ಯಾಗ ವಿರೋಧಿ ಕಾನೂನನ್ನು ತಪ್ಪಿಸಿಕೊಳ್ಳಲು ಕನಿಷ್ಠ 19–20 ಸಂಸದರನ್ನು ಒಟ್ಟುಗೂಡಿಸುವ ತಂತ್ರ ರೂಪಿಸಲಾಗುತ್ತಿದೆ. ಇವರಲ್ಲಿ, ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಮತ್ತು ಅಭಿಷೇಕ್ ಬ್ಯಾನರ್ಜಿ ಅವರಿಗೆ ಆಪ್ತರಾಗಿದ್ದಾರೆ ಎನ್ನಲಾಗುವ ಕೆಲ ಸಂಸದರೂ ಸೇರಿದ್ದಾರೆ ಎನ್ನುವುದು ವಿಶೇಷವಾಗಿದೆ. ಇದು ದೀದಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಆದರೆ ಇದು ಬಿಜೆಪಿಗೆ ರಾಜಕೀಯವಾಗಿ ಮಹತ್ವದ್ದಾಗಿದೆ.

ಮಳೆಗಾಲದ ಮುನ್ನೆಚ್ಚರಿಕಾ ಕ್ರಮಗಳ ಮಾಹಿತಿ ಪಡೆದ ಶಾಸಕ ಕೆ.ಹರೀಶ್‌ಗೌಡ



ಮೈಸೂರು ಮಹಾನಗರ ಪಾಲಿಕೆ ಕಚೇರಿಯಲ್ಲಿ ಶಾಸಕ ಕೆ.ಹರೀಶ್‌ಗೌಡ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಚಾಮರಾಜ ಕ್ಷೇತ್ರದಲ್ಲಿ ಮಳೆಗಾಲದ ಹಿನ್ನೆಲೆಯಲ್ಲಿ ಕೈಗೊಂಡಿರುವ ಕ್ರಮದ ಬಗ್ಗೆ ಚರ್ಚಿಸಿದರು.

ಮೈಸೂರು,ಮೇ 26(ಎಂಟಿವೈ)– ಮಳೆಗಾಲದ ಹಿನ್ನೆಲೆಯಲ್ಲಿ ಚಾಮರಾಜ ಕ್ಷೇತ್ರದಲ್ಲಿ ಜನರ ಸಮಸ್ಯೆಗಳಿಗೆ ತುರ್ತಾಗಿ ಸ್ಪಂದಿಸುವಂತೆ ಹಾಗೂ ಕ್ಷೇತ್ರದಲ್ಲಿ ನಾಗರಿಕ ಸಮಸ್ಯೆಗಳ ನಿವಾರಣೆಗೆ ಕ್ರಮ ಕೈಗೊಳ್ಳುವಂತೆ ಶಾಸಕ ಕೆಹರೀಶ್‌ಗೌಡ ಸೂಚಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ಕಚೇರಿಗೆ ಆಗಮಿಸಿದ ಶಾಸಕ ಕೆ.ಹರೀಶ್ ಗೌಡ ಕಂದಾಯ ವಿಭಾಗದ ಉಪ ಆಯುಕ್ತ ಸೋಮಶೇಖರ್ ಜಿಗಣಿ ಹಾಗೂ ವಿವಿಧ ವಲಯಗಳ ಸಹಾಯಕ ಆಯುಕ್ತರು, ಇಂಜಿನಿಯರ್‌ಗಳೊಂದಿಗೆ ಸಭೆ ನಡೆಸಿ, ಕ್ಷೇತ್ರದ ಜನತೆ ಯಾವುದೇ ದೂರು ನೀಡಿದರೂ ನಿರ್ಲಕ್ಷಿಸದೆ ತುರ್ತಾಗಿ ಸ್ಪಂದಿಸಬೇಕು. ಮಳೆಗಾಲ ಆರಂಭವಾಗುತ್ತಿದ್ದು, ಮಳೆ ನೀರು ಮನೆಗಳಿಗೆ ಹಾಗೂ ಇಳಿಜಾರು ಪ್ರದೇಶಕ್ಕೆ ನುಗ್ಗಿ ಅವಾಂತರ ಸೃಷ್ಟಿಸಬಹುದು. ಇದರಿಂದ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಕಸ ಸಂಗ್ರಹ ಕಟ್ಟುನಿಟ್ಟಾಗಿ ಮಾಡಬೇಕು. ರಸ್ತೆಯಲ್ಲಿ ಸ್ವಚ್ಛತೆ ಕಾಪಾಡಲು ಮುಂದಾಗಬೇಕು. ಯಾವುದೇ ದೂರು ಬಂದರೂ ತುರ್ತಾಗಿ ಸ್ಪಂದಿಸಿ, ಕ್ಷೇತ್ರದ ಜನರ ಸಮಸ್ಯೆ ನಿವಾರಿಸಬೇಕು ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಬೇಸಿಗೆ ರೇಸ್

1ನೇ ದಿನ, ಬುಧವಾರ, 27–05–2026

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ

I. ದುಬಾರೆ ಫಾರೆಸ್ಟ್ ಪ್ಲೇಟ್ ಡಿ II –1200 ಮೀ. ರೇಟೆಡ್ 00 ರಿಂದ 25. ______ ಮ.1.30ಕ್ಕೆ
1. ಅನುಸ್ತುಭ 2. ಕಂಟ್ರೆಸ್ ಫೈರ್

II. ಮೇಲುಕೋಟೆ ಪ್ಲೇಟ್ –14100 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1 ಸಿರಾ 2. ಕ್ಲೌಡಿ ಹಿಲ್ಸ್

III. ದುಬಾರೆ ಫಾರೆಸ್ಟ್ ಪ್ಲೇಟ್ ಡಿ I –1200 ಮೀ. ರೇಟೆಡ್ 00 ರಿಂದ 25. ______ ಮ.2.30ಕ್ಕೆ
1. ಹಬಿಬ್ತಿ 2. ಎಲ್ ಸಾ

IV. ಕುಶಾಲನಗರ ಪ್ಲೇಟ್ ಡಿ II 1200 ಮೀ ರೇಟೆಡ್ 20 ರಿಂದ 45. ______ ಮ.3.00ಕ್ಕೆ
1. ಚೀಫ್ ಅಡ್ಮಿರಲ್ 2. ಸಿಲ್ವರ್ ಕ್ವೆಸ್ಟ್

V. ಬಿಲೌವ್ಡ್ ಪ್ರಿನ್ಸ್ ಪ್ಲೇಟ್ 1100ಮೀ ರೇಟೆಡ್ 40 ರಿಂದ 65 ______ ಮ.3.30ಕ್ಕೆ
1. ಕ್ಲಿಮ್ಟ್ 2. ಗೋಲ್ಡ್ ರೈಡ್

VI. ಸೀಸನ್ ಓಪನರ್ ಟ್ರೋಫಿ 1400 ಮೀ ರೇಟೆಡ್ 60 ಮತ್ತು ಮೇಲ್ಪಟ್ಟ______ ಸಂ.4.00ಕ್ಕೆ
1. ರೈಸ್ ಅಗೇನ್ 2. ಮದರ್ಸ್ ಗ್ರೇಸ್

VII. ಕುಶಾಲನಗರ ಪ್ಲೇಟ್ ಡಿ I 1200 ಮೀ ರೇಟೆಡ್ 20 ರಿಂದ 45. ______ ಮ.4.30ಕ್ಕೆ
1. ಮಿರ ಕ್ಯುಲಸ್ ಗರ್ಲ್ 2. ಥಿಯಾ

VIII. ಟ್ರಂಬೆ ಪ್ಲೇಟ್ 1400 ಮೀ ರೇಟೆಡ್ 40 ರಿಂದ 65. ______ ಮ.5.00ಕ್ಕೆ
1. ಸ್ಟಾರ್ ಅರ್ಡಿನರಿಯೋ 2. ಬ್ಲೂಮೆಡ್

ದಿನದ ಅತ್ಯುತ್ತಮ........: ಸ್ಟಾರ್ ಅರ್ಡಿನರಿಯೋ
ಡಬ್ಬಲ್........: ಸಿರಾ, ರೈಸ್ ಅಗೇನ್
ಜಾಕ್‌ಪಾಟ್........: 4, 5, 6, 7 ಮತ್ತು 8
ಮಿನಿ ಜಾಕ್‌ಪಾಟ್........: 5, 6, 7 ಮತ್ತು 8
I ಟ್ರಿಬಲ್........: 1, 2 ಮತ್ತು 3
II ಟ್ರಿಬಲ್........: 3, 4 ಮತ್ತು 5
III ಟ್ರಿಬಲ್........: 6, 7 ಮತ್ತು 8
ಎಕ್ಸ್‌ಆಕ್ಟ್........: 1 ರಿಂದ 8

ಟಿಪ್ ಸ್ಟಾರ್ ಪಿಜಿಸಿ

ನಿಷ್ಕ್ರಿಯವಾಗಿರುವ ಸರ್ಕಾರದ ಆಡಳಿತ ಯಂತ್ರ ದೆಹಲಿಗೆ ಶಿಫ್ಟ್ ಆಗಿದೆ

ಮಾಜಿ ಸಚಿವ ಸಿ.ಟಿ.ರವಿ ವ್ಯಂಗ್ಯ



ಬೆಂಗಳೂರು: ರಾಜ್ಯದಲ್ಲಿ ನಿಷ್ಕ್ರಿಯವಾಗಿರುವ ಸರ್ಕಾರದ ಆಡಳಿತ ಯಂತ್ರ ದೆಹಲಿಗೆ ಶಿಫ್ಟ್ ಆಗಿದೆ ಎಂದು ಬಿಜೆಪಿ ನಾಯಕ ಸಿ.ಟಿ.ರವಿ ಸಿಎಂ–ಡಿಸಿಎಂ ಕುರ್ಚಿ ಪ್ರಹಸನದ ವಿರುದ್ಧ ಕಿಡಿಕಾರಿದ್ದಾರೆ.

ವಿಧಾನಸೌಧದಲ್ಲಿ ಮಾತನಾಡಿದ ಅವರು, ಮುಂಚೆಯೇ ಈ ಸರ್ಕಾರ ರಾಜ್ಯದಲ್ಲಿ ನಿಷ್ಕ್ರಿಯ ಆಗಿತ್ತು. ಈಗ ಸರ್ಕಾರದ ಯಂತ್ರ ದೆಹಲಿಗೆ ಶಿಫ್ಟ್ ಆಗಿದೆ. ಈ ಸರ್ಕಾರ ಮೊದಲೇ ಜನರ ಸಮಸ್ಯೆಗೆ ಸ್ಪಂದನೆ ನೀಡುತ್ತಿರಲಿಲ್ಲ. ಸ್ಪಂದನೆ ನೀಡಿದ್ದರೆ ಸಾರಿಗೆ ಇಲಾಖೆ, ಅಂಗನವಾಡಿ ಕಾರ್ಯಕರ್ತರು ಪ್ರತಿಭಟನೆ ಮಾಡ್ತಾ ಇರಲಿಲ್ಲ. ಜನರ ಸಮಸ್ಯೆಗೆ ಸ್ಪಂದನೆ ಮಾಡುವ ಮನಸು ಈ ಸರ್ಕಾರಕ್ಕೆ ಇಲ್ಲ ಎಂದು ವಾಗ್ದಾಳಿ ನಡೆಸಿದರು.

ಅಧಿಕಾರಕ್ಕೆ ಬರುವಾಗ ಭ್ರಷ್ಟಾಚಾರ ರಹಿತ ಆಡಳಿತ ಅಂದರು. ಈಗ 60% ಸರ್ಕಾರ ಆಗಿದೆ. ಯಾವ ಇಲಾಖೆಯಲ್ಲಿ ಲಂಚ ಮುಟ್ಟಿಲ್ಲ ಅನ್ನೋ ಸ್ಥಿತಿ ಇದೆ. ಯಾವ ಸಚಿವರು ನಾನು ಲಂಚ ಪಡೆಯಲ್ಲ ಅಂತ ಹೇಳೋ ಸ್ಥಿತಿಯಲ್ಲಿ ಇದ್ದಾರೆ. ಸಿಎಂ ಅವರೇ ಇಲ್ಲ. ಗ್ರಾಮಗಳಲ್ಲಿ ಕುಡಿಯುವ ನೀರು ಇಲ್ಲ. ಇಲಾಖೆ ಮಿನಿಸ್ಟರ್ ಬೇರೆ ಕಡೆ ಬ್ಯುಸಿ ಆಗಿದ್ದಾರೆ ಮೋದಿ ಅವ ರನ್ನು ಬೈಯೋದು, ಬಿಜೆಪಿಗೆ ಟೀಕೆ ಮಾಡೋದ್ರಲ್ಲಿ ಬ್ಯುಸಿ ಆಗಿದ್ದಾರೆ. ಜನರ ಸಮಸ್ಯೆ ಕೇಳೋರು ಯಾರು. ಜನರು ವಿಧಾನಸೌಧಕ್ಕೆ ಸಮಸ್ಯೆ ಕೇಳಿಕೊಂಡು ಬಂದರೆ ದೆಹಲಿಗೆ ಹೋಗಬೇಕಾ ಎಂದು ಪ್ರಶ್ನಿಸಿದರು.

ನನ್ನ ಪಟ್ಟ ಉಳಿಯುತ್ತೋ ಇಲ್ಲವೋ ಯಾವ ಖಾತೆ ಸಿಗುತ್ತೋ ಅಂತ ದೆಹಲಿಯಲ್ಲಿ ಇದ್ದಾರೆ ಜನರ ಸಮಸ್ಯೆ ಕೇಳೋಕೆ ಇವರಿಗೆ ಸಮಯ ಇಲ್ಲ. ಜನ 2023 ರಲ್ಲಿ 136 ಸ್ಥಾನ ಕೊಟ್ಟಿದ್ದಾರೆ ನೀವು ಕಿತ್ತಾಡಿ, ಭ್ರಷ್ಟಾಚಾರ ಮಾಡಿ, ಬೆಲೆ ಏರಿಕೆ ಮಾಡಿ ಅಂತ ಅಧಿಕಾರ ಕೊಟ್ಟಿಲ್ಲ. ಈಗಲಾದರೂ ಕುರ್ಚಿ ಗಲಾಟೆ ನಿಲ್ಲಿಸಿ. ನೀವು ಕುರ್ಚಿ ಗಲಾಟೆ ನಿಲ್ಲಿಸದೇ ಹೋದರೆ ಕುರ್ಚಿ ಕೊಟ್ಟ ಅದೇ ಜನ ಕುರ್ಚಿಯಿಂದ ಇಳಿಸ್ತಾರೆ ಎಂದು ವಾಗ್ದಾಳಿ ನಡೆಸಿದರು.

ಲಖನೌ–ಆಗ್ರಾ ಎಕ್ಸ್‌ಪ್ರೆಸ್‌ವೇಯಲ್ಲಿ ಡಬಲ್ ಡೆಕ್ಕರ್ ಬಸ್ ಪಲ್ಟಿ; 6 ಮಂದಿ ದುರ್ಮರಣ!



ಲಖನೌ: ಉತ್ತರ ಪ್ರದೇಶದ ಉನ್ನಾವೋ ಜಿಲ್ಲೆಯಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಕನಿಷ್ಠ ಆರು ಮಂದಿ ಸಾವನ್ನಪ್ಪಿದ್ದು, 19ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ಮಂಗಳವಾರ ಮುಂಜಾನೆ ಲಖನೌ–ಆಗ್ರಾ ಎಕ್ಸ್‌ಪ್ರೆಸ್‌ವೇನಲ್ಲಿ ನಡೆದಿದೆ.

ದೆಹಲಿಯಿಂದ ಗೋರಖ್‌ಪುರಕ್ಕೆ ಪ್ರಯಾಣಿಸುತ್ತಿದ್ದ ಡಬಲ್ ಡೆಕ್ಕರ್ ಲಕ್ಸುರಿ ಸ್ಲೀಪರ್ ಬಸ್ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ಅಪಘಾತದ ತೀವ್ರತೆಗೆ ಬಸ್‌ನ ಗಾಜುಗಳು ಪುಡಿಪುಡಿಯಾಗಿವೆ.

ಪ್ರಾಥಮಿಕ ತನಿಖೆಯ ಪ್ರಕಾರ, ಬಸ್ ಚಾಲಕ ನಿದ್ರೆಗೆ ಜಾರಿದ್ದೇ ಅಪಘಾತಕ್ಕೆ ಕಾರಣವಾಗಿರಬಹುದು ಎಂದು ಶಂಕಿಸಲಾಗಿದೆ.

ಅತಿವೇಗದಲ್ಲಿ ಸಂಚರಿಸುತ್ತಿದ್ದ ಬಸ್ ಏಕಾಏಕಿ ಒಂದು ಬದಿಗೆ ವಾಲಿ ಎಕ್ಸ್‌ಪ್ರೆಸ್‌ವೇ ವಿಭಜಕಕ್ಕೆ ಬಲವಾಗಿ ಡಿಕ್ಕಿ ಹೊಡೆದ ಪರಿಣಾಮ ಪಲ್ಟಿಯಾಗಿದೆ. ಅಪಘಾತದ ತೀವ್ರತೆಗೆ ಕೆಲ ಪ್ರಯಾಣಿಕರು ಕಿಟಕಿಯಿಂದ ಹೊರಗೆ ಎಸೆಯಲ್ಪಟ್ಟರೆ, ಇನ್ನೂ ಕೆಲವರು ಬಸ್‌ನ ಆಸನಗಳ ನಡುವೆ ಸಿಲುಕಿಕೊಂಡಿದ್ದಾರೆ.

ಅಪಘಾತದ ಬಳಿಕ ಸ್ಥಳದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದ್ದು, ಬದುಕುಳಿದ ಪ್ರಯಾಣಿಕರ ಕೂಗಾಟ ಕೇಳಿ ಇತರ ವಾಹನ ಚಾಲಕರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ತಕ್ಷಣವೇ ಉತ್ತರ ಪ್ರದೇಶ ಎಕ್ಸ್‌ಪ್ರೆಸ್ ವೇಸ್ ಇಂಡಸ್ಟ್ರಿಯಲ್ ಡೆವಲಪ್ ಮೆಂಟ್ ಅಥಾರಿಟಿ, ಸ್ಥಳೀಯ ಪೊಲೀಸರು ಹಾಗೂ ಜಿಲ್ಲಾಡಳಿತದ ರಕ್ಷಣಾ ತಂಡಗಳು ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ಆರಂಭಿಸಿವೆ.

ಬಸ್‌ನ ಒಳಗೆ ಸಿಲುಕಿದ್ದವರನ್ನು ಹೊರತೆಗೆಯಲು ವಿಶೇಷ ಕಟಿಂಗ್ ಉಪಕರಣಗಳನ್ನು ಬಳಸಲಾಯಿತು. ಸ್ಥಳೀಯರು ಮತ್ತು ಪೊಲೀಸರು ಸೇರಿ ಗಾಯಾಳುಗಳನ್ನು ರಕ್ಷಿಸಿ ಆಂಬುಲೆನ್ಸ್ ಮೂಲಕ ಸಮೀಪದ ಆರೋಗ್ಯ ಕೇಂದ್ರಗಳಿಗೆ ಸಾಗಿಸಿದರು.

ಗಂಭೀರವಾಗಿ ಗಾಯಗೊಂಡ ಕೆಲವರನ್ನು ಲಖನೌನ ಕಿಂಗ್ ಜಾರ್ಜ್ ಮೆಡಿಕಲ್ ಯುನಿವರ್ಸಿಟಿ ಟ್ರಾಮಾ ಸೆಂಟರ್‌ಗೆ ದಾಖಲಿಸಲಾಗಿದೆ.

ಅಪಘಾತದಲ್ಲಿ ಆರು ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರ ಗುರುತು ಪತ್ತೆ ಕಾರ್ಯ ಮುಂದುವರಿದಿದ್ದು, ಶವಗಳನ್ನು ಮರಣೋತ್ತರ ಪರೀಕ್ಷೆಗೆ ಜಿಲ್ಲಾಸ್ಪತ್ರೆಗೆ ರವಾನಿಸಲಾಗಿದೆ ಎಂದು ಘಟನಾ ಸ್ಥಳದಲ್ಲಿದ್ದ ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.


ಅಪಘಾತದ ಬಳಿಕ ಬಸ್ ಅವಶೇಷಗಳು ಹೆದ್ದಾರಿಯಲ್ಲಿ ಬಿದ್ದಿದ್ದ ಪರಿಣಾಮ ಲಖನೌ ಮಾರ್ಗದಲ್ಲಿ ವಾಹನ ಸಂಚಾರ ಕೆಲಕಾಲ ಅಸ್ತವ್ಯಸ್ತಗೊಂಡಿತ್ತು. ನಂತರ ಕ್ರೇನ್‌ಗಳ ಸಹಾಯದಿಂದ ಬಸ್ ತೆರವುಗೊಳಿಸಿ ಸಂಚಾರ ಪುನಃ ಆರಂಭಿಸಲಾಯಿತು.

ಎಸ್‌ಎಸ್‌ಎಲ್‌ಸಿ, ಮೆಟ್ರಿಕ್ ನಂತರದ ಪ್ರೋತ್ಸಾಹಧನಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ.26– ಸಮಾಜ ಕಲ್ಯಾಣ ಇಲಾಖಾ ವತಿಯಿಂದ 2025–26ನೇ ಶೈಕ್ಷಣಿಕ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಹಾಗೂ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ಪ್ರಥಮ ಪ್ರಯತ್ನದಲ್ಲಿ, ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದ್ದು, ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಇಲಾಖೆಯ https:/swdservices.karnataka.gov.in/PrizeMoneyClient App/register ವೆಬ್‌ಸೈಟ್‌ನಲ್ಲಿ ಆನ್‌ಲೈನ್‌ನಲ್ಲಿ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. Acknowledgement Print, ಜಾತಿ ಪ್ರಮಾಣ ಪತ್ರ ಆಧಾರ್ ಕಾರ್ಡ್ ಪ್ರತಿ, ಎಸ್‌ಎಸ್‌ಎಲ್‌ಸಿ. ಅಂಕಪಟ್ಟಿ ಮತ್ತು ಹಿಂದಿನ ವರ್ಷಗಳ ಅಂಕಪಟ್ಟಿಗಳನ್ನು ಪ್ರಾಂಶುಪಾಲರಿಂದ ದೃಢೀಕರಿಸಿ ಸಮಾಜ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ, ಡಾ॥ ಬಾಬು ಜಗಜೀವನರಾಂ ಭವನ ಕಟ್ಟಡ, ಆದಿಪಂಪ ರಸ್ತೆ ಒಂಟಿಕೊಪ್ಪಲು ಪೂರ್ವ ಬಡಾವಣೆ ಪಡುವಾರಹಳ್ಳಿ ಮೈಸೂರು–12, ಇಲ್ಲಿನ ಕಛೇರಿಗೆ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಆದಾಯ ಮಿತಿ ಇರುವುದಿಲ್ಲ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ–0821–2344661 ನ್ನು ಸಂಪರ್ಕಿಸಬಹುದಾಗಿದೆ

ಮೈಸೂರಿನ ಅಪೋಲೋ ಆಸ್ಪತ್ರೆಯಿಂದ ವಿಶೇಷ ವಿಚಾರ ಸಂಕಿರಣದ ಮೂಲಕ ಪಾರ್ಶ್ವವಾಯು ಜಾಗೃತಿ



ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆ ವತಿಯಿಂದ ನಡೆದ 'ಅಪೋಲೋ ನ್ಯೂರೋ ಕಾನ್ಕ್ಲೇವ್–ಸ್ಟ್ರೋಕ್ ಅಪ್ಡೇಟ್ 2026' ವಿಚಾರ ಸಂಕಿರಣದಲ್ಲಿ ಗಣ್ಯರು ಭಾರತೀಯ ಸ್ಟ್ರೋಕ್ ಅಸೋಸಿಯೇಷನ್‌ನ ಪಾರ್ಶ್ವವಾಯು ಚಿಕಿತ್ಸೆ ಮತ್ತು ಜಾಗೃತಿಯ ಶತಮಾನೋತ್ಸವದ ಲೋಗೋ ಪ್ರದರ್ಶಿಸಿದರು.

ಮೈಸೂರು, ಮೇ 26– ಆರೋಗ್ಯ ರಕ್ಷಣೆಗೆ ತನ್ನ ಬದ್ಧತೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆ ವತಿಯಿಂದ ಇತ್ತೀಚೆಗೆ ಖಾಸಗಿ ಹೋಟೆಲ್‌ನಲ್ಲಿ 'ಅಪೋಲೋ ನ್ಯೂರೋ ಕಾನ್ಕ್ಲೇವ್–ಸ್ಟ್ರೋಕ್ ಅಪ್ಡೇಟ್ 2026' ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು.


ಭಾರತೀಯ ಸ್ಟ್ರೋಕ್ ಅಸೋಸಿಯೇಷನ್‌ನ ಪಾರ್ಶ್ವವಾಯು ಚಿಕಿತ್ಸೆ ಮತ್ತು ಜಾಗೃತಿಯ ಶತಮಾನೋತ್ಸವದ ಉಪಕ್ರಮದ ಭಾಗವಾಗಿ ಅಪೋಲೋ ಇನ್ಸ್ಟಿಟ್ಯೂಟ್ ಆಫ್ ನ್ಯೂರೋಸೈನ್ಸ್‌ನ ಸಹಯೋಗದಲ್ಲಿ ಆಯೋಜಿಸಲಾಗಿದ್ದ ವಿಚಾರ ಸಂಕಿರಣದಲ್ಲಿ, ಪಾರ್ಶ್ವವಾಯು ತಡೆಗಟ್ಟುವಿಕೆ, ಆರಂಭದಲ್ಲೇ ಗುರುತಿಸುವಿಕೆ, ಸಕಾಲಿಕ ಚಿಕಿತ್ಸೆ ಮತ್ತು ಸುಧಾರಿತ ಪಾರ್ಶ್ವವಾಯು ನಿರ್ವಹಣೆ ಬಗ್ಗೆ ನರವಿಜ್ಞಾನ ತಜ್ಞರು ಹಾಗೂ ಆರೋಗ್ಯ ವೃತ್ತಿಪರರು ಮಹತ್ವದ ಮಾಹಿತಿ ಹಂಚಿಕೊಂಡರು.

ಪಾರ್ಶ್ವವಾಯು ತಡೆಗಟ್ಟುವಿಕೆಯ ಜಾಗೃತಿ ಬಲಪಡಿಸುವುದು, ಲಕ್ಷಣಗಳ ಆರಂಭಿಕ ಗುರುತಿಸುವಿಕೆಯ ಉತ್ತೇಜಿಸುವುದು, ಸುವರ್ಣ ಅವಧಿಯಲ್ಲಿ ಸಕಾಲಿಕ ಚಿಕಿತ್ಸೆ ಪ್ರೋತ್ಸಾಹಿಸುವುದು, ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಜಾಗೃತಿ ಅಭಿಯಾನ ವಿಸ್ತರಿಸುವುದು, ಪಾರ್ಶ್ವವಾಯು ಸಂಬಂಧಿತ ಅಂಗವೈಕಲ್ಯ ಮತ್ತು ದೀರ್ಘಕಾಲೀನ ಸಾಮಾಜಿಕ ಹೊರೆಯನ್ನು ಕಡಿಮೆ ಮಾಡುವುದು, ಸಮಗ್ರ ಕ್ಲಿನಿಕಲ್ ಪರಿಣತಿಯೊಂದಿಗೆ ಸುಧಾರಿತ ಪಾರ್ಶ್ವವಾಯು ಚಿಕಿತ್ಸಾ ಆಸ್ಪತ್ರೆಗಳನ್ನು ನಿರ್ಮಿಸುವುದು ಸೇರಿದಂತೆ ಹಲವು ಮಹತ್ವದ ವಿಚಾರಗಳಿಗೆ ಆದ್ಯತೆ ನೀಡಲಾಯಿತು.

ವಿಚಾರ ಸಂಕಿರಣದಲ್ಲಿ ಮಾತನಾಡಿದ ಅಪೋಲೋ ಆಸ್ಪತ್ರೆಯ ಕರ್ನಾಟಕದ ಹಿರಿಯ ಉಪಾಧ್ಯಕ್ಷ ಎನ್.ಜಿ. ಭರತೀಶ್ ರೆಡ್ಡಿ, ಮೆದುಳು ಮಾನವ ದೇಹದ ಅತ್ಯಂತ ಪ್ರಮುಖ ಅಂಗ. ಇದು ಒಮ್ಮೆ ಹಾನಿಗೊಳಗಾದರೆ ಸರಿಪಡಿಸುವುದು ಕಷ್ಟಸಾಧ್ಯ. ಪಾರ್ಶ್ವವಾಯು ಸಂದರ್ಭದಲ್ಲಿ ಲಕ್ಷಾಂತರ ನರಕೋಶಗಳಿಗೆ ಹಾನಿಯಾಗಬಹುದು. ಆದ್ದರಿಂದ ಆರಂಭದಲ್ಲೇ ಗುರುತಿಸಿ, ಸಕಾಲಿಕ ಚಿಕಿತ್ಸೆ ಪಡೆಯುವುದು ಅತ್ಯವಶ್ಯ. ಭಾರತೀಯ ಪಾರ್ಶ್ವವಾಯು ಸಂಘದ ಶತಮಾನೋತ್ಸವದ ಹಿನ್ನೆಲೆಯಲ್ಲಿ ನಡೆದ ಈ ಕಾರ್ಯಕ್ರಮದ ಮೂಲಕ ಪಾರ್ಶ್ವವಾಯು ಕುರಿತಂತೆ ಜಾಗೃತಿ ಮೂಡಿಸುವುದರ ಜೊತೆಗೆ ಸಮರ್ಪಕ ಆರೋಗ್ಯ ವ್ಯವಸ್ಥೆಗಳನ್ನು ನಿರ್ಮಿಸುವ ಗುರಿ ಹೊಂದಿದ್ದೇವೆ ಎಂದರು.

ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಯು ಈ ಪ್ರದೇಶದಲ್ಲಿ ಪ್ರಮುಖ ಸುಧಾರಿತ ಪಾರ್ಶ್ವವಾಯು ಆರೈಕೆ ಮತ್ತು ನಿರ್ವಹಣಾ ಕೇಂದ್ರಗಳಲ್ಲಿ ಒಂದಾಗಿದೆ. ಸಮಗ್ರ ಪಾರ್ಶ್ವವಾಯು ಚಿಕಿತ್ಸಾ ಸೌಲಭ್ಯ ಹೊಂದಿದ್ದು, ನರವಿಜ್ಞಾನಿಗಳು, ತಜ್ಞ ರೇಡಿಯಾಲಜಿಸ್ಟ್‌ಗಳು, ನರಶಸ್ತ್ರಚಿಕಿತ್ಸಕರು, ಮಕ್ಕಳ ನರವಿಜ್ಞಾನಿಗಳು, ನರ–ಅರಿವಳಿಕೆ ತಜ್ಞರು ಮತ್ತು ನಿರ್ಣಾಯಕ ತಜ್ಞ ವೈದ್ಯರುಗಳ ಸಮಗ್ರ ತಂಡವನ್ನು ಹೊಂದಿದೆ ಎಂದು ತಿಳಿಸಿ, ಈ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದ ಭಾರತೀಯ ಸ್ಟ್ರೋಕ್ ಅಸೋಸಿಯೇಷನ್ ಅಧ್ಯಕ್ಷ ಡಾ.ವಿಕ್ರಮ್ ಹುಡೇದ್, ಭಾರತೀಯ ಪಾರ್ಶ್ವವಾಯು ಸಂಘದ ಸದಸ್ಯರು, ಪ್ರತಿನಿಧಿಗಳು, ಪಾಲುದಾರರು ಮತ್ತು ಅಪೋಲೋ ತಂಡದವರಿಗೆ ಧನ್ಯವಾದಗಳನ್ನು ತಿಳಿಸಿದರು.

ಅವಧೂತ ದತ್ತಪೀಠದಿಂದ ಸಂಸ್ಕೃತ ಕೋರ್ಸ್‌ಗೆ ಶ್ರೀಗಳ ಚಾಲನೆ



ಮೈಸೂರಿನ ಗಣಪತಿ ಆಶ್ರಮದ ವತಿಯಿಂದ ಹೊಸದಾಗಿ ಆರಂಭಿಸುತ್ತಿರುವ ಸಂಸ್ಕೃತ ಕೋರ್ಸ್‌ಗೆ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಚಾಲನೆ ನೀಡಿದರು.

ಮೈಸೂರು,ಮೇ 26(ಎಂಟಿವೈ)– ಅವಧೂತ ದತ್ತಪೀಠದ ವತಿಯಿಂದ ಆರಂಭಿಸುತ್ತಿರುವ ಸಂಸ್ಕೃತ ಕೋರ್ಸ್‌ಗೆ ಗಣಪತಿ ಸಚ್ಚಿದಾನಂದ ಶ್ರೀಗಳು ಮಂಗಳವಾರ ಚಾಲನೆ ನೀಡಿದರು.

ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ನಡೆಯುತ್ತಿರುವ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 84ನೇ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಮಂಗಳವಾರ ಶ್ರೀಗಳು ಅವಧೂತ ದತ್ತಪೀಠದಿಂದ ಸಂಸ್ಕೃತ ಶಿಕ್ಷಣ ಕೋರ್ಸ್‌ಗಳಿಗೆ ಚಾಲನೆ ನೀಡಿ ಸಂಸ್ಕೃತದ ಮಹತ್ವವನ್ನು ವಿವರಿಸಿ, ಶುಭ ಕೋರಿದರು.

ದತ್ತ ಪೀಠದ ಪ್ರಮುಖ ಅಂಗ ಸಂಸ್ಥೆಗಳಾದ ಎಸ್‌ಜಿಎಸ್ ವೇದನಿಧಿ ಅಕಾಡೆಮಿ ಮತ್ತು ಮಾಸ್ಟರ್ಸ್ ಇನ್‌ಸ್ಟಿಟ್ಯೂಟ್, ಭಾರತ ಸರ್ಕಾರದ ಕೇಂದ್ರ ಸಂಸ್ಕೃತ ವಿಶ್ವವಿದ್ಯಾಲಯದ(ಕೇಂದ್ರ ಸಂಸ್ಕೃತ ವಿಶ್ವವಿದ್ಯಾನಿಲಯ) ಸಹಯೋಗದೊಂದಿಗೆ ಡಿಪ್ಲೊಮಾ ಇನ್ ಸಂಸ್ಕೃತ, ಪ್ರಾಕ್–ಶಾಸ್ತ್ರೀ ಸಂಸ್ಕೃತ ಪ್ರೈಮರ್, ಅದ್ವೈತ ವೇದಾಂತ, ಪುರಾಣ ಇತಿಹಾಸ ಮತ್ತು ವ್ಯಾಕರಣ, ಯೋಗ ಕೋರ್ಸ್‌ಗಳಾದ ಮಾನವ ಅಂಗರಚನಾ ಶಾಸ್ತ್ರ, ಆಯುರ್ವೇದ ಮತ್ತು ಆಧುನಿಕ ವೈದ್ಯಕೀಯ ದೃಷ್ಟಿಕೋನವನ್ನೊಳಗೊಂಡ ವೃತ್ತಿಪರ ತರಬೇತಿ ಕಾರ್ಯಕ್ರಮ, ಹಿಂದೂ ಧರ್ಮ ಅಧ್ಯಯನ (ಎಂ.ಎ): 40–50 ವರ್ಷ ದಾಟಿದವರು ತಮ್ಮ ಸ್ವಯಂ ಜ್ಞಾನಾರ್ಜನೆಗಾಗಿ ಈ ಸ್ನಾತಕೋತ್ತರ ಪದವಿಯನ್ನು ಕೈಗೊಳ್ಳಬಹುದು. ವೇದಭಾಷ್ಯ ಕೋರ್ಸ್‌ನಲ್ಲಿ ವೇದ ಮಂತ್ರಗಳ ಅರ್ಥವನ್ನು ಆಳವಾಗಿ ತಿಳಿಯಲು ಬಯಸುವ ವೇದ ವಿದ್ವಾಂಸರಿಗಾಗಿ ಈ ವಿಶೇಷ ಕೋರ್ಸ್ ರೂಪಿಸಲಾಗಿದೆ. ಜೂನ್ ಮೊದಲ ವಾರದಲ್ಲಿ ಅಧಿಕೃತ ಮಂಜೂರಾತಿ ಪತ್ರಗಳು ದೊರೆತ ನಂತರ, ಕೋರ್ಸ್‌ನ ಸಂಪೂರ್ಣ ಪಠ್ಯಕ್ರಮ ಮತ್ತು ವಿವರಗಳನ್ನು swami.in/csu ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ.

ಪ್ರಥಮ ಪಿಹೆಚ್.ಡಿ ಪದವಿ ಪ್ರದಾನ: 2012ರಿಂದ ಸಂಸ್ಕೃತ ಸಂಶೋಧನಾ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯಲ್ಲಿ ಎ. ಚಿನ್ಮಯ ದತ್ತ ಅವರು ಪಿಎಚ್.ಡಿ ಪದವಿ ಪಡೆದ ಮೊದಲ ವಿದ್ಯಾರ್ಥಿಯಾಗಿದ್ದಾರೆ. ಋಗ್ವೇದದ 'ಐತ್ರೇಯ ಬ್ರಾಹ್ಮಣ ಮತ್ತು ಉಪನಿಷತ್' ವಿಷಯದ ಮೇಲೆ ಸಂಶೋಧನಾ ಪ್ರಬಂಧ ಮಂಡಿಸಿದ್ದರು. ಇಂದು ಅವರಿಗೆ ಪಿಹೆಚ್‌ಡಿ ಪದವಿ ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಎಸ್‌ಜಿಎಸ್ ವೇದನಿಧಿ ಅಕಾಡೆಮಿಯ ಗೌರವಾನ್ವಿತ ಅಧ್ಯಕ್ಷರಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಹಾಗೂ ಆಶ್ರಮದ ಅಧ್ಯಾಪಕರು ಹಾಗೂ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

ಅನರ್ಹ ಮತದಾರರ ಕೈಬಿಟ್ಟರೆ ಕಾಂಗ್ರೆಸ್ ನಾಯಕರಿಗೇಕೆ ಇಷ್ಟೊಂದು ಭಯ... ಆತಂಕ...!?

ಇದ ನೋಡಿದರೆ ಇವರಿಗೆ ಬಂದಿರುವ ಬಹುಮತದ ಬಗ್ಗೆಯೇ ಅನುಮಾನ ಬರುತ್ತೆ: ಮಾಜಿ ಸಚಿವ ಸಾ.ರಾ.ಮಹೇಶ್ ಅಚ್ಚರಿ ಪ್ರಶ್ನೆ

- ಕೆ.ಆರ್.ನಗರದಲ್ಲಿ 18 ಸಾವಿರ ಮತದಾರರಿಗೆ ವಿಳಾಸವೇ ಇಲ್ಲ
- ಚಿತ್ರ ನಿರ್ಮಾಪಕರಾಗಿದ್ದ ಹೆಚ್.ಡಿ.ಕುಮಾರಸ್ವಾಮಿ ಆಸ್ತಿಗೆ ಆಧಾರವಿದೆ
- ಅಹಿಂದ ಹೆಸರೇಳಿ ರಾಜಕಾರಣ ಮಾಡುವ ನಾಯಕರ ಆಸ್ತಿ ಹೇಗೆ ಬಂತು!
- ಕಾಂಗ್ರೆಸ್ ನಾಯಕರ್ಯಾರು ಭೂ ಒತ್ತುವರಿಯನ್ನ ಮಾಡಿಯೇ ಇಲ್ಲವೇ?



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ಮಾಜಿ ಸಚಿವ ಸಾ.ರಾ.ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಮೇ26(ಬಿಎಲ್‌ಯು)– ಚುನಾವಣಾ ಆಯೋಗವು ಮತ ದಾರರ ಪಟ್ಟಿಯ ವಿಶೇಷ ಸಮಗ್ರ ಪರಿ ಷ್ಕರಣೆ (ಎಸ್‌ಐಆರ್) ಯಲ್ಲಿ ಅನರ್ಹ ಮತದಾರರನ್ನು ಕೈ ಬಿಟ್ಟರೆ ಕಾಂಗ್ರೆಸ್ ನಾಯಕರಿಗೇಕೆ ಇಷ್ಟೊಂದು ಭಯ... ಆತಂಕ...! ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಪ್ರಶ್ನಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ನಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಐಆರ್‌ನಲ್ಲಿ ಮತದಾರ ಪಟ್ಟಿಯನ್ನು ಸಮಗ್ರವಾಗಿ ಪರಿಷ್ಕರಣೆ ಮಾಡಲಾಗುತ್ತಿದೆ. ಅನರ್ಹರನ್ನು ಮತದಾರರ ಪಟ್ಟಿಯಿಂದ ಕೈ ಬಿಡುತ್ತಾರೆ. ವಾಸ್ತವತೆ ಹೀಗಿರುವಾಗ ಕಾಂಗ್ರೆಸ್ ನಾಯಕರು ಹೆದರುವ ಪ್ರಮೇಯ ವೇನು ಎಂದು ಮರು ಪ್ರಶ್ನಿಸಿದರು.

ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ, ತಹಶೀಲ್ದಾರ್ ಸೇರಿದಂತೆ ಎಲ್ಲಾ ಅಧಿಕಾರಿಗಳು ರಾಜ್ಯ ಸರ್ಕಾರದ ಅಧೀನದಲ್ಲಿದ್ದಾರೆ. ಎಸ್‌ಐಆರ್ ಪ್ರಕ್ರಿಯೆಯನ್ನು ಇವರೇ ನಡೆಸುತ್ತಾರೆ. ಹೀಗಿರುವಾಗ ತಮ್ಮ ಅಧೀನದಲ್ಲಿರುವ ಅಧಿಕಾರಿಗಳ ಬಗ್ಗೆ ಈ ಸರ್ಕಾರಕ್ಕೆ ನಂಬಿಕೆ ಇಲ್ಲವೇ ಎಂದು ಸಾ.ರಾ.ಮಹೇಶ್ ಪ್ರಶ್ನಿಸಿದರು.

ಇವರ ಬಹುಮತವೇ ಅನುಮಾನ: ಅನರ್ಹರನ್ನು ಮತದಾರರ ಪಟ್ಟಿಯಿಂದ ಕೈ ಬಿಡುವ ಬಗ್ಗೆ ಇವರು ಆತಂಕಗೊಳ್ಳುವುದನ್ನು ನೋಡಿದರೆ 2023 ರ ಚುನಾವಣೆಯಲ್ಲಿ ಇವರು ಬಹುಮತ ಪಡೆದಿರುವ ಬಗ್ಗೆ ಅನುಮಾನ ಬರುತ್ತದೆ.

ಮೈಸೂರಿನ ಕೆಆರ್.ನಗರ ವಿಧಾನಸಭಾ ಕ್ಷೇತ್ರ ಒಂದರಲ್ಲೆ 18 ಸಾವಿರ ಮತದಾರರಿಗೆ ವಿಳಾಸವಿಲ್ಲ, ಆಧಾರವಿಲ್ಲ. ಇದನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಿದರೆ ಚುನಾವಣೆಯಲ್ಲಿ ಇವರು ಗೆಲುವು ಸಾಧಿಸಿರುವ ಬಗ್ಗೆ ಸಂಶಯಗಳು ಕಾಡುತ್ತಿವೆ ಎಂದು ಆರೋಪಿಸಿದರು.

ಕಾಂಗ್ರೆಸ್ ನಾಯಕರು ಭೂ ಒತ್ತುವರಿ ಮಾಡಿದ್ದಾರೆ: ಬಿಡದಿಯ ಕೇತುಗಾನಹಳ್ಳಿಯಲ್ಲಿ ಹೆಚ್.ಡಿ.ಕುಮಾರಸ್ವಾಮಿ ಅವರು ಕಳೆದ 40 ವರ್ಷದ ಹಿಂದೆ ಜಮೀನು ಖರೀದಿಸಿದ್ದಾರೆ. ಈ ಸಂಬಂಧ ಸೇಲ್ ಡೀಡ್ ಸೇರಿದಂತೆ ಸೂಕ್ತ ದಾಖಲಾತಿ ಇದೆ. ಆದರೂ ಒತ್ತುವರಿಯಾಗಿದೆ ಎಂಬ ದ್ವೇಷ ರಾಜಕಾರಣದಿಂದ ಎಸ್‌ಐಟಿಯಿಂದ ತನಿಖೆ ಮಾಡಿಸುತ್ತಿದ್ದಾರೆ. ಬಹಳಷ್ಟು ಕಾಂಗ್ರೆಸ್ ನಾಯಕರು ಸಹ ಭೂ ಒತ್ತುವರಿ ಆರೋಪ ಎದುರಿಸುತ್ತಿದ್ದಾರೆ. ಈ ಬಗ್ಗೆ ಏಕೆ ತನಿಖೆ ಮಾಡಲಿಲ್ಲ ಎಂದು ಸಾ.ರಾ.ಮಹೇಶ್ ಪ್ರಶ್ನೆ ಮಾಡಿದರು.

ಅನರ್ಹರ ಕೈಬಿಟ್ಟರೆ ಕಾಂಗ್ರೆಸ್‌ಗೇಕೆ ಚಿಂತೆ: ಈ ವೇಳೆ ಮಾತನಾಡಿದ ಜೆಡಿಎಸ್ ಜಿಲ್ಲಾಧ್ಯಕ್ಷ ಅಶ್ವಿನ್ ಕುಮಾರ್, ಈಗಾಗಲೇ ಎಸ್‌ಐಆರ್ ಪ್ರಕ್ರಿಯೆ ಆರಂಭವಾಗಿದ್ದು, ಮ್ಯಾಪಿಂಗ್ ಮಾಡಲಾಗುತ್ತಿದೆ. ಮೈಸೂರು ಜಿಲ್ಲೆಯಲ್ಲಿ ಇನ್ನು ಮೂರು ಲಕ್ಷ ಮ್ಯಾಪಿಂಗ್ ಮಾಡಬೇಕಿದೆ. ಅನರ್ಹರಿದ್ದರೆ ಮತದಾರರ ಪಟ್ಟಿಯಿಂದ ಕೈ ಬಿಡುತ್ತಾರೆ. ಇದಕ್ಕೆ ಕಾಂಗ್ರೆಸ್ ನಾಯಕರು ಏಕೆ ಚಿಂತೆ ಮಾಡಬೇಕು ಎಂದು ಕೇಳಿದರು.

ಮಾತಿನ ಮೇಲೆ ಹಿಡಿತವಿರಲಿ: ತರುವಾಯ ಮಾತನಾಡಿದ ವಿಧಾನಪರಿಷತ್ ಸದಸ್ಯ ಕೆ. ವಿವೇಕಾನಂದ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಬಗ್ಗೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಹಗುರವಾಗಿ ಹೇಳಿಕೆ ನೀಡಿದ್ದಾರೆ. ಮಾತನಾಡಲು ಸ್ವಾತಂತ್ರ್ಯವಿದೆ ಎಂದು ಸ್ವೇಚ್ಛೆಯಾಗಿ ವರ್ತಿಸಬಾರದು. ಲಕ್ಷ್ಮಣ್ ಅವರು ಮುಂದಾದರೂ ಮಾತಿನ ಮೇಲೆ ನಿಗಾ ಇಟ್ಟು ಮಾತನಾಡಲಿ ಎಂದು ಸಲಹೆ ನೀಡಿದರು.

ರೈತರಿಗಾಗುವ ಅನ್ಯಾಯ ಪ್ರಶ್ನಿಸಬಾರದೆ: ನಂತರ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಬಿಡದಿಯ ಈಗಲ್ ಟನ್ ರೆಸಾರ್ಟ್ ಗಾಗಿ 10 ಕೋಟಿ ನೀಡಿ ಭೂಮಿ ಖರೀದಿ ಮಾಡಿದ್ದಾರೆ. ಆದರೆ, ಈಗ ಅದೇ ಭೂಮಿಯನ್ನು ಕೇವಲ ಎರಡು ಕೋಟಿಗೆ ಖರೀದಿ ಮಾಡುತ್ತಿದ್ದಾರೆ. ಈ ಬಗ್ಗೆ ಯಾರಾರೂ ಪ್ರಶ್ನೆ ಮಾಡಬಾರದೆ, ರೈತರಿಗೆ ಆಗುವ ಅನ್ಯಾಯ ತಡೆಯಬಾರದೆ ಎಂದು ಪ್ರಶ್ನಿಸಿದರು.

ಜೆಡಿಎಸ್ ನಗರಾಧ್ಯಕ್ಷ ಎಸ್‌ಬಿಎಂ ಮಂಜು, ವಕ್ತಾರ ರವಿಚಂದ್ರ, ಮಾಜಿ ಮೇಯರ್ ಆರ್.ಲಿಂಗಪ್ಪ, ಮಾಜಿ ಉಪ ಮೇಯರ್ ಕೃಷ್ಣ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕಾಂಗ್ರೆಸ್ ನಾಯಕರ ಐಷಾರಾಮಿ ಬಂಗಲೆ, ಆಸ್ತಿ– ಪಾಸ್ತಿ ವಿವರ ಬಹಿರಂಗಪಡಿಸುವೆ

ನಾವು ತುಂಬಾ ಪ್ರಾಮಾಣಿಕರು ಎಂದು ಕಾಂಗ್ರೆಸ್ ನಾಯಕರು ಬೀಗಬೇಕಿಲ್ಲ. ಕಾಂಗೆಸ್ಸಿಗರ ಐಷಾರಾಮಿ ಬಂಗಲೆ, ಆಸ್ತಿ– ಪಾಸ್ತಿಯನ್ನು ನಾನೆ ಬಹಿರಂಗ ಮಾಡುತ್ತೇನೆ. ಇದು ನಿಜವಲ್ಲ ಎಂದು ವಾದ ಮಾಡುವವರು ನನ್ನೊಡನೆ ಬಹಿರಂಗ ಚರ್ಚೆಗೆ ಬರಲಿ ಎಂದು ಸಾ.ರಾ. ಮಹೇಶ್ ಸವಾಲು ಹಾಕಿದರು. ಇವತ್ತು ಹಣವಿಲ್ಲದೆ ಚುನಾವಣೆ ನಡೆಸುವುದು ಅಸಾಧ್ಯ ನಾನು ಸೇರಿದಂತೆ ಯಾವ ರಾಜಕಾರಣಿಯೂ ಪ್ರಾಮಾಣಿಕರಲ್ಲ. ಆದರೆ ಗಾಜಿನ ಮನೆಯಲ್ಲಿ ಕುಳಿತು ಯಾರೂ ಕಲ್ಲು ಹೊಡೆಯಬಾರದು. ಯಾವ ರಾಜಕಾರಣಿ ಎಷ್ಟು ಆಸ್ತಿ–ಪಾಸ್ತಿ ಮಾಡಿದ್ದಾನೆ ಎಂದು ಮತ ನೀಡುವ ಜನರಿಗೂ ಗೊತ್ತಿದೆ ಎಂದರು.

ಕೆಲವರು ಅಹಿಂದ ಹೆಸರು ಹೇಳಿಕೊಂಡು ಲೂಟಿ ಮಾಡಿದ್ದಾರೆ. ಇವರು ಮಾಡಿರುವ ಆಸ್ತಿ ವಿವರ ಕೇಳಿದರೆ ನಡುಕ ಹುಟ್ಟುತ್ತೆ. ಹೀಗಿರುವಾಗ ಕಾಂಗ್ರೆಸ್ ನಾಯಕರು ಮತ್ತೊಬ್ಬರ ಬಗ್ಗೆ ಟೀಕೆ, ಆರೋಪ ಮಾಡುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು.

ಕುಮಾರಸ್ವಾಮಿ ಅವರ ಆಸ್ತಿ ಬಗ್ಗೆ ಕಾಂಗ್ರೆಸ್ ನಾಯಕರು ಪ್ರಶ್ನೆ ಮಾಡಿದ್ದಾರೆ. ಚಿತ್ರ ಉದ್ಯಮಿಯಾಗಿ ಕುಮಾರಸ್ವಾಮಿ ಅವರು ವೃತ್ತಿ ಬದುಕು ಆರಂಭಿಸಿದರು. ಅವರ ಆದಾಯಕ್ಕೆ ಆಧಾರವಿದೆ. ಆದರೆ ಸಮಾಜವಾದಿ ಮುಖವಾಡ ಧರಿಸಿರುವ ಕಾಂಗ್ರೆಸ್ ನಾಯಕರು ಭತ್ತ,ರಾಗಿ, ಕಡ್ಲೆಕಾಯಿ ಬೆಳೆದು ಆಸ್ತಿ– ಪಾಸ್ತಿ ಮಾಡಿದ್ದಾರೆಯೇ? ಎಂದರು. ನಾನು ಮೂಲತಃ ರಿಯಲ್ ಎಸ್ಟೇಟ್ ವ್ಯವಹಾರದವನು. ಆಸ್ತಿಗಳನ್ನು ಖರೀದಿ ಮಾಡಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದೇ ನನ್ನ ವ್ಯವಹಾರ. ಆದರೆ ಈ ಯಾವುದೇ ವ್ಯವಹಾರವಿಲ್ಲದೆ ಕಾಂಗ್ರೆಸ್ ನಾಯಕರು ಯಾವ ರೀತಿ ಕೋಟ್ಯಾಂತರ ಮೌಲ್ಯದ ಆಸ್ತಿ ಮಾಡಿದ್ದಾರೆ ಎಂದು ಸಾ.ರಾ.ಮಹೇಶ್ ಪ್ರಶ್ನಿಸಿದರು.

ಜೂ.2ರೊಳಗೆ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ನಿರ್ಣಯ ಕೈಗೊಳ್ಳಿ!

ಇಲ್ಲದಿದ್ದರೆ ಪಾಲಿಕೆ ವಜಾ ಮಾಡಿ: ವಾಟಾಳ್ ಎಚ್ಚರಿಕೆ



ಬೆಳಗಾವಿ: ಜೂನ್ 2ರೊಳಗೆ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಮತ್ತು ಮಹಾಜನ್ ವರದಿ ಜಾರಿಗೆ ತರುವ ನಿಟ್ಟಿನಲ್ಲಿ ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ನಿರ್ಣಯ ಕೈಗೊಳ್ಳ ಬೇಕು. ಇಲ್ಲದಿದ್ದರೆ ಜೂನ್ 4ರಂದು ಬೆಂಗಳೂರಿನಲ್ಲಿ ಸಭೆ ಕರೆದು, ಅಖಂಡ ಕರ್ನಾಟಕ ಬಂದ್‌ಗೆ ಕರೆ ನೀಡಲಾಗುವುದು ಎಂದು ಹಿರಿಯ ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಎಚ್ಚರಿಕೆ ನೀಡಿದರು.

ಬೆಳಗಾವಿ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಸ್ಥಾಪಿಸಿರುವ ಹಲ್ಮಿಡಿ ಶಾಸನದ ಪ್ರತಿಕೃತಿಗೆ ಮಂಗಳವಾರ ಪೂಜೆ ನೆರವೇರಿಸಿದ ಬಳಿಕ ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, ಮಹಾನಗರ ಪಾಲಿಕೆ ಯಾವ ನೆಲದಲ್ಲಿದೆ ಎಂಬುದನ್ನು ಅಧಿಕಾರದಲ್ಲಿರುವವರು ಅರ್ಥ ಮಾಡಿಕೊಳ್ಳಬೇಕು. ಬೆಳಗಾವಿ ಕನ್ನಡಿಗರ ಗಂಡು ಮೆಟ್ಟಿದ ನೆಲ. ಇದು ಕರ್ನಾಟಕದ ಅವಿಭಾಜ್ಯ ಅಂಗ. ಮಹಾಜನ್ ವರದಿ ಜಾರಿ ಆಗಲೇಬೇಕು ಎಂದು ನಿರ್ಣಯ ಮಾಡಬೇಕು. ಮಾಡದಿದ್ದರೆ ಬೆಳಗಾವಿಯಲ್ಲಿ ಕಂಡು ಕೇಳರಿಯದ ರೀತಿಯ ಕ್ರಾಂತಿ ಆಗುತ್ತದೆ. ಇವತ್ತಿನಿಂದ ಒಂದು ವಾರದೊಳಗೆ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ, ಮಹಾಜನ್ ವರದಿ ಜಾರಿಗೆ ತರಬೇಕು ಎಂದು ನಿರ್ಣಯ ತೆಗೆದುಕೊಳ್ಳಬೇಕು. ಅಲ್ಲಿಯವರೆಗೆ ನಾವು ಗಡುವು ಕೊಡುತ್ತೇವೆ. ಆಗಲೂ ನೀವು ಎಚ್ಚೆತ್ತುಕೊಳ್ಳದಿದ್ದರೆ, ಜೂನ್4ರಂದು ಬೆಂಗಳೂರಲ್ಲಿ ಎಲ್ಲಾ ಕನ್ನಡ ಸಂಘಟನೆಗಳು ಸಭೆ ಸೇರುತ್ತೇವೆ. ಪ್ರವೀಣ ಶೆಟ್ಟಿ, ಶಿವರಾಮೇಗೌಡ, ನಾರಾಯಣಗೌಡ ಸೇರಿ ಎಲ್ಲ ಬಣಗಳ ಕನ್ನಡ ಸಂಘಟನೆಗಳ ಮುಖಂಡರನ್ನು ಸಭೆಗೆ ಆಹ್ವಾನಿಸುತ್ತೇವೆ. ಅಲ್ಲಿ ಅಖಂಡ ಕರ್ನಾಟಕ ಬಂದ್‌ಗೆ ಕರೆ ಕೊಡುತ್ತೇವೆ ಎಂದರು.

ಬಂದ್ ದಿನ ನಾವು ಬೆಳಗಾವಿಗೆ ಬರುತ್ತೇವೆ. ಬೆಳಗಾವಿಯಿಂದಲೇ ಬಹುದೊಡ್ಡ ಕ್ರಾಂತಿ ಆರಂಭವಾಗಲಿದೆ. ಹೊಸ ಕ್ರಾಂತಿಗೆ ದಿಕ್ಸೂಚಿ ಸಿಗಲಿದೆ. ಇಲ್ಲಿಂದ ಕ್ರಾಂತಿಯ ಕಹಳೆ ಮೊಳಗಲಿದೆ. ಇಡೀ ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಜನರು ಬೆಳಗಾವಿ ಜೊತೆಗೆ ನಿಲ್ಲಬೇಕು. ನಮ್ಮ ದೇಹದಲ್ಲಿ ರಕ್ತದ ಕೊನೆ ಹನಿ ಇರೋವರೆಗೂ ಹೋರಾಡಲು ನಾವು ಸಿದ್ಧರಿದ್ದೇವೆ ಎಂದು ವಾಟಾಳ್ ನಾಗರಾಜ ಸ್ಪಷ್ಟಪಡಿಸಿದರು.

ಮುಂದೆ ನಾನೇ ಮುಖ್ಯಮಂತ್ರಿ; ಪತ್ರಕರ್ತರಿಗೂ ಸಚಿವ ಸ್ಥಾನ!

ಈ ಹೋರಾಟದಿಂದ ಮುಂದೆ ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬರುತ್ತದೆ. ಕನ್ನಡ ಹೆಸರಲ್ಲಿ ಸರ್ಕಾರ ಬರಬೇಕು. ಆಗ ಸುವರ್ಣ ವಿಧಾನಸೌಧದಲ್ಲಿ ಕನ್ನಡ ಸಂಘಟನೆಗಳಿಗೆ ಒಂದು ಕೊಠಡಿ ನೀಡಬೇಕು. ಪ್ರತಿ ಕನ್ನಡ ಸಂಘಟನೆಗೆ ವರ್ಷಕ್ಕೆ 1 ಕೋಟಿ ಅನುದಾನ ಘೋಷಿಸಬೇಕು. ಪ್ರೆಸ್ ಕ್ಲಬ್‌ಗೆ 5 ಕೋಟಿ ಕೊಡಬೇಕು. ಇದು ಯಾವಾಗ ಸಾಧ್ಯ ಆಗುತ್ತದೆ ಎಂದರೆ ನಾನು ಮುಖ್ಯಮಂತ್ರಿ ಆಗಬೇಕು. ಮುಂದೆ ನಾನೇ ಸಿಎಂ ಆಗೋದು. ನಮ್ಮ ಜೊತೆಗಿರುವ ಕನ್ನಡ, ರೈತಪರ ಸಂಘಟನೆ ಹಾಗೂ ಪತ್ರಕರ್ತರಿಗೂ ಸಚಿವ ಸ್ಥಾನ ಕೊಡುತ್ತೇನೆ ಎಂದು ವಾಟಾಳ್ ನಾಗರಾಜ ಹಾಸ್ಯ ಚಟಾಕಿ ಹಾರಿಸಿದರು. ಈ ವಿಚಾರವಾಗಿ ರಾಜ್ಯ ಸರ್ಕಾರದ ಜೊತೆಗೂ ನಾವು ಮಾತನಾಡುತ್ತೇವೆ. ಸಿದ್ದರಾಮಯ್ಯನವರೇ ನೀವು ಏನು ಕಣ್ಮುಚ್ಚಿ ಕುಳಿತಿದ್ದೀರಾ. ಇದೇನು ಹುಡುಗಾಟವೇ. ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಅಂತಾ ನಿರ್ಣಯ ಮಾಡಿಸಿ, ಇಲ್ಲವಾದರೆ ಮಹಾನಗರ ಪಾಲಿಕೆ ವಜಾ ಮಾಡಿ ಅಂತಾ ವಾಟಾಳ್ ನಾಗರಾಜ್ ಒತ್ತಾಯಿಸಿದರು.

ಹಲ್ಮಿಡಿ ಶಾಸನದ ಪ್ರತಿಕೃತಿಗೆ ಸಪ್ತನದಿಗಳ ನೀರಿನಿಂದ ಅಭಿಷೇಕ: ಜಿಲ್ಲಾಧಿಕಾರಿಗಳ ಕಾರ್ಯಾಲಯದ ಆವರಣದಲ್ಲಿ ನೂತನವಾಗಿ ಪ್ರತಿಷ್ಠಾಪಿಸಿರುವ ಕನ್ನಡದ ಮೊದಲ ಹಲ್ಮಿಡಿ ಶಾಸನದ ಪ್ರತಿಕೃತಿಗೆ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಹಾಲು ಮತ್ತು ಸಪ್ತನದಿಗಳಿಂದ ತಂದಿದ್ದ ನೀರಿನಿಂದ ಅಭಿಷೇಕ ಮಾಡಲಾಯಿತು. ಕನ್ನಡಪರ ಸಂಘಟನೆಗಳ ಮಹಿಳಾ ಕಾರ್ಯಕರ್ತೆಯರು ತಲೆ ಮೇಲೆ ಹೊತ್ತು ತಂದ ಕೊಡದಲ್ಲಿದ್ದ ಸಪ್ತನದಿಗಳ ನೀರನ್ನು ಶಾಸನದ ಪ್ರತಿಕೃತಿ ಮೇಲೆ ಹಾಕಿದರು. ಬಳಿಕ ಪೂಜೆ ಸಲ್ಲಿಸಲಾಯಿತು. ಈ ವೇಳೆ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಸಾ.ರಾ. ಗೋವಿಂದು, ಅಶೋಕ ಚಂದರಗಿ, ಮಹಾದೇವ ತಳವಾರ, ಶ್ರೀನಿವಾಸ ತಾಳೂಕರ್, ವಾಜೀದ್ ಹಿರೇಕೊಡಿ ಸೇರಿ ಮತ್ತಿತರರು ಇದ್ದರು.

ವಾಟಾಳ್, ಗೋವಿಂದು ಪೊಲೀಸ್ ವಶಕ್ಕೆ: ಇದಾದ ನಂತರ ಜಿಲ್ಲಾಧಿಕಾರಿ ಕಚೇರಿಯಿಂದ ಮಹಾನಗರ ಪಾಲಿಕೆಗೆ ಮುತ್ತಿಗೆ ಹಾಕಲು ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಕನ್ನಡ ಹೋರಾಟಗಾರರು ಮುಂದಾದರು. ಈ ವೇಳೆ ಅವರನ್ನು ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಪೊಲೀಸರು ತಡೆದರು. ಆಗ ಕೆಲ ಹೋರಾಟಗಾರರು ರಸ್ತೆ ಮೇಲೆ ಮಲಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಪೊಲೀಸರೊಂದಿಗೆ ಪ್ರತಿಭಟನಾನಿರತರು ವಾಗ್ವಾದ ಮಾಡಿದರು. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದ್ದಂತೆ ವಾಟಾಳ್ ನಾಗರಾಜ, ಸಾ.ರಾ.ಗೋವಿಂದು ಸೇರಿ ಮತ್ತಿತರ ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದರು.

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 26– ಹಿಂದುಳಿದ ಕಲ್ಯಾಣ ವರ್ಗಗಳ ಇಲಾಖೆ ವತಿಯಿಂದ ಮೆಟ್ರಿಕ್ ನಂತರ (ಪಿ.ಯು.ಸಿ ವ್ಯಾಸಂಗ ಮಾಡುತ್ತಿರುವ) ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಪ್ರವರ್ಗ–1, ಎಸ್.ಸಿ & ಎಸ್.ಟಿ.ರೂ. 2.50 ಲಕ್ಷ ಹಾಗೂ ಪ್ರವರ್ಗ–2ಎ, 2ಬಿ, 3ಎ, 3ಬಿ ರೂ. 1.00 ಲಕ್ಷದೊಳಗಿರಬೇಕು. ಪ್ರವೇಶ ಬಯಸುವ ವಿದ್ಯಾರ್ಥಿಗಳು ಜೂನ್ 15 ರೊಳಗೆ ಇಲಾಖೆಯ https://shp.karnataka.gov.in/bcwd ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ತಾಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ https://bcwd.karnataka.gov.in/ನ್ನು ಸಂಪರ್ಕಿಸಬಹುದಾಗಿದೆ. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@gmail.com ಇ–ಮೇಲ್ ಮುಖಾಂತರ ಅಥವಾ ಜಿಲ್ಲಾ/ತಾಲೂಕು ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯ ವಾಣಿ ಸಂಖ್ಯೆ: 8050770004 ನ್ನು ಸಂಪರ್ಕಿಸಬಹುದೆಂದು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಲ್ಯಾಣಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಎಚ್.ಡಿ ಪದವಿ



ಮೈಸೂರು: ಡಾ. ಕೆ.ವಿ. ಸುರೇಶ ಅವರ ಮಾರ್ಗದರ್ಶನದಲ್ಲಿ ಎಸ್.ಎಂ.ಸುಮಾ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಡಿಇಎಲ್ ಇಡಿ ದಾಖಲಾತಿ ಪ್ರಕ್ರಿಯೆ ಆರಂಭ

ಮೈಸೂರು, ಮೇ 26– 2026–27ನೇ ಸಾಲಿನ ಡಿಇಎಲ್ ಇಡಿ (ಟಿ.ಸಿ.ಹೆಚ್ ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ) ದಾಖಲಾತಿ ಪ್ರಕ್ರಿಯೆಯನ್ನು ಪ್ರಾರಂಭಗೊಂಡಿದ್ದು, ದ್ವಿತೀಯ ಪಿ.ಯು.ಸಿ. ಪರೀಕ್ಷಾ ಫಲಿತಾಂಶದಲ್ಲಿ ಸಾಮಾನ್ಯ ಅಭ್ಯರ್ಥಿಗಳು ಶೇ.50 ರಷ್ಟು ಪ.ಜಾತಿ, ಪ.ಪಂಗಡ ವಿದ್ಯಾರ್ಥಿಗಳಿಗೆ ಶೇ.45 ರಷ್ಟು ಅಂಕಗಳು ಪಡೆದಿರಬೇಕು ಮತ್ತು ಪಿಯುಸಿ ಪೂರಕ ಪರೀಕ್ಷೆಗೆ ಹಾಜರಾಗಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೂ ಅವಕಾಶ ಇರುತ್ತದೆ.

ಸಾಮಾನ್ಯ ವಿದ್ಯಾರ್ಥಿಗಳಿಗೆ ವಾರ್ಷಿಕ ಶುಲ್ಕ ಕೇವಲ ರೂ.3065/–ಮಾತ್ರ ಇದ್ದು, ಪ.ಜಾತಿ, ಪ.ಪಂಗಡದ ವಿದ್ಯಾರ್ಥಿಗಳಿಗೆ ಯಾವುದೇ ಶುಲ್ಕ ಇರುವುದಿಲ್ಲ. ವಿದ್ಯಾರ್ಥಿವೇತನ ಶುಲ್ಕ ಮರುಪಾವತಿಗೆ ಅವಕಾಶವಿರುತ್ತದೆ ಹಾಗೂ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ರೂ.25000/– ಗಳ ವಿದ್ಯಾರ್ಥಿವೇತನ ಇರುತ್ತದೆ. ಡಿಇಎಲ್ ಇಡಿ ಕೋರ್ಸ್ ಪೂರ್ಣಗೊಂಡ ನಂತರ ಖಾಸಗಿ ಶಾಲೆಯಲ್ಲಿ ಉದ್ಯೋಗಾವಕಾಶ ಕಲ್ಪಿಸಿಕೊಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(ಡಯಟ್) ವಸಂತ್‌ಮಹಲ್ ಕಛೇರಿಯ ಪಿ.ಎಸ್.ಟಿ.ಇ. ನೋಡಲ್ ಅಧಿಕಾರಿಗಳಾದ ಚಂದ್ರಶೇಖರ ಕೆ.ಹೆಚ್ ಮೊಬೈಲ್ ನಂಬರ್: 8050033244 & ನಂಜುಂಡ ಆರಾಧ್ಯ, ಉಪನ್ಯಾಸಕರು ಮೊಬೈಲ್ ನಂಬರ್: 8105949644 ಸಂಪರ್ಕಿಸಬಹುದೆಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ (ಡಯಟ್) ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕದ ಶಾಸಕರು, ಎಂಎಲ್‌ಸಿಗಳಿಗೆ ಕ್ಯಾಬಿನೆಟ್ ದರ್ಜೆ ಪ್ರಶ್ನಿಸಿ ಅರ್ಜಿ: ವಿಚಾರಣೆಗೆ ಸುಪ್ರೀಂ ನಕಾರ



ನವದೆಹಲಿ: ವಿವಿಧ ಮಂಡಳಿಗಳು ಮತ್ತು ನಿಗಮಗಳ ಅಧ್ಯಕ್ಷರಾಗಿ ಶಾಸಕರು ಮತ್ತು ಎಂಎಲ್‌ಸಿಗಳು ಸೇರಿದಂತೆ 42 ಮಂದಿಗೆ ಕ್ಯಾಬಿನೆಟ್ ದರ್ಜೆ ನೀಡುವ ಕರ್ನಾಟಕ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಮಂಗಳವಾರ ನಿರಾಕರಿಸಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜೋಯ್ಮಲ್ಯ ಬಾಗ್ಚಿ ಅವರ ಪೀಠವು ಅರ್ಜಿದಾರರಿಗೆ ಹೈಕೋರ್ಟ್‌ನಲ್ಲಿ ಪರಿಶೀಲನಾ ಅರ್ಜಿ ಸಲ್ಲಿಸುವಂತೆ ಸೂಚಿಸಿದೆ. ಅರ್ಜಿದಾರರಿಗೆ ಹೈಕೋರ್ಟ್‌ನಲ್ಲಿ ಪರಿಶೀಲನಾ ಅರ್ಜಿ ಸಲ್ಲಿಸುವ ಸ್ವಾತಂತ್ರ್ಯದೊಂದಿಗೆ ನಾವು ವಿಲೇವಾರಿ ಮಾಡುತ್ತೇವೆ ಎಂದು ಪೀಠ ಹೇಳಿದೆ.

ಅರ್ಜಿದಾರರ ಪರವಾಗಿ ಹಾಜರಾದ ಹಿರಿಯ ವಕೀಲ ಕೆ. ಪರಮೇಶ್ವರ್, ಈ ವಿಷಯವನ್ನು ಹೈಕೋರ್ಟ್ ಗಂಭೀರವಾಗಿ ಪರಿಗಣಿಸಲಿಲ್ಲ ಎಂದು ವಾದಿಸಿದರು. ಈ ಇಲಾಖೆಗೆ ತನ್ನದೇ ಆದ ಹಣ ವಿಲ್ಲ. ಇಲಾಖೆಗೆ ಬರುವ ಎಲ್ಲಾ ಹಣವೂ ಭಾರತದ ಏಕೀಕೃತ ನಿಧಿಯಿಂದಲೇ ಬರುತ್ತದೆ ಎಂದು ಪೀಠದ ಗಮನಕ್ಕೆ ತಂದರು.

ಸುಪ್ರೀಂ ಕೋರ್ಟ್ ಸುರಿ ಪಾಯಲಾ ಅವರು ದಾಖಲಿಸಿದ ಅರ್ಜಿಯು ವಿಚಾರಣೆ ಮಾಡುತ್ತಿತ್ತು. ಸುರಿ ಪಾಯಲಾ ಅವರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಕರ್ನಾಟಕ ಹೈಕೋರ್ಟ್ ಮಾರ್ಚ್ 4ರಂದು ನೀಡಿದ ಆದೇಶವನ್ನು ಪ್ರಶ್ನಿಸಿದ್ದರು. ಈ ಬಗ್ಗೆ ವಿಚಾರಣೆ ನಡೆಸಿದ್ದ ಹೈಕೋರ್ಟ್ ಅವರ ಅರ್ಜಿಯನ್ನು ತಿರಸ್ಕರಿಸಿತ್ತು. ಹೀಗಾಗಿ ಅವರು ಹೈಕೋರ್ಟ್ ತೀರ್ಪಿನ ವಿರುದ್ಧ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂಕೋರ್ಟ್ ವಿಚಾರಣೆ ನಡೆಸುತ್ತಿದೆ. ಹೀಗಾಗಿ ಈ ಅರ್ಜಿಯನ್ನು ವಜಾಗೊಳಿಸಿದೆ.

ಪ್ರಸ್ತುತ ಅರ್ಜಿಯು ಸಂಪೂರ್ಣವಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಮಾತ್ರವಲ್ಲದೇ, ಅರ್ಜಿದಾರರ ಕೆಲವು ಪದವಿಗಳಿಗೆ ಆಸಕ್ತಿಯಿಂದಲೂ ಪ್ರೇರಿತವಾಗಿದೆ ಎಂಬ ವಾದವು ಸಹ ಯೋಗ್ಯ ಎಂಬುದನ್ನು ನಾವು ಸಹ ಕಂಡುಕೊಂಡಿದ್ದೇವೆ. ಸಾರ್ವಜನಿಕ ಹಿತದೃಷ್ಟಿಯಿಂದ ಮೊಕದ್ದಮೆಯನ್ನು ಸಲ್ಲಿಸುವ ಅರ್ಜಿದಾರರು ಈ ಮೊಕದ್ದಮೆಯಲ್ಲಿ ತಮ್ಮ ಸಂಭವನೀಯ ಹಿತಾಸಕ್ತಿಯನ್ನು ಬಹಿರಂಗಪಡಿಸುವುದು ಕಡ್ಡಾಯವಾಗಿದೆ ಎಂಬುದು ಸ್ಥಿರವಾದ ನಿಲುವಾಗಿದೆ. ಈ ಪ್ರಕರಣದಲ್ಲಿ ಅರ್ಜಿದಾರರು ಅಗತ್ಯವಿರುವ ಪೂರ್ಣ ಮಾಹಿತಿ ಬಹಿರಂಗಪಡಿಸುವಿಕೆಯನ್ನು ಮಾಡಿಲ್ಲ ಎಂದು ಹೈಕೋರ್ಟ್ ಹೇಳಿತ್ತು.

ಈ ಶಾಸಕರಿಗೆ ಕ್ಯಾಬಿನೆಟ್ ಸ್ಥಾನಮಾನ ನೀಡುವುದರಿಂದ ಹೆಚ್ಚುವರಿ ವೇತನ, ಅಧಿಕೃತ ವಾಹನಗಳು, ಚಾಲಕರು, ಇಂಧನ ಭತ್ಯೆ, ಮನೆ ಬಾಡಿಗೆ ಭತ್ಯೆ ಮತ್ತು ವೈದ್ಯಕೀಯ ಪರಿಹಾರಗಳಂತಹ ಹಣಕಾಸಿನ ಲಾಭಗಳು ದೊರೆಯುತ್ತವೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ. ಅಷ್ಟೇ ಅಲ್ಲ ಇದು ಲಾಭದಾಯಕ ಹುದ್ದೆ ಆಗಿದೆ ಮತ್ತು ಸಂವಿಧಾನದ 191ನೇ ಅನುಚ್ಛೇದವನ್ನು ಉಲ್ಲಂಘಿಸುವುದಾಗಿ ಹೇಳಲಾಗಿದೆ. ಈ ಅನುಚ್ಛೇದವು ಶಾಸಕರನ್ನು ಅಂತಹ ಹುದ್ದೆಗಳನ್ನು ಹೊಂದುವುದರಿಂದ ಅನರ್ಹಗೊಳಿಸುತ್ತದೆ ಎಂದು ಅರ್ಜಿಯಲ್ಲಿ ವಾದಿಸಲಾಗಿದೆ.

ವಿಧಾನಸಭೆಯ ಸದಸ್ಯರು (ಶಾಸಕರು) ಮತ್ತು ವಿಧಾನ ಪರಿಷತ್ತಿನ ಸದಸ್ಯರನ್ನು ವಿವಿಧ ಮಂಡಳಿಗಳು ಮತ್ತು ನಿಗಮಗಳ ಅಧ್ಯಕ್ಷರನ್ನಾಗಿ ನೇಮಿಸುವುದರಿಂದ ಯಾವುದೇ ಸಮಸ್ಯೆಯಾಗುತ್ತಿರಲಿಲ್ಲ ಎಂದು ಅರ್ಜಿದಾರರು ಪ್ರತಿಪಾದಿಸಿದರು. ಆದರೆ ಅವರಿಗೆ ಸಂಪುಟ ಸ್ಥಾನಮಾನ ನೀಡುವುದು ಸಂವಿಧಾನದ 164(1A) ವಿಧಿಯ ಉಲ್ಲಂಘನೆಯಾಗಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

2025 ಜನವರಿ 26 ರಂದು ರಾಜ್ಯ ಸರ್ಕಾರವು ಈಗಾಗಲೇ ಸ್ಥಾನಮಾನವನ್ನು ಹೊಂದಿದ್ದ ಎಂಟು ಶಾಸಕರ ಜೊತೆಗೆ 34 ಶಾಸಕರಿಗೆ ಸಂಪುಟ ದರ್ಜೆ ಸ್ಥಾನಮಾನ ನೀಡುವ ಆದೇಶವನ್ನು ಹೊರಡಿಸಿದೆ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ. ಇದು ಇಷ್ಟು ದೊಡ್ಡ ಸಂಖ್ಯೆಯ ಶಾಸಕರನ್ನು ಸಂಪುಟ ದರ್ಜೆಯ ಹುದ್ದೆಗಳಿಗೆ ನೇಮಿಸುವ ಒಂದೇ ಸರ್ಕಾರಿ ಅಧಿಸೂಚನೆಯ ಬಗ್ಗೆ ಕಳವಳನ್ನುಂಟು ಮಾಡಿದೆ.

ಸಂವಿಧಾನದ 102, 191 ಮತ್ತು 164ನೇ ವಿಧಿಗಳನ್ನು ಹಾಗೂ ಕರ್ನಾಟಕ ಶಾಸಕಾಂಗ (ಅನರ್ಹತೆ ತಡೆಗಟ್ಟುವಿಕೆ) ಕಾಯ್ದೆ, 1956 ಮತ್ತು ಜನ ಪ್ರಾತಿನಿಧ್ಯ ಕಾಯ್ದೆ, 1951ರ ಸೆಕ್ಷನ್ 10 ಅನ್ನು ಉಲ್ಲಂಘಿಸುವ ಆಧಾರದ ಮೇಲೆ ಸಂಪುಟ ದರ್ಜೆಯ ನೇಮಕಾತಿಗಳನ್ನು ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ.